ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೇ 4 ಭಾನುವಾರ 2025
46
ಸಂಪುಟ: 46 | ಸಂಚಿಕೆ: 18 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಚಾಮುಂಡೇಶ್ವರಿ ದೇವಸ್ಥಾನದ 100 ಮೀಟರ್ ವ್ಯಾಪ್ತಿ
ವ್ಯಾಪಾರ–ವಹಿವಾಟು ನಿಷಿದ್ಧ



ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಆದೇಶ



"ದಿನದಿಂದ ದಿನಕ್ಕೆ ದೇವರ ದರ್ಶನಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಅವರಿಗೆ ಮೂಲ ಸೌಲಭ್ಯ ಅಭಿವೃದ್ಧಿಪಡಿಸಿ ಅನುಕೂಲ ಕಲ್ಪಿಸಬೇಕಾಗಿರುವುದರಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯದ ಸುತ್ತ 100 ಮೀ. ವ್ಯಾಪ್ತಿಯಲ್ಲಿ ಅಂಗಡಿ–ಮುಂಗಟ್ಟು ಹೊಂದಿರುವವರು ಸ್ಥಳಾಂತರಗೊಳ್ಳಬೇಕು.

–ಎಂ.ಜೆ.ರೂಪಾ, ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮೈಸೂರು, ಮೇ 3(ಆರ್‌ಕೆ)– ಮೈಸೂರಿನ ಪ್ರಸಿದ್ಧ ಪ್ರವಾಸಿತಾಣ ಹಾಗೂ ಧಾರ್ಮಿಕ ಕೇಂದ್ರವಾದ ಚಾಮುಂಡಿಬೆಟ್ಟದ ತಾಯಿ ಚಾಮುಂಡೇಶ್ವರಿ ದೇವಸ್ಥಾನದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ವ್ಯಾಪಾರ–ವಹಿವಾಟು ನಡೆಸುವಂತಿಲ್ಲ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಈ ಸಂಬಂಧ ನಿಷೇಧಾಜ್ಞೆ ಹೊರಡಿಸಿದ್ದು, ಮೇ 1ರಿಂದಲೇ ಆದೇಶ ಜಾರಿಗೆ ಬಂದಿದೆ.

ಸಾರ್ವಜನಿಕರು, ಭಕ್ತಾದಿಗಳು ಹಾಗೂ ಪ್ರವಾಸಿಗರ ಚಲನ–ವಲನ ದೃಷ್ಟಿಯಿಂದ ಹಾಗೂ ದೇವಾಲಯಕ್ಕೆ ಆಗಮಿಸುವ ಗಣ್ಯರು, ಅತೀ ಗಣ್ಯರು ಚಲಿಸುವ ವಾಹನಗಳಿಗೆ ಅನುಕೂಲವಾಗುವಂತೆ ಈ ಆದೇಶ ಹೊರಡಿಸಲಾಗಿದೆ.

ದೇಶ–ವಿದೇಶದ ಪ್ರವಾಸಿಗರು, ಭಕ್ತಾದಿಗಳಿಗೆ ದೇವರ ದರ್ಶನ ಮಾಡಲು ತೊಂದರೆ ಉಂಟಾಗುತ್ತಿದೆ ಎಂಬ ದೂರುಗಳು ಬಂದಿರುವುದಲ್ಲದೇ, ಗಣ್ಯರು, ಅತೀ ಗಣ್ಯರ ವಾಹನಗಳು ಚಲಿಸಲು ಹಾಗೂ ನಿಲುಗಡೆ ಮಾಡಲು ಸ್ಥಳಾವಕಾಶದ ಕೊರತೆಯಾಗಿರುವುದು ಕಂಡುಬಂದ ಕಾರಣ ಈ ಕ್ರಮ ಕೈಗೊಂಡಿದ್ದು, ವ್ಯಾಪಾರಸ್ಥರು, ಚಾಮುಂಡಿಬೆಟ್ಟದ ಗ್ರಾಮಸ್ಥರು ಸಹಕರಿಸುವಂತೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ ಕೋರಿದ್ದಾರೆ.

ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಅಂಗಡಿ ತೆರವು ಮಾಡಿ, ಅಮ್ಮನವರ ದರ್ಶನ ಮತ್ತು ಸೇವೆಗೆ ಅನುಕೂಲ ಮಾಡಲು ಸಹಕರಿಸಬೇಕೆಂದು ರೂಪಾ ವ್ಯಾಪಾರಸ್ಥರಲ್ಲಿ ಮನವಿ ಮಾಡಿದ್ದಾರೆ. ಈಗಾಗಲೇ ಎರಡು ಬಾರಿ ವ್ಯಾಪಾರಿಗಳೊಂದಿಗೆ ಸಭೆ ನಡೆಸಿ ವಸ್ತುಸ್ಥಿತಿ ವಿವರಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ದಸರಾ ವೇಳೆ ಕೆಆರ್‌ಎಸ್‌ನಲ್ಲಿ
ಕಾವೇರಿ ಆರತಿ

- ಉಪಮುಖ್ಯಮಂತ್ರಿಗಳೂ ಆದ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಘೋಷಣೆ
- ವಿವಿಧ ಇಲಾಖೆ ಅಧಿಕಾರಿಗಳ ಉನ್ನತ ಸಭೆ ನಂತರ ಪ್ರಕಟ
- ಬೃಂದಾವನದ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ
- ಇದಕ್ಕಾಗಿ ಮಂಡ್ಯ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚನೆ
- ಪ್ರವಾಸಿಗರಿಗೆ ಅಗತ್ಯ ಮೂಲಸೌಕರ್ಯಕ್ಕೆ ಯೋಜನಾ ಪ್ರಾಧಿಕಾರ ರಚನೆ





ಬೆಂಗಳೂರು, ಮೇ 3(ಕೆಎಂಶಿ)–ವಾರಣಾಸಿಯ ಗಂಗಾರತಿ ಮಾದರಿಯಲ್ಲಿ ಮೈಸೂರು ದಸರಾ ವೇಳೆಗೆ ಕನ್ನಂಬಾಡಿ ಅಣೆಕಟ್ಟೆ ಬಳಿ ಕಾವೇರಿ ಆರತಿ ಕಾರ್ಯಕ್ರಮ ನಡೆಯಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪ್ರಕಟಿಸಿದ್ದಾರೆ.

ಕೆಆರ್‌ಎಸ್‌ನ ಬೃಂದಾವನ ಉದ್ಯಾನವನದ ಸಮೀಪ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಹಾಗೂ ಕಾವೇರಿ ಆರತಿ ಕಾರ್ಯಕ್ರಮ ನಡೆಸುವ ಸಂಬಂಧ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮುಜರಾಯಿ ಇಲಾಖೆ ಜೊತೆ ಉನ್ನತ ಮಟ್ಟದ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕಾವೇರಿ ನದಿ ಕರ್ನಾಟಕಕ್ಕೆ ಮಾತ್ರವಲ್ಲದೆ, ಕೇರಳ, ತಮಿಳುನಾಡು, ಪುದುಚೇರಿ ರಾಜ್ಯಗಳ ರೈತರ ಪಾಲಿಗೂ ವರದಾನವಾಗಿದೆ. ಕರ್ನಾಟಕದ ಸಂಸ್ಕೃತಿ ಜೊತೆಗೆ ತಮಿಳುನಾಡು, ಕೇರಳದ ಸಂಸ್ಕೃತಿಯನ್ನು ಅಳವಡಿಸಿಕೊಂಡು ಕಾವೇರಿ ಮಾತೆಗೆ ಆರತಿ ಮಾಡಲಾಗುವುದು.

ಸಮಿತಿ ರಚನೆ: ಪೂಜಾ ಕಾರ್ಯಕ್ರಮ ಕುರಿತು ಮಂಡ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಧಾರ್ಮಿಕ ದತ್ತಿ ಇಲಾಖೆ, ಇದರ ರೂಪರೇಷೆ ಸಿದ್ಧಪಡಿಸಲಿದೆ, ಈ ಮಹತ್ವದ ಕಾರ್ಯಕ್ರಮಕ್ಕೆ ಸರ್ಕಾರ 100 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಪ್ರವಾಸಿಗರ ಆಕರ್ಷಣೆ ಮತ್ತು ಪೂಜಾ ಕೈಂಕರ್ಯಗಳನ್ನು ನಡೆಸಲು ಜಲ ಸಂಪನ್ಮೂಲ ■6ನೇ ಪುಟಕ್ಕೆ



ಕೆಆರ್‌ಎಸ್ ಅಣೆಕಟ್ಟೆಯ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಕೆಳಭಾಗದ ದೂರ ಪ್ರದೇಶದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಇದಕ್ಕಾಗಿ ಪ್ರತ್ಯೇಕ ವೇದಿಕೆಗಳನ್ನು ಸಿದ್ಧಪಡಿಸಲಾಗುವುದು. ಒಮ್ಮೆಗೆ 10,000 ಮಂದಿ ಕಾವೇರಿ ಆರತಿ ವೀಕ್ಷಣೆಗೆ ಅಗತ್ಯ ಸೌಲಭ್ಯ ಕಲ್ಪಿಸಲಾಗುವುದು, ಕಾರ್ಯಕ್ರಮ ವೀಕ್ಷಣೆಗೆ ಕೆಲವೆಡೆ ಉಚಿತ ಅವಕಾಶ ಇದ್ದರೆ, ಮತ್ತೆ ಕೆಲವೆಡೆ ಪ್ರವೇಶ ಶುಲ್ಕ ವಿಧಿಸಲಾಗುತ್ತದೆ.

–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಶೇ.5 ರಿಯಾಯಿತಿಯಡಿ ಏ.1ರಿಂದ 30ರವರೆಗೆ ಮೈಸೂರು ಪಾಲಿಕೆಯಲ್ಲಿ
121.12 ಕೋಟಿ ಆಸ್ತಿ ತೆರಿಗೆ ಸಂಗ್ರಹ

ಕಳೆದ ವರ್ಷಕ್ಕಿಂತ 30 ಕೋಟಿ ಅಧಿಕ ಆದಾಯ



ಮೈಸೂರು, ಮೇ 3(ಆರ್‌ಕೆ)– 2025ರ ಏಪ್ರಿಲ್ ಮಾಹೆಯಲ್ಲಿ ಮೈಸೂರು ಮಹಾನಗರಪಾಲಿಕೆಯಲ್ಲಿ ದಾಖಲೆ ಆಸ್ತಿ ತೆರಿಗೆ ಸಂಗ್ರಹವಾಗಿದೆ.

ಶೇ.5 ರಿಯಾಯಿತಿ ನೀಡಿದ್ದರಿಂದ 2025ರ ಏಪ್ರಿಲ್ 1ರಿಂದ 30ರವರೆಗೆ ಕೇವಲ 30 ದಿನಗಳಲ್ಲಿ ಸಾರ್ವಜನಿಕರು ಬರೋಬ್ಬರಿ 121,12,59,735 ರೂ. ಆಸ್ತಿ ತೆರಿಗೆ ಪಾವತಿಸಿದ್ದಾರೆ. ಎಲ್ಲಾ 9 ವಲಯ ಕಚೇರಿಗಳಲ್ಲಿ 91,948 ಆಸ್ತಿಗಳ ತೆರಿಗೆ ಪಾವತಿಸಿದ್ದು, ಆನ್‌ಲೈನ್‌ನಲ್ಲಿ 39,75,54,608 ರೂ., ಕರ್ನಾಟಕ ಒನ್ ಕೌಂಟರ್‌ನಲ್ಲಿ 17,37,30,529 ರೂ., ಬ್ಯಾಂಕ್ ಕೌಂಟರ್‌ನಲ್ಲಿ 56,18,65,137 ರೂ., ಚೆಕ್ ಮೂಲಕ 7,77,33,236 ರೂ. ಸೇರಿದಂತೆ ಒಟ್ಟು 121,12,59,735 ರೂ.ಗಳನ್ನು ■6ನೇ ಪುಟಕ್ಕೆ

ಜಾಗತಿಕ ಮಟ್ಟದಲ್ಲಿ ಪಾಕ್ ಮಣಿಸಲು ಭಾರತ ಚಾಣಾಕ್ಷ ತಂತ್ರ!

- ಅಂಚೆ ಪಾರ್ಸೆಲ್ ವಿನಿಮಯ ಸ್ಥಗಿತ
- ಪಾಕ್ ಹಡಗುಗಳಿಗೆ ನಿಷೇಧ
- ಪಾಕ್‌ನಿಂದ ಆಮದಾಗುವ ವಸ್ತುಗಳಿಗೆ ನಿರ್ಬಂಧ
- ಪಾಕ್ ವಾಯುಪ್ರದೇಶ ಕೈಬಿಟ್ಟ ವಿದೇಶಿ ವಿಮಾನಗಳು



ನವದೆಹಲಿ,ಮೇ 3– ಪಹಲ್ಗಾಮ್ ಉಗ್ರರ ದಾಳಿ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜೊತೆ ನೇರ ಯುದ್ಧಕ್ಕಿಳಿಯುವ ಮುನ್ನ ಪಾಕ್‌ಗೆ ಎಲ್ಲಾ ರೀತಿಯಲ್ಲೂ ಆರ್ಥಿಕ ಮುಗ್ಗಟ್ಟು ಉಂಟು ಮಾಡಲು ಭಾರತ ಮುಂದಾಗಿದೆ.

ಮುಂದಿನ ವಾರ ನಡೆಯಲಿರುವ ಐಎಂಎಫ್ ನಿರ್ಣಾಯಕ ಪರಿಶೀಲನಾ ಸಭೆ ವೇಳೆ ಪಾಕಿಸ್ತಾನಕ್ಕೆ ಹಣಕಾಸು ನೆರವು ಕಾರ್ಯಕ್ರಮವನ್ನು ಪರಿಶೀಲಿಸಲು ಜಾಗತಿಕ ಸಾಲದಾತನಿಗೆ ಮನವಿ ಮಾಡುವುದಾಗಿ ಭಾರತ ಘೋಷಿಸುತ್ತಿದ್ದಂತೆ ಬೆಚ್ಚಿ ಬಿದ್ದಿರುವ ಪಾಕಿಸ್ತಾನ, ಇದು ರಾಜಕೀಯಪ್ರೇರಿತ ಎಂದು ಹೇಳಿದೆ. ವಿಸ್ತೃತ ನಿಧಿ ಸೌಲಭ್ಯದ ಮೊದಲ ಪರಿಶೀಲನೆಗಾಗಿ ಐಎಂಎಫ್ ಕಾರ್ಯ ನಿರ್ವಾಹಕ ಮಂಡಳಿಯು ಮೇ 9ರಂದು ಪಾಕಿಸ್ತಾನದ ಅಧಿಕಾರಿಗಳನ್ನು ಭೇಟಿ ಮಾಡಲು ನಿರ್ಧರಿಸಿದೆ. ಏ.22ರಂದು ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭೀಕರ ಉಗ್ರರ ದಾಳಿ ನಂತರ ನೆರೆಯ ರಾಷ್ಟ್ರವನ್ನು ರಾಜತಾಂತ್ರಿಕವಾಗಿ ಮೂಲೆಗುಂಪು ಮಾಡಲು ಭಾರತ ಪ್ರಯತ್ನಿಸುತ್ತಿರುವುದರಿಂದ, ಪಾಕಿಸ್ತಾನಕ್ಕೆ ನೀಡಲಾದ ಹಣ ಮತ್ತು ಸಾಲಗಳ ಬಗ್ಗೆ ಮರುಪರಿಶೀಲಿಸುವಂತೆ ಐಎಂಎಫ್ ಸೇರಿದಂತೆ ಜಾಗತಿಕ ಸಂಸ್ಥೆಗಳಿಗೆ ಮನವಿ ಮಾಡುವುದಾಗಿ ಭಾರತ ಹೇಳಿದೆ. ■6ನೇ ಪುಟಕ್ಕೆ

ಮೆಚ್ಚಿದವಳ ಮದುವೆ ಮಾಡಿಕೊಳ್ಳಲು 'ಆಸ್ತಿ'ಗಾಗಿ ಹತ್ಯೆ!
ಕೇರಳ ಮೂಲದ ಉದ್ಯಮಿ ಕೊಲೆ ಪ್ರಕರಣ ಬಯಲು; ಐವರ ಬಂಧನ



ಅನಿಲ್ | ದೀಪಕ್ | ಸ್ಟೀಫನ್ | ಕಾರ್ತಿಕ್ | ಹರೀಶ್

ಮಡಿಕೇರಿ, ಮೇ 3– ತಾನು ಮೆಚ್ಚಿದ ಹುಡುಗಿ ವಿವಾಹವಾಗಲು ಬೇಕಾಗಿದ್ದ ಆಸ್ತಿ ಗಳಿಸಲು ಹತ್ಯೆ ಮಾಡಿದ್ದು, ಕೊನೆಗೆ ಸಿಕ್ಕಿಬಿದ್ದು ಈಗ ಜೈಲು ಪಾಲಾಗಿದ್ದಾನೆ. ಕೇರಳ ಮೂಲದ ಉದ್ಯಮಿಯ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಗೋಣಿಕೊಪ್ಪ ಪೊಲೀಸರು ಯಶಸ್ವಿಯಾಗಿದ್ದು, ಐವರು ಆರೋಪಿಗಳನ್ನು ಬಂಧಿಸಿ, ಅವರಿಂದ 13.3 ಲಕ್ಷ ನಗದು, ಎರಡು ದ್ವಿಚಕ್ರ ವಾಹನ, ಎರಡು ಮೊಬೈಲ್ ಅಲ್ಲದೇ ಕೊಲೆಯಾದ ಉದ್ಯಮಿಯ ಮೊಬೈಲ್ ಮತ್ತು ಆಸ್ತಿ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ಕೇರಳದವರಾಗಿದ್ದು, ಕೊಂಗಣ ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಕಾಫಿ ತೋಟ ಹೊಂದಿದ್ದ ಪ್ರದೀಪ್ ಕೊಯ್ಲಿ ಹತ್ಯೆಗೀಡಾದವರಾಗಿದ್ದು, ಪೊನ್ನಂಪೇಟೆ ತಾಲೂಕಿನ ಮುಗುಟಗೇರಿ ನಿವಾಸಿ ಎನ್.ಎಸ್.ಅನಿಲ್ ಅಲಿಯಾಸ್ ಮುತ್ತಣ್ಣ(25), ಸೋಮವಾರಪೇಟೆ ಅಬ್ಬೂರುಕಟ್ಟೆಯ ದೀಪಕ್ ಅಲಿಯಾಸ್ ದೀಪು(21), ನೇರುಗಳಲೆ ಗ್ರಾಮದ ಸ್ಟೀಫನ್ ಡಿಸೋಜಾ(26), ಹಿತ್ತಲಮಕ್ಕಿಯ ಹೆಚ್.ಎಸ್.ಕಾರ್ತಿಕ್(27), ಪೊನ್ನಂಪೇಟೆ ನಲ್ಲೂರು ಗ್ರಾಮದ ಟಿ.ಎಸ್.ಹರೀಶ್(29) ಬಂಧಿತ ಆರೋಪಿಗಳಾಗಿದ್ದು, ಕೊಲೆ ನಡೆದ 10 ದಿನದಲ್ಲಿ ಇವರನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಘಟನೆ ಹಿನ್ನೆಲೆ: ಕಳೆದ ಏಪ್ರಿಲ್ 23ರಂದು ಕೊಂಗಣ ಟಿ.ಶೆಟ್ಟಿಗೇರಿ ಗ್ರಾಮದ ಕಾಫಿ ತೋಟದ ಮನೆಯಲ್ಲಿ ಒಂಟಿಯಾಗಿ ವಾಸಿಸುತ್ತಿದ್ದ ಉದ್ಯಮಿ ಪ್ರದೀಪ್ ಕೊಯ್ಲಿಯವರ ಕುತ್ತಿಗೆ ಬಿಗಿದು ಕೊಲೆ ಮಾಡಲಾಗಿತ್ತು. ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದರು. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನಾಧರಿಸಿ, ಐವರನ್ನು ಬಂಧಿಸಿ, ವಿಚಾರಣೆಗೊಳಪಡಿಸಿದಾಗ ಕೊಲೆ ಪ್ರಕರಣ ಬಯಲಾಗಿದೆ. ■6ನೇ ಪುಟಕ್ಕೆ

ನಾಳೆಯಿಂದ ಪರಿಶಿಷ್ಟ ಜಾತಿ ಸಮೀಕ್ಷೆ

- ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸೇರಿ ರಾಜ್ಯಾದ್ಯಂತ ಸಮೀಕ್ಷೆ
- ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣಕ್ಕೆ ವೈಜ್ಞಾನಿಕ ಸರ್ವೇಕ್ಷಣೆ
- ಜಿಲ್ಲೆಯಲ್ಲಿ 3,400 ಶಿಕ್ಷಕರ ನಿಯೋಜನೆ
- ಪ್ರತಿ ಮನೆಗೆ ಭೇಟಿ ನೀಡುವ ಸಮೀಕ್ಷೆದಾರರು
- ಮೇ 5ರಿಂದ 23ರವರೆಗೆ ನಡೆಯುವ ಸಮೀಕ್ಷೆ
- ಇದಕ್ಕಾಗಿ ವಿಶೇಷ ಆ್ಯಪ್ ವ್ಯವಸ್ಥೆ
- ಪ್ರಶ್ನಾವಳಿಯಂತೆ ಮಾಹಿತಿ ಸಂಗ್ರಹಕ್ಕೆ ನಿರ್ಧಾರ

ಮೈಸೂರು, ಮೇ 3(ಬಿಎಲ್‌ಯು)– ಪರಿಶಿಷ್ಟ ಜಾತಿಯ ಅತ್ಯಂತ ಹಿಂದುಳಿದ ಉಪ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಸರ್ಕಾರ ನೇಮಕ ಮಾಡಿರುವ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ಪರಿಶಿಷ್ಟ ಜಾತಿ ಸಮೀಕ್ಷೆ ಮೇ 5ರಿಂದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು ಸೇರಿದಂತೆ ರಾಜ್ಯಾದ್ಯಂತ ಆರಂಭವಾಗುತ್ತಿದೆ.

ಈ ಮೂಲಕ ಒಳ ಮೀಸಲಾತಿ ಪಡೆಯುವ ಪರಿಶಿಷ್ಟ ಜಾತಿಯಲ್ಲಿರುವ ಅತ್ಯಂತ ಹಿಂದುಳಿದ ಉಪ ಪಂಗಡಗಳ ದಶಕಗಳ ಹೋರಾಟಕ್ಕೆ ಕೊನೆಗೂ ನ್ಯಾಯ ದೊರೆಯುವ ಕಾಲ ಸನ್ನಿಹಿತವಾಗಿದೆ. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸುಪ್ರೀಂಕೋರ್ಟ್‌ನ 7 ನ್ಯಾಯಮೂರ್ತಿಗಳ ವಿಭಾಗೀಯ ಪೀಠ ಆ.1, 2024ರಂದು ಮಹತ್ವದ ತೀರ್ಪು ನೀಡಿತ್ತು. ಆದರೆ ಒಳ ಮೀಸಲಾತಿ ಕಲ್ಪಿಸುವ ಅಧಿಕಾರವನ್ನು ಆಯಾ ರಾಜ್ಯಗಳ ನಿರ್ಧಾರಕ್ಕೆ ಬಿಟ್ಟಿತ್ತು.



ಪೈಲ್ ಚಿತ್ರ

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಆಯೋಗವನ್ನು ನೇಮಕ ಮಾಡಿತ್ತು. ಪರಿಶಿಷ್ಟ ಜಾತಿಯ ಸಮೀಕ್ಷೆ ವೈಜ್ಞಾನಿಕ ರೀತಿಯಲ್ಲಿ ಮಾಡಬೇಕೆಂದು ಸರ್ಕಾರ ಆಯೋಗಕ್ಕೆ ತಿಳಿಸಿತ್ತು.

ನ್ಯಾಯ ಸಿಗುವ ವಿಶ್ವಾಸವಿಲ್ಲ



ರಾಜ್ಯ ಕಾಂಗ್ರೆಸ್ ಸರ್ಕಾರ ಮತ ಬ್ಯಾಂಕ್ ರಾಜಕಾರಣಕ್ಕಾಗಿ ಮತ್ತೊಂದು ಬಾರಿ ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸುತ್ತಿದ್ದು, ಇದರಿಂದ ನಮಗೆ ನ್ಯಾಯ ಸಿಗುವ ವಿಶ್ವಾಸವಿಲ್ಲ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಅರುಣ್‌ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ. ಪರಿಶಿಷ್ಟ ಜಾತಿಯ ಉಪ ಪಂಗಡಗಳಿಗೆ ಒಳ ಮೀಸಲಾತಿ ನೀಡಲು ಈಗಾಗಲೇ ಸದಾಶಿವ ಆಯೋಗ ವರದಿ ನೀಡಿದೆ. ಆದರೂ, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಸಮೀಕ್ಷೆಗಾಗಿ ಈಗ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚಿಸಿದೆ. ಈ ಮೂಲಕ ಒಂದು ಸಮುದಾಯದ ಓಲೈಕೆ ಮಾಡಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು. ಈಗಾಗಲೇ ವರದಿ ನೀಡಿರುವ ಸದಾಶಿವ ಆಯೋಗ, ಮಾಧುಸ್ವಾಮಿ ಸಮಿತಿ ಹಾಗೂ ಕಾಂಗ್ರೆಸ್ ಸರ್ಕಾರವೇ ರಚನೆ ಮಾಡಿದ್ದ ಕಾಂತರಾಜು ಆಯೋಗ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯಲ್ಲಿ ಮಾದಿಗ ಸಮುದಾಯವೇ ನಂಬರ್ ಒನ್ ಸ್ಥಾನದಲ್ಲಿದೆ ಎಂದು ತಿಳಿಸಿದೆ. ಪರಿಶಿಷ್ಟ ಜಾತಿಯಲ್ಲಿ ಮಾದಿಗ ಸಮುದಾಯ ಹೆಚ್ಚಿನ ಜನಸಂಖ್ಯೆ ಹೊಂದಿದೆ ಎಂಬ ಬಗ್ಗೆ ಸರ್ಕಾರದ ಬಳಿ ದತ್ತಾಂಶವಿದೆ. ಆದರೂ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿಯ ಸಮೀಕ್ಷೆ ಆರಂಭಿಸುತ್ತಿದೆ. ಇದು ವೋಟ್ ರಾಜಕಾರಣವಲ್ಲದೆ ಬೇರೇನು ಅಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಆಯೋಗದ ಆದೇಶದಂತೆ ಮೇ 5ರಂದು ಸಮೀಕ್ಷೆ ಆರಂಭವಾಗಲಿದೆ. ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಸಮೀಕ್ಷೆ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ವ್ಯವಸ್ಥಾಪಕರೂ ಆದ ಜಾತಿ ಸಮೀಕ್ಷೆಯ ನೋಡೆಲ್ ಅಧಿಕಾರಿ ರಂಗೇಗೌಡ, ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಸಮೀಕ್ಷೆಗಾಗಿ 3,400 ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ. ನಗರದಲ್ಲಿ ಆಯಾ ಮತಗಟ್ಟೆಯ ಬೂತ್ ಹಾಗೂ ಆಯಾ ಗ್ರಾಮ ಪಂಚಾಯಿತಿಯ ಮತಗಟ್ಟೆಯ ಬೂತ್‌ನಲ್ಲಿ ಜಾತಿ ಸಮೀಕ್ಷೆ ನಡೆಸುವ ಬಗ್ಗೆ ಶಿಕ್ಷಕರನ್ನು ನಿಯೋಜಿಸಲಾಗಿದೆ ಎಂದರು.

ಗಣತಿಗೆ ನಿಯೋಜಿತರಾಗಿರುವ ಶಿಕ್ಷಕರು ಪ್ರತಿ ಮನೆಗೆ ಭೇಟಿ ನೀಡಲಿದ್ದಾರೆ. 10 ಸಮೀಕ್ಷೆದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಅಲ್ಲದೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಸ್ತುವಾರಿ ವಹಿಸುತ್ತಾರೆ ಎಂದು ಮಾಹಿತಿ ನೀಡಿದರು. ಪರಿಶಿಷ್ಟ ಜಾತಿ ಸಮೀಕ್ಷೆಗಾಗಿ ವಿಶೇಷವಾದ ಆ್ಯಪ್ ಸಿದ್ಧಪಡಿಸಲಾಗಿದ್ದು, ಆನ್‌ಲೈನ್ ಮೂಲಕ ವೈಜ್ಞಾನಿಕವಾಗಿ ■6ನೇ ಪುಟಕ್ಕೆ

ಆ್ಯಪ್ ಮೂಲಕ ಮಾಹಿತಿ ಸಂಗ್ರಹ

"ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಒಟ್ಟು 101 ಜಾತಿಗಳಿವೆ. ಈ ಪೈಕಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಜಾತಿಗಳ ಬಗ್ಗೆ ಆ್ಯಪ್ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು. ಪರಿಶಿಷ್ಟ ಜಾತಿ ಬಗ್ಗೆ ಮಾಹಿತಿ ನೀಡುವ ವ್ಯಕ್ತಿಯ ಫೋಟೋ ತೆಗೆದು ಆ್ಯಪ್‌ನಲ್ಲಿ ಡೌನ್‌ಲೋಡ್ ಮಾಡಲಾಗುವುದು. ಈ ಮೂಲಕ ಜಾತಿ ಸಮೀಕ್ಷೆ ಕರಾರುವಕ್ಕಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ನಿಯಮ ಅನುಸರಿಸಲಾಗಿದೆ. ಜಾತಿ ಸಮೀಕ್ಷೆದಾರರು ಪ್ರತಿ ಮನೆಗೆ ಭೇಟಿ ನೀಡಿದಾಗ ಆ ಮನೆಯವರು ಪರಿಶಿಷ್ಟ ಜಾತಿಗೆ ಸೇರಿದವರಲ್ಲ ಎಂಬುದನ್ನು ಕೂಡ ಆ್ಯಪ್‌ನಲ್ಲಿ ನಮೂದಿಸಬೇಕು. ಈ ಮೂಲಕ ಜಾತಿ ಸಮೀಕ್ಷೆಯಲ್ಲಿ ಪ್ರತಿ ಕುಟುಂಬವನ್ನು ಸಂಪರ್ಕಿಸಲಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳಲಾಗುವುದು.

–ಡಿಡಿಪಿಐ ಜವರೇಗೌಡ

ನಿಖರ ಮಾಹಿತಿ ನೀಡುವಂತೆ ಡಿಸಿ ಮನವಿ



ಮೈಸೂರು: ಪರಿಶಿಷ್ಟ ಜಾತಿ ಒಳ ಮೀಸಲಾತಿ ದತ್ತಾಂಶ ಸಂಗ್ರಹಕ್ಕೆ ಮೈಸೂರಿನಲ್ಲಿ ಮೇ 5ರಿಂದ ಸಮೀಕ್ಷೆ ಆರಂಭವಾಗಲಿದ್ದು, ಸಮೀಕ್ಷೆದಾರರು ಕೇಳುವ ಪ್ರಶ್ನೆಗಳಿಗೆ ನಿಖರ ಮಾಹಿತಿ ನೀಡಿ, ಸಹಕರಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಮನವಿ ಮಾಡಿದ್ದಾರೆ.

ಮೂರು ಹಂತಗಳಲ್ಲಿ ಸಮೀಕ್ಷೆ: ಸಮೀಕ್ಷೆದಾರರನ್ನಾಗಿ ಶಾಲಾ ಶಿಕ್ಷಕರನ್ನು ಮೂರು ಹಂತಗಳಲ್ಲಿ ಸಮೀಕ್ಷೆ ನಡೆಸಲು ನೇಮಕ ಮಾಡಲಾಗಿದೆ. ಮೇ 5ರಿಂದ 17ರವರೆಗೆ ಮನೆ ಮನೆ ಸಮೀಕ್ಷೆಯ ದತ್ತಾಂಶವನ್ನು ಆ್ಯಪ್‌ನಲ್ಲಿ ಭರ್ತಿ ಮಾಡಲಾಗುವುದು. ನಂತರ ಮೇ 19ರಿಂದ 21ರವರೆಗೆ ವಿಶೇಷ ಶಿಬಿರಗಳನ್ನು ನಡೆಸಿ, ಮನೆ ಮನೆ ಸಮೀಕ್ಷೆ ವೇಳೆ ಬಿಟ್ಟಿರುವ ಕುಟುಂಬಗಳ ಮಾಹಿತಿ ಸಂಗ್ರಹಿಸಲಾಗುವುದು. 3ನೇ ಹಂತದಲ್ಲಿ ಮೇ 22, 23ರಂದು ಆನ್ಲೈನ್ ಮೂಲಕ ಸ್ವಯಂಘೋಷಣೆಗೆ ಅವಕಾಶ ನೀಡಲಾಗಿದೆ. ಸಮೀಕ್ಷೆ ವೇಳೆ ಪರಿಶಿಷ್ಟ ಜಾತಿ ಕುಟುಂಬದವರು ತಮ್ಮ ಜಾತಿ ಹಾಗೂ ಉಪಜಾತಿಗಳನ್ನು ಸರಿಯಾಗಿ ಹೇಳಬೇಕೆಂದು ಡಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಭಾನುವಾರ 4 ಮೇ 2025

ಹಾಸನ ಮಿತ್ರ

ಏಷ್ಯನ್ ಪವರ್ ಲಿಫ್ಟಿಂಗ್ ಸಬ್ ಜೂನಿಯರ್ ಚಾಂಪಿಯನ್‌ಶಿಪ್‌ಗೆ ಹಾಸನದ ಕುವರಿ ಕೆ.ಹೆಚ್.ಸಿಂಚನ



ಹಾಸನ, ಮೇ 3– ಜಿಲ್ಲಾ ಪವರ್ ಲಿಫ್ಟಿಂಗ್ ಕಾರ್ಯದರ್ಶಿ ಹನುಮಂತೇಗೌಡರ ಪುತ್ರಿ ಕೆ.ಹೆಚ್. ಸಿಂಚನ ಉತ್ತರ ಖಂಡದ ಡೆಹ್ರಾಡೂನ್‌ನಲ್ಲಿ 2025 ಮೇ 5ರಿಂದ ಮೇ 12ರವರೆಗೂ ನಡೆಯುವ ಏಷ್ಯನ್ ಪವರ್ ಲಿಫ್ಟಿಂಗ್ ಸಬ್ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಈ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಹನುಮಂತೇಗೌಡರು, ನಾಲ್ಕು ಬಾರಿ ರಾಜ್ಯ ಮಟ್ಟದ ಸಬ್ ಜೂನಿಯರ್ ವಿಭಾಗದಲ್ಲಿ ಬೆಸ್ಟ್ ಲಿಫ್ಟರ್ ಆಗಿ ಬಂದಿರುವ ಕೆ.ಹೆಚ್.ಸಿಂಚನ ಅವರು ರಾಜ್ಯ ಮಟ್ಟದಲ್ಲಿ ಐದು ಬಾರಿ ಭಾಗವಹಿಸಿ ಮೂರು ಬಾರಿ ಚಿನ್ನದ ಪದಕ ಪಡೆದುಕೊಂಡು ಈಗ ಕರ್ನಾಟಕದ ಏಕೈಕ ಸಬ್ ಜೂನಿಯರ್ ಏಷ್ಯನ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಗೊಂಡಿದ್ದಾರೆ. ನಾನು ಕೂಡ 2017ರಿಂದ ಭಾಗವಹಿಸಿ ದಾಖಲೆ ನಿರ್ಮಿಸಿದ್ದೇನೆ ಎಂದು ಹೇಳಿದರು.

ಏಷ್ಯನ್ ಪವರ್ ಲಿಫ್ಟಿಂಗ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ಕೆ.ಹೆಚ್. ಸಿಂಚನ ಮಾತನಾಡಿ, ನಮ್ಮ ತಂದೆಯವರು ಪವರ್ ಲಿಫ್ಟಿಂಗ್ ಪ್ರಾರಂಭ ಮಾಡಿ, ಅವರ ಈ ಕ್ರೀಡೆಯನ್ನು ನೋಡಿ ನಾನು ಅವರಿಂದಲೆ ತರಬೇತಿ ಪಡೆದಿದ್ದೇನೆ. ನಾನು ಮೂರು ಬಾರಿ ರಾಜ್ಯ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದಿದ್ದೇನೆ. ಈ ವರ್ಷ 2025ರ ಏಷ್ಯನ್ ಪವರ್ ಲಿಫ್ಟಿಂಗ್ ಸಬ್ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದೇನೆ ಎಂದರು. ಪ್ರತಿನಿತ್ಯ ನನ್ನ ತಂದೆ ಟ್ರೈನಿಂಗ್ ನೀಡುತ್ತಿದ್ದಾರೆ. ನಾನು ವಿಶ್ವ ಮಟ್ಟದ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಚಿನ್ನದ ಪದಕ ಪಡೆದುಕೊಳ್ಳಬೇಕು ಎಂಬುದು ಮುಖ್ಯ ಗುರಿಯಾಗಿದೆ. ನಾನು ಹತ್ತನೇ ತರಗತಿ ಓದುತ್ತಿರುವುದರಿಂದ ಓದುವುದಕ್ಕೆ ಸ್ವಲ್ಪ ಕಷ್ಟವಾಯಿತು. ಆದರೂ ಕೂಡ ಏನಾದರೂ ಸಾಧಿಸಬೇಕು ಎನ್ನುವ ಉದ್ದೇಶದಿಂದ ಶಾಲೆ ಮುಗಿಸಿ ರಾತ್ರಿ 1 ಗಂಟೆವರೆಗೂ ಓದುತ್ತಿದ್ದೆ ಎಂದು ತಮ್ಮ ಸಾಧನೆಯ ಹಾದಿಯನ್ನು ಇದೆ ವೇಳೆ ಹೇಳಿಕೊಂಡರು.

ಪತ್ರಿಕಾಗೋಷ್ಠಿಯಲ್ಲಿ ಹಾಸನ ಜಿಲ್ಲಾ ಪವರ್ ಲಿಫ್ಟಿಂಗ್ ಅಧ್ಯಕ್ಷ ಈ. ಕೃಷ್ಣೇಗೌಡ, ಖಜಾಂಚಿ ಆಶ್ವಥ್, ಶಿವಸ್ವಾಮಿ ಇತರರು ಉಪಸ್ಥಿತರಿದ್ದರು.

ನಿವೃತ್ತ ಯೋಧನಿಗೆ ಸನ್ಮಾನ



ಹಾಸನ, ಮೇ 3–ಸುದೀರ್ಘ ಇಪ್ಪತ್ತು ವರ್ಷಗಳ ಕಾಲ ದೇಶಸೇವೆ ಮಾಡಿ ನಿವೃತ್ತಿ ಪಡೆದು ಹಾಸನಕ್ಕೆ ಆಗಮಿಸಿದ ಆಲೂರು ತಾಲೂಕಿನ ಕಣಗಾಲು ಗ್ರಾಮದ ಲಕ್ಷ್ಮಣ್ ಎಂಬುವವರನ್ನು ನಗರದ ಪ್ರವಾಸಿ ಮಂದಿರದಲ್ಲಿ ಅವರ ಹಿತೈಷಿಗಳು, ಅಪಾರ ಸಂಖ್ಯೆಯ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಮುಖಂಡರು ಸೇರಿ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ನಿವೃತ್ತ ಯೋಧ ಲಕ್ಷ್ಮಣ್ ಮಾತನಾಡಿ, 2004ರಲ್ಲಿ ಸೇನೆಗೆ ಸೇರಿ ಅಲ್ಲಿಂದ ಜಮ್ಮು–ಕಾಶ್ಮೀರ, ಶ್ರೀನಗರ, ಜಾರ್ಖಂಡ್ ಸೇರಿದಂತೆ ವಿವಿಧ ಕಡೆ ಸೇವೆ ಸಲ್ಲಿಸಿದ್ದೇನೆ ಎಂದರು. ಸೇವಾ ಅವಧಿಯಲ್ಲಿ ಅನೇಕ ಸಮಸ್ಯೆಗಳು, ಸವಾಲಿನ ಸಂದರ್ಭಗಳನ್ನು ಎದುರಿಸಿ ಕೆಲಸ ಮಾಡಿದ್ದೇನೆ. ದೇಶದ ರಕ್ಷಣೆ ಎಲ್ಲರ ಜವಾಬ್ದಾರಿ. ಪ್ರತಿ ಮನೆ ಮನೆಯಲ್ಲಿ ಯೋಧರು ಹುಟ್ಟಿಕೊಳ್ಳಬೇಕು ಈ ನಿಟ್ಟಿನಲ್ಲಿ ಯುವಕರು ಸೇನೆಗೆ ಸೇರಬೇಕು ಎಂದು ಕರೆ ನೀಡಿದರು.

ಉತ್ತರ ಭಾರತಕ್ಕೆ ಹೋಲಿಸಿದಾಗ ದಕ್ಷಿಣ ಭಾರತ ಭಾಗದಲ್ಲಿ ಸೈನಿಕರ ಸಂಖ್ಯೆ ಕಡಿಮೆ ಇದೆ. ಮುಂದಿನ ದಿನದಲ್ಲಿ ಈ ಭಾಗದಲ್ಲಿ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಯುವಕ ಯುವತಿಯರು ಸೇನೆಗೆ ಸೇರಿಕೊಂಡು ದೇಶಸೇವೆ ಮಾಡಲು ಮುಂದಾಗಬೇಕು ಎಂದರು.

ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ದೇಶ ಸೇವೆ ಎಷ್ಟು ಮುಖ್ಯ ಎಂಬುದು ಪ್ರತಿಯೊಬ್ಬರಿಗೂ ಅರಿವಾಗಿದೆ. ಇಂತಹ ಸಂದರ್ಭದಲ್ಲಿ ಯೋಧರ ಪಾತ್ರ ಬಹಳ ಮುಖ್ಯ ಎಂದ ಲಕ್ಷ್ಮಣ್ ಅವರು, ಅಂತಹ ಎಲ್ಲ ಸಮಸ್ಯೆಗಳನ್ನು ಎದುರಿಸಿ ಸುಮಾರು 20ಕ್ಕೂ ಅಧಿಕ ವರ್ಷ ದೇಶಸೇವೆ ಮಾಡಿರುವುದು ನಮ್ಮ ಜಿಲ್ಲೆಗೆ ತಂದ ಕೀರ್ತಿಯಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಮಲ್ಲಿಗೆವಾಳು ದೇವಪ್ಪ ಮಾತನಾಡಿ, ದೇಶಸೇವೆಯೇ ಈಶ ಸೇವೆ ಎಂಬ ಮಾತಿನಂತೆ ದೇಶದ ರಕ್ಷಣೆ ಮಾಡುವ ಸಲುವಾಗಿ ಯೋಧರು ಶ್ರಮವಹಿಸುತ್ತಿದ್ದಾರೆ ಎಂದರು.

ಕೆಆರ್ ಮಿಲ್ಸ್ ನೌಕರರ ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಆರ್.ಕಿರಣ್, ಉಪಾಧ್ಯಕ್ಷರಾಗಿ ಪುಷ್ಪಾ ಆಯ್ಕೆ



ಮೈಸೂರು, ಮೇ 3–ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ನೌಕರರ ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಆರ್.ಕಿರಣ್, ಉಪಾಧ್ಯಕ್ಷರಾಗಿ ಶ್ರೀಮತಿ ಪುಷ್ಪಾ, ನಿರ್ದೇಶಕರಾಗಿ ಜಿ.ಲೋಕೇಶ್, ವೆಂಕಟೇಶ್, ಎಸ್.ಪರಮೇಶ್, ಮೊಹಮ್ಮದ್ ರಫೀಕ್, ಕೆ.ಮಂಜುನಾಥ್, ಎಸ್.ಶ್ರೀಧರ್, ಶಿವಕುಮಾರ್, ಶ್ರೀಮತಿ ವನಜಾಕ್ಷಿ, ಎಂ.ಸಿದ್ದರಾಜು ಆಯ್ಕೆಯಾಗಿದ್ದಾರೆ. ಇವರು ಐದು ವರ್ಷಗಳ ಅವಧಿಗೆ ಚುನಾವಣೆಯಲ್ಲಿ ಆಯ್ಕೆಯಾದರು ಎಂದು ಸಂಘದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಿಧನ



ಶಶಿಕಲಾ

ಮೈಸೂರು, ಮೇ 3–ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಹಾಗೂ ಸಿಪಿಡಬ್ಲ್ಯುಡಿ ಕಂಟ್ರಾಕ್ಟರ್ ಬಿ.ಸುರೇಶ್ ಬಾಬು ಅವರ ಪತ್ನಿ ಶಶಿಕಲಾ (58) ಶನಿವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೆಮ್ಮಂಡ ಲೋಕನಾಥ್



ಮೈಸೂರು ಹೆಬ್ಬಾಳು ಕಾಲೋನಿ ನಿವಾಸಿ ಹಾಗೂ ದಿವಂಗತ ಕುಶಾಲಪ್ಪ ಅವರ ಪುತ್ರ ಪೆಮ್ಮಂಡ ಲೋಕನಾಥ್ (ಶಂಭು) ಶುಕ್ರವಾರ ನಿಧನರಾದರು. ಅವರಿಗೆ 64 ವರ್ಷ ವಯಸ್ಸಾಗಿತ್ತು. ಮೂಲತಃ ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕು, ಕುಮ್ಮಟೂರು ಗ್ರಾಮದವರಾದ ಇವರು ಪತ್ನಿ ರಾಣಿ (ಮೂಕಲಮಾಡ), ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ಎಸ್.ರಾಜೇಶ್ವರಿ (ರತ್ನಮಣಿ)

ನಂಜನಗೂಡು ತಾಲೂಕಿನ ಬಿಳಿಗೆರೆ ಹೋಬಳಿ ಕಿರುಗುಂದ ಗ್ರಾಮದ ಲೇಟ್ ಗುರುಸಿದ್ದೇಗೌಡರ ಪತ್ನಿ ಶ್ರೀಮತಿ ಎಸ್.ರಾಜೇಶ್ವರಿ (ರತ್ನಮಣಿ–62) ಶನಿವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪುತ್ರಿಯರಾದ ಶ್ರೀಮತಿ ಭಾಗ್ಯ ಹಾಗೂ ಶ್ರೀಮತಿ ಮಂಜುಳಾ, ಮಗ ಕೆ.ಜಿ.ಪುಟ್ಟಸ್ವಾಮಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು (ಶನಿವಾರ) ಮಧ್ಯಾಹ್ನ ಅವರ ಸ್ವಗ್ರಾಮ ಕಿರುಗುಂದದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆಯಿಂದ ಒಳ ಮೀಸಲಾತಿ ಮನೆ ಮನೆ ಜಾತಿ ಸಮೀಕ್ಷೆ

ಸಮೀಕ್ಷೆ ವೇಳೆ 'ಮಾದಿಗ' ಎಂದು ಬರೆಸುವಂತೆ ಮನವಿ

● 42 ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿ, ಮಾತಂಗ ಸಮಿತಿಯಿಂದ ಜಾಗೃತಿ ● ಜಲದರ್ಶಿನಿ ಅತಿಥಿ ಗೃಹದಲ್ಲಿ ಸಭೆ ನಡೆಸಿ ತೀರ್ಮಾನ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಾಜ್ಯ ಮಾತಂಗ ಜಾಗೃತಿ ಸಮಿತಿ ವತಿಯಿಂದ ಒಳ ಮೀಸಲಾತಿ ಸಮೀಕ್ಷೆ ಕುರಿತು ಮಾಜಿ ಸಚಿವ ಎಂ.ಕೋಟೆ ಶಿವಣ್ಣ ನೇತೃತ್ವದಲ್ಲಿ ಮಾದಿಗ ಸಮುದಾಯದ ಮುಖಂಡರ ಸಭೆ ನಡೆಸಲಾಯಿತು.

ಮೈಸೂರು, ಮೇ 3(ಜಿಎ)–ಬೀದಿ ಹೋರಾಟದಿಂದ ಸದಾಶಿವ ಆಯೋಗ ಆರಂಭವಾಯಿತು. ಆದರೆ, ಸದಾಶಿವ ಆಯೋಗ ಹಾಗೂ ನಾಗಮೋಹನ್ ದಾಸ್ ಆಯೋಗಕ್ಕೂ ಸಾಕಷ್ಟು ವ್ಯತ್ಯಾಸವಿದ್ದು, ಸುಪ್ರೀಂಕೋರ್ಟ್‌ನ ಆದೇಶದಂತೆ ಮೇ 5ರಿಂದ 17ರವರೆಗೆ ಒಳ ಮೀಸಲಾತಿ ಕುರಿತು ನಡೆಯುವ ಮನೆ ಮನೆ ಜಾತಿ ಸಮೀಕ್ಷೆ ಸಂಪೂರ್ಣ ವೈಜ್ಞಾನಿಕವಾಗಿದೆ ರಾಜ್ಯ ಮಾತಂಗ ಜಾಗೃತಿ ಸಮಿತಿ ರಾಜ್ಯ ಗೌರವಾಧ್ಯಕ್ಷ ಲೋಕೇಶ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಾಜ್ಯ ಮಾತಂಗ ಜಾಗೃತಿ ಸಮಿತಿ ವತಿಯಿಂದ ಒಳ ಮೀಸಲಾತಿ ಸಮೀಕ್ಷೆ ಕುರಿತು ಮಾಜಿ ಸಚಿವ ಎಂ.ಕೋಟೆ ಶಿವಣ್ಣ ನೇತೃತ್ವದಲ್ಲಿ ನಡೆದ ಮಾದಿಗ ಸಮುದಾಯದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಸದಾಶಿವ ಆಯೋಗದ ವರದಿ ಪೂರ್ಣಗೊಂಡಿದೆ. ಆದರೆ, ಅದು ಬಿಡುಗಡೆಯಾಗಲಿಲ್ಲ. ಸದಾಶಿವ ಆಯೋಗದ ಪ್ರಕಾರ ಅಂದು ಕರ್ನಾಟಕದಲ್ಲಿ ಮಾದಿಗ ಎಂದು ಕೇವಲ 50,158 ಮಂದಿ ನೋಂದಾಯಿಸಿಕೊಂಡಿದ್ದಾರೆ. ಅದರ ಜೊತೆ ಸಂಬಂಧಿತ ಜಾತಿಗಳು ಎಂದು 3,690 ಮಂದಿ ನಮೂದಿಸಿಕೊಂಡಿದ್ದಾರೆ. ಅಂದು 2001ರ ಜನಗಣತಿ ಆಧಾರದ ಮೇಲೆ ಸಮೀಕ್ಷೆ ಮಾಡಲಾಗಿದೆ. ಈಗ ನಾಗಮೋಹನ್ ದಾಸ್ ಆಯೋಗವು 2011ರ ಜನಗಣತಿ ಆಧಾರದ ಮೇಲೆ ಮಾಡುವಂತೆ ಸರ್ಕಾರ ತಿಳಿಸಿದ್ದು, ಜೊತೆಗೆ ಹಿಂದುಳಿದ ವರ್ಗಗಳ ಆಧಾರದ ಮೇಲೆ ಸಮೀಕ್ಷೆ ನಡೆಸುವಂತೆ ಸೂಚಿಸಿದೆ ಎಂದು ವಿವರಿಸಿದರು.

ಮೇ 5ರಿಂದ 17ರವರೆಗೆ ನಡೆಯುವ ಮನೆ ಮನೆ ಸಮೀಕ್ಷೆಯಲ್ಲಿ ಒಟ್ಟು 42 ಪ್ರಶ್ನೆಗಳಿದ್ದು, ಅವುಗಳಿಗೆ ಸೂಕ್ತ ಉತ್ತರ ನೀಡುವುದರೊಂದಿಗೆ ಮಾದಿಗ ಎಂದು ಬರೆಸಬೇಕು. ಕೆಲವರು ಬೇರೆ ಧರ್ಮಕ್ಕೆ ಮತಾಂತರವಾಗಿದ್ದರು ಸಹ ಆತಂಕ ಪಡುವ ಅಗತ್ಯವಿಲ್ಲ. ಸಮೀಕ್ಷೆಯಲ್ಲಿ ಧರ್ಮದ ಕಾಲಂ ಇಲ್ಲ. ಆಧಾರ್ ಸಂಖ್ಯೆ ಇಲ್ಲದಿದ್ದರೆ ತಕ್ಷಣ ಆಧಾರ್ ಕೇಂದ್ರಗಳಿಗೆ ಹೋಗಿ ತಾತ್ಕಾಲಿಕ ಆಧಾರ್ ನಂಬರ್ ಪಡೆದುಕೊಂಡು ಅದರ ಮೂಲಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ. ಪೌರಕಾರ್ಮಿಕರು ಮಾದಿಗ ಎಂದು ಬರೆಸಿ ಎಂದು ಕರೆಕೊಟ್ಟರು.

ಮಾಜಿ ಸಚಿವ ಎಂ.ಕೋಟೆ ಶಿವಣ್ಣ ಮಾತನಾಡಿ, ಮೇ 5ರಿಂದ ಪ್ರಾರಂಭವಾಗುವ ಒಳಮೀಸಲಾತಿಗಾಗಿ ಜಾತಿ ಸಮೀಕ್ಷೆ ಮೇ 17ರವರೆಗೆ ನಡೆಯಲಿದ್ದು, ಈ ವೇಳೆ ಸಮೀಕ್ಷೆಗಾರರು ಪ್ರತಿ ಮನೆ ಮನೆಗೆ ಒಂದು ಸಮೀಕ್ಷೆ ಮಾಡುವರು. ಆ ಸಂದರ್ಭದಲ್ಲಿ ನಮ್ಮ ಮುಖಂಡರು ತಂಡ ಕಟ್ಟಿಕೊಂಡು ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಪ್ರತಿ ಕುಟುಂಬದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಜೊತೆಗೆ ರಾಜಕೀಯ ಮತ್ತು ಉದ್ಯೋಗ ಪ್ರಾತಿನಿಧ್ಯ ದೊರೆಕಿರುವ ಬಗ್ಗೆ ನಿಖರವಾದ ಮಾಹಿತಿ ನೀಡಬೇಕು ಹಾಗೂ ಜಾತಿ ಕಾಲಂನಲ್ಲಿ 'ಮಾದಿಗ' ಎಂದು ಬರೆಸಬೇಕೆಂದು ತಿಳಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ಮಾತನಾಡಿ, ಸಮೀಕ್ಷೆ ನಡೆಯುವಾಗ ಹಳ್ಳಿಯಲ್ಲಿ ಅಕ್ಕಪಕ್ಕದ ಮನೆ ಇರುವುದರಿಂದ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ ನಗರ ಪ್ರದೇಶದಲ್ಲಿ ಒಂಟಿ ಮನೆಗಳಿರುತ್ತವೆ. ಆ ಮನೆಗಳನ್ನು ಗುರುತಿಸಿ ಸಮೀಕ್ಷೆ ಮಾಡುವವರನ್ನು ಕರೆದುಕೊಂಡು ಹೋಗಿ ಸಮೀಕ್ಷೆ ಮಾಡಿಸ ಬೇಕು. ಮಾದಿಗ ಎಂದು ಬರೆಸದಿದ್ದರೆ ಶೇ.6ರಷ್ಟು ಮೀಸಲಾತಿ ಸಿಗುವುದಿಲ್ಲ. ಕೇವಲ ಶೇ.1ರಷ್ಟು ಮೀಸಲಾತಿ ಸಿಗುತ್ತದೆ. ಮಾದಿಗ ಜನಾಂಗ ಅಂಬೇಡ್ಕರ್ ನಿಗಮದಡಿ ಬರಬೇಕಾದರೆ ಮಾದಿಗ ಎಂದು ಬರೆಸಿ ಎಂದರು.

ಹೆಚ್.ಡಿ.ಕೋಟೆಯಲ್ಲಿ ವಿಶೇಷ ಸಭೆ ಮಾಡಿ ಗ್ರಾಮಕ್ಕೆ ಒಂದೊಂದು ತಂಡ ನೇಮಿಸಿದ್ದು, ತಂಡದಲ್ಲಿ ಐವರು ವಿದ್ಯಾವಂತರನ್ನು ನೇಮಕ ಮಾಡಲಾಗಿದೆ. ಈಗಾಗಲೇ 37 ಗ್ರಾಮಗಳಿಗೆ ತಂಡ ತಲುಪಿ ಜಾಗೃತಿ ಮೂಡಿಸಿದೆ. ಭಾನುವಾರದಿಂದ ತಂಡ ಸರ್ವೆ ಮಾಡುವವರೊಟ್ಟಿಗೆ ಇರುತ್ತಾರೆ. ಎಂಟು ಹಳ್ಳಿಯಲ್ಲಿರುವ ಪೌರ ಕಾರ್ಮಿಕರಿಗೆ ಮಾದಿಗ ಎಂದು ಬರೆಸುವಂತೆ ತಿಳಿಸಲಾಗಿದೆ. ಇದು ಅಂತಿಮ ಹಂತ ಈ ಹಂತದಲ್ಲಿ ಯಾರು ಎಡವಬಾರದು ಎಂದು ಹೆಚ್.ಡಿ.ಕೋಟೆ ಭಾಗದ ಮುಖಂಡರೊಬ್ಬರು ತಿಳಿಸಿದರು.

ಸಭೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಶ್ಯಾಂ ಪ್ರಸಾದ್, ರಾಜ್ಯ ಮಾತಂಗ ಜಾಗೃತಿ ಸಮಿತಿಯ ಮೈಸೂರು ವಿಭಾಗೀಯ ಅಧ್ಯಕ್ಷ ಬಿ.ಎಸ್.ರಂಗನಾಥ್ ಪ್ರಸಾದ್, ಪ್ರೊ.ವೆಂಕಟೇಶ್‌ಕುಮಾರ್, ದೇವದತ್ತ ಫೌಂಡೇಷನ್‌ನ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಶಿವಪ್ರಸಾದ್, ಮೈಸೂರು ಕಾಂಗ್ರೆಸ್ ಎಸ್‌ಸಿ ನಗರ ಘಟಕದ ಅಧ್ಯಕ್ಷ ರಮೇಶ್ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

> "ಸಮೀಕ್ಷೆ ವೇಳೆ ಆಧಾರ್ ಕಾರ್ಡ್ ಅಥವಾ ರೇಷನ್ ಕಾರ್ಡ್ ಇರಬೇಕು. ರೇಷನ್ ಕಾರ್ಡ್‌ನಿಂದ ಸಂಪೂರ್ಣ ಕುಟುಂಬಸ್ಥರ ಮಾಹಿತಿ ತಿಳಿಯುತ್ತದೆ. ಆದಿ ಕರ್ನಾಟಕ, ಆದಿ ದ್ರಾವಿಡ ಸೇರಿದಂತೆ ಇತರೆ ಉಪಜಾತಿಗಳು ಇರುತ್ತವೆ. ಈ ವೇಳೆ ಗಮನಹರಿಸಿ ಜಾತಿ ಆಯ್ಕೆ ಮಾಡಬೇಕು. ನಂತರ ಶೈಕ್ಷಣಿಕ ಮಾಹಿತಿ ಭರ್ತಿ ಮಾಡಬೇಕು. ಕುಟುಂಬದ ಮುಖ್ಯಸ್ಥರ ಮಾಹಿತಿ ಜೊತೆಗೆ ಫೋಟೋ ತೆಗೆದುಕೊಳ್ಳಬೇಕು. ಕೊಟ್ಟಿರುವ ಮಾಹಿತಿಯು ಸರಿ ಇದೆಯಾ ಎಂದು ಅಂತಿಮವಾಗಿ ಪರೀಕ್ಷಿಸಿಕೊಳ್ಳಬೇಕು. ನಂತರ ಮೊಬೈಲ್ ನಂಬರ್ ನೀಡಿ ಓಟಿಪಿ ಹಾಕಿ ಸಮೀಕ್ಷೆ ಪೂರ್ಣಗೊಳ್ಳುತ್ತದೆ. ಮೊಬೈಲ್ ಸಂಖ್ಯೆ ಇಲ್ಲವಾದರೆ ಸಹಿ ಹಾಕಲು ಅವಕಾಶವಿದೆ ಎಂದು ಸಭೆಯಲ್ಲಿದ್ದವರು ತಿಳಿಸಿದರು.

ಒಳ ಮೀಸಲಾತಿ ಸಮೀಕ್ಷೆ ವೇಳೆ ಪೌರಕಾರ್ಮಿಕರು 'ಅರುಂಧತಿಯಾರ್' ಎಂದು ನಮೂದಿಸಲು ಮನವಿ

ಮೈಸೂರು, ಮೇ 3(ಜಿಎ)–ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗದ ಒಳ ಮೀಸಲಾತಿ ಸಮೀಕ್ಷೆ ವೇಳೆ ಆದಿ ದ್ರಾವಿಡ, ಆದಿ ಆಂಧ್ರ, ಆದಿ ಕರ್ನಾಟಕ, ಆದಿ ಜಾಂಬವ ಜಾತಿ ದೃಢೀಕರಣ ಪತ್ರ ಹೊಂದಿರುವ ಎಲ್ಲಾ ಪೌರಕಾರ್ಮಿಕರು ಉಪಜಾತಿಯಾಗಿ ಕ್ರಸಂ.9, ಅರುಂಧತಿಯಾರ್ ನಮೂದಿಸಬೇಕು ಎಂದು ಅಖಿಲ ಕರ್ನಾಟಕ ಅರುಂಧತಿಯಾರ್ ಮಹಾಸಭಾ ರಾಜ್ಯಾಧ್ಯಕ್ಷ ಆರ್.ಕೃಷ್ಣ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮಲ್ಲಿ ಕೆಲ ಮುಖಂಡರು ಮಾದಿಗ ಎಂದು ಮಾತ್ರ ನಮೂದಿಸುವಂತೆ ಸಮುದಾಯದ ದಿಕ್ಕು ತಪ್ಪಿಸುತ್ತಿದ್ದಾರೆ. ನಮ್ಮ ಆಚಾರ ವಿಚಾರಗಳು ಹಾಗೂ ಹೊಲೆಯ– ಮಾದಿಗ ಸಮುದಾಯದ ಆಚಾರ ವಿಚಾರಗಳು ಬೇರೆಯಾಗಿದ್ದು, ಪೌರಕಾರ್ಮಿಕರ ಮುಂದಿನ ಭವಿಷ್ಯಕ್ಕಾಗಿ ಅರುಂಧತಿಯಾರ್ ಎಂದೇ ನಮೂದಿಸಿ ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಮಹಾಸಭಾ ಘಟಕದ ಗೌರವಾಧ್ಯಕ್ಷ ನಾಗರಾಜು, ಮಂಡ್ಯ ಜಿಲ್ಲಾ ಸಲಹೆಗಾರ ಆರ್ ಬಾಸು ಶ್ರೀರಂಗಪಟ್ಟಣದ ಮುಖಂಡ ಶಿವಾಜಿರಾಂ, ಯೂತ್ ಘಟಕದ ಅಧ್ಯಕ್ಷ ಕೆ.ನವೀನ್ ಉಪಸ್ಥಿತರಿದ್ದರು.

ಒಳ ಮೀಸಲಾತಿ ಸಮೀಕ್ಷೆ ವೇಳೆ ಪೌರಕಾರ್ಮಿಕರು ಜಾತಿಯನ್ನು 'ಮಾದಿಗರು' ಎಂದು ಬರೆಸಲು ಮನವಿ

ಮೈಸೂರು,ಮೇ3(ಜಿಎ)–ನ್ಯಾ. ನಾಗಮೋಹನ ದಾಸ್ ಆಯೋಗದ ಒಳಮೀಸಲಾತಿ ಸಮೀಕ್ಷೆಯಲ್ಲಿ ಎಲ್ಲಾ ಪೌರಕಾರ್ಮಿಕರು ತಮ್ಮ ಜಾತಿಯನ್ನು ಮಾದಿಗ ಎಂದೇ ನಮೂದಿಸಬೇಕು. ಆ ಮೂಲಕ ಹೆಚ್ಚಿನ ಸೌಲಭ್ಯ ಹೊಂದಲು ಮುಂದಾಗಬೇಕು ಎಂದು ಆದಿ ದ್ರಾವಿಡ ಪೌರಕಾರ್ಮಿಕ ಯುವಕರ ಅಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಎಸ್.ಸುಬ್ರಹ್ಮಣಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನೆ ಮನೆ ಸಮೀಕ್ಷೆ ಪ್ರಮುಖವಾಗಿದ್ದು, ಯಾವುದೇ ಗೊಂದಲಕ್ಕೊಳಗಾಗದೆ ಪೌರಕಾರ್ಮಿಕರು ಪಾಲ್ಗೊಳ್ಳಬೇಕು ಎಂದರು.

ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಎಂ.ವಿ.ವೆಂಕಟೇಶ್ ಮಾತನಾಡಿ, ಕಳೆದ 30 ವರ್ಷಗಳ ಹೋರಾಟದ ಫಲವಾಗಿ ಇಡೀ ದೇಶಾದ್ಯಂತವೂ ಸಮೀಕ್ಷೆ ನಡೆಯುವ ಸಾಧ್ಯತೆ ಇದೆ. ಮೂಲ ಮಾದಿಗರು ಪೌರಕಾರ್ಮಿಕ ವೃತ್ತಿಯಲ್ಲಿದ್ದಾರೆ. ಶೈಕ್ಷಣಿಕ, ಆರ್ಥಿಕ, ರಾಜಕೀಯ ಅಭಿವೃದ್ಧಿ ಕಂಡಿಲ್ಲ. ಹೀಗಾಗಿ ಮೂಲ ಮಾದಿಗರೇ ಆಗಿರುವ ಕಾರಣ ಮೂಲ ಜಾತಿ ಮಾದಿಗ ಎಂದೇ ಬರೆಯಿಸಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಮುಖಂಡ ಕೆ.ವಿ.ಸುಬ್ರಹ್ಮಣಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.05.2025 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘ :** ಭಗವದ್ ಶ್ರೀ ರಾಮಾನುಜಾಚಾರ್ಯರ 1008ನೇ ತಿರುನಕ್ಷತ್ರ ಹಾಗೂ 16ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸಾನ್ನಿಧ್ಯ : ಮೇಲುಕೋಟೆಯ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಲೋಕೇಶ್, ಮುಖ್ಯ ಅತಿಥಿಗಳು : ಅರ್ಕಧಾಮ ಸಂಸ್ಥಾಪಕ ಶ್ರೀ ಶ್ರೀನಿವಾಸ ಅರ್ಕ ಸ್ವಾಮೀಜಿ, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಮಹಾರಾಜ ಆಯುರ್ವೇದ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಎನ್.ವಿ. ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ರೋಟರಿ ಪಶ್ಚಿಮ ವಿದ್ಯಾಸಂಸ್ಥೆ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಬೆಳಗ್ಗೆ 9ಕ್ಕೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮರಥೋತ್ಸವ, ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 9ಕ್ಕೆ ಅನುಜ್ಞೆ, ವಾಸುದೇವ ಪುಣ್ಯಾಹವಾಚನ, ಸ್ನಪನಪೂರ್ವಕ ಮಹಾಭಿಷೇಕ, ಸಂಜೆ 6ಕ್ಕೆ ಸ್ವಸ್ತಿವಾಚನ, ಆಚಾರ್ಯ ಋತ್ವಿಗ್ವರಣ, ರಕ್ಷಾ ಬಂಧನ, ಅಂಕುರಾರ್ಪಣ, ಗರುಡಪಟ ಪ್ರತಿಷ್ಠೆ, ಹೋಮಗಳು, ಹಂಸ ವಾಹನೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 9.30 ರಿಂದ.

■ **ಮೈಸೂರು ಜಿಲ್ಲಾ ಶ್ರೀ ಭಗೀರಥ ಜಯಂತ್ಯುತ್ಸವ ಸಮಿತಿ :** ಶ್ರೀ ಭಗೀರಥ ಜಯಂತಿ, ಬೆಳಗ್ಗೆ 9.30ಕ್ಕೆ ಮೆರವಣಿಗೆ ಕಾರ್ಯಕ್ರಮ, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಅರಮನೆ ಮುಂಭಾಗ, ಮಧ್ಯಾಹ್ನ 12ಕ್ಕೆ ವೇದಿಕೆ ಕಾರ್ಯಕ್ರಮ, ಸ್ಥಳ: ಕರ್ನಾಟಕ ಕಲಾಮಂದಿರ, ಹುಣಸೂರು ರಸ್ತೆ.

■ **ಸಹಜ ಸಮೃದ್ಧ ಸಾವಯವ ಕೃಷಿ ಬಳಗ :** ಹಲಸು ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ಡಾ. ಮಂಜುಳಾ ಪಾವಗಡ ಅವರ ಪಾಲಸಖಿ ಕಾದಂಬರಿ ಲೋಕಾರ್ಪಣೆ, ಜಾನಪದ ಕಲರವ, ಸಾಧಕರಿಗೆ ಸನ್ಮಾನ, ಸ್ಥಳ: ಸಾಹಿತ್ಯ ಪರಿಷತ್ ಭವನ, ಬೆಳಗ್ಗೆ 10ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ–305, ಶ್ರೀ ಬಸವೇಶ್ವರ ಹಾಗೂ ಅಕ್ಕಮಹಾದೇವಿ ಜಯಂತಿ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗ ಹಾಗೂ ಬಸವ ಸಮಿತಿ ಸದಸ್ಯರಿಂದ ಶರಣ, ಶರಣೆಯರ ಪಾತ್ರಾಭಿನಯ ಹಾಗೂ ವಚನ ಗಾಯನ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ಡಾ.ಕೆ.ಎನ್. ಗಿರೀಶ ಅವರ 'ರಾಗೌ ಕಾವ್ಯ : ವಿಭಿನ್ನ ನೆಲೆಗಳು' ಸಂಶೋಧನಾ ಕೃತಿ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಉದ್ಘಾಟನೆ : ಶಾಸಕ ಜಿ.ಡಿ. ಹರೀಶ್‌ಗೌಡ, ಕೃತಿ ಬಿಡುಗಡೆ : ಹಿರಿಯ ಸಾಹಿತಿ ಪ್ರೊ. ಸಿ. ನಾಗಣ್ಣ, ಮುಖ್ಯ ಅತಿಥಿಗಳು : ಶ್ರೀಧರ್ ಹರವೆ, ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಉಪಸ್ಥಿತರು : ಸಾಹಿತಿ ರಾಗೌ, ಡಾ.ಎನ್.ಆರ್. ಚಂದ್ರೇಗೌಡ, ಪ್ರಕಾಶ ಹೆಚ್.ಆರ್. ಮಂಜೇಗೌಡ, ಲೇಖಕ ಡಾ.ಕೆ.ಎನ್. ಗಿರೀಶ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಲೇಖಿಕಾ ಸಾಹಿತ್ಯ ವೇದಿಕೆ :** ಮಹಿಳಾ ಸಾಹಿತ್ಯದ ಹಿರಿಯ ಚೇತನಗಳು ಮಾಲಿಕೆಯಲ್ಲಿ ನಗರದ ಹಿರಿಯ ಲೇಖಕಿ ಸಿ.ಎನ್. ಮುಕ್ತಾ ಅವರೊಂದಿಗೆ ಸಂವಾದ, ಉಪಸ್ಥಿತರು : ಡಾ.ಸುಧಾ ರಮೇಶ್, ಉಷಾ ನರಸಿಂಹನ್, ಕೆರೋಡಿ ಎಂ.ಲೋಲಾಕ್ಷಿ, ಸುಚಿತ್ರಾ ಹೆಗಡೆ, ಸುಜಾತಾ ರವೀಶ್, ಗಾಯತ್ರಿ ಬಿ.ಜಿ., ನಾಗರತ್ನಾ ಬಿ.ಆರ್, ಬಿ.ಕೆ.ಮೀನಾಕ್ಷಿ ಹಾಗೂ ಸವಿತಾ ಪ್ರಭಾಕರ್, ಸ್ಥಳ: ಲಕ್ಷ್ಮೀಪುರಂನ ವಾಣಿವಿಲಾಸ ರಸ್ತೆಯ 877/1ರ 'ಪ್ರಣವ' ಮನೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ವಿ.ಕೆ. ಪಬ್ಲಿಕ್ ಸ್ಕೂಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಕಾರ್ಮಿಕರ ಹಕ್ಕುಗಳ ಸೇವಾ ಸಮಿತಿ :** ಕಾರ್ಮಿಕರ ಹಕ್ಕುಗಳ ದಿನಾಚರಣೆ ಪ್ರಯುಕ್ತ ಕಾರ್ಮಿಕರ ಹಕ್ಕುಗಳ ಕಾರ್ಯಾಗಾರ, ಮುಖ್ಯ ಅತಿಥಿಗಳು : ಕಾನೂನು ನೆರವು ಅಭಿರಕ್ಷಕ ಎಂ.ಎಸ್. ನವೀನ, ಹಿರಿಯ ಕಾರ್ಮಿಕ ನಿರೀಕ್ಷಕರಾದ ಹೆಚ್.ಪಿ. ಜಯಣ್ಣ, ಎಂ.ಸಿ. ಮಾದಪ್ಪ, ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಡಾ. ಸಿ. ರೇಣುಕಾಂಬ, ಭವಿಷ್ಯನಿಧಿ ಕಚೇರಿ ಪ್ರವರ್ತನ ಅಧಿಕಾರಿ ಬಿ.ಎನ್. ರಮೇಶ್, ವಕೀಲ ಎನ್. ಲೋಕೇಶ್, ಸ್ಥಳ: ರೋಟರಿ ಸಭಾಂಗಣ (ಎಸಿ ಹಾಲ್), ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್, ಇಟ್ಟಿಗೆಗೂಡು :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 101ನೇ ವರ್ಷದ ಮೈಸೂರು ಕರಗ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅಂಬಲಿ ಪೂಜೆ, ಅರಿಶಿನ ನೀರಿನ ಓಕುಳಿ, ಸಂಜೆ 4 ಗಂಟೆಯಿಂದ ಭಕ್ತಾದಿಗಳಿಂದ ತಂಬಿಟ್ಟು ಆರತಿ, ರಾತ್ರಿ 7ಕ್ಕೆ ಕರಗವು ದೇವಸ್ಥಾನದಿಂದ ಹೊರಟು ಇಟ್ಟಿಗೆಗೂಡಿನ ಬೀದಿಗಳಲ್ಲಿ ಮೆರವಣಿಗೆ, ರಾತ್ರಿ 12ಕ್ಕೆ ಮಹಾನೈವೇದ್ಯದೊಂದಿಗೆ ಮಹಾಮಂಗಳಾರತಿ, ಸ್ಥಳ: ಅಮ್ಮನವರ ಕರಗ ದೇವಸ್ಥಾನ, ಇಟ್ಟಿಗೆಗೂಡು.

■ **ಅಜ್ಜನ ಮನೆ ಕಲಾ ಪ್ರಪಂಚ :** ವೈಶಾಖ ಶುಕ್ಲ ಪಂಚಮಿ ಶ್ರೀ ಶಂಕರ ನಮನ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪಿ.ಜಿ. ದ್ವಾರಕನಾಥ್, ಹಿರಿಯ ಪತ್ರಕರ್ತ ಕುಂದೂರು ಉಮೇಶ್‌ಭಟ್ಟ, ಡಾ. ಶತಾವಧಾನಿ ಆರ್. ಗಣೇಶ್ ಅವರಿಂದ ವಚನೋಮನ, ವಿದುಷಿ ಡಾ. ಆರ್.ಎನ್. ಶ್ರೀಲತಾ ಅವರ ಶಿಷ್ಯರಿಂದ ಗಾಯನ ನಮನ, ವಾದ್ಯ ನಮನ : ವಿದುಷಿ ರಕ್ಷಿತಾ ರಮೇಶ್–ವೀಣೆ, ವಿದ್ವಾನ್ ಕೇಶವಚಂದ್ರ–ಕೊಳಲು, ವಿದುಷಿ ಶೃತಿ ಸಿ.ವಿ.–ಪಿಟೀಲು, ವಿದ್ವಾನ್ ರಾಧೇಶ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ನೃತ್ಯಗಿರಿ ವಿದುಷಿ ಡಾ. ಕೃಪಾ ಫಡ್ಕೆ ಅವರ ಶಿಷ್ಯರಿಂದ ನೃತ್ಯ ನಮನ, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮಧ್ಯಾಹ್ನ 3 ರಿಂದ.

■ **ಜನ ಚೈತನ್ಯ ಫೌಂಡೇಷನ್ :** ಜೈ ಭೀಮ್ ಗಾಯನೋತ್ಸವ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಂಕಣಕಾರ ಡಾ. ಅಮ್ಮಸಂದ್ರ ಸುರೇಶ್, ವಲಯ ಅರಣ್ಯಾಧಿಕಾರಿ ಪಿ.ಓ. ಮಂಜುನಾಥ್, ಎಂ. ಕಲೀಂ ಅಹಮದ್, ವಕೀಲ ಬಿ.ಎಂ. ಮರಪ್ಪ, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಬುದ್ಧ ಭವನ, ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಹಾಸ್ಟೆಲ್ ಹಿಂಭಾಗ, ವಿದ್ಯಾರಣ್ಯಪುರಂ, ಸಂಜೆ 4ಕ್ಕೆ.

■ **ಬಾಲಮುರಳಿ ಮ್ಯೂಸಿಕಲ್ ಗ್ರೂಪ್ :** ಮಧುರ ಗೀತೆಗಳ ಸುಮಧುರ ಸಂಜೆ ಕರೋಕೆ ಗಾಯನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ. ನಾಗರಾಜ್ ವಿ. ಬೈರಿ, ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್ ಅಧ್ಯಕ್ಷ ನಾಗರಾಜ ಗರ್ಗೇಶ್ವರಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜು ಮಳಿಗೆ ಸರ್ಕಲ್, ಸಂಜೆ 4.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ.ಶ್ರೀರಾಂಭಟ್ ಮತ್ತು ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, ನಿರ್ಮಾಣ–ನಂದನ್‌ಕುಮಾರ್. ಎಲ್. ಬಿ., 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಲಭ್ಯವಿರುವ ವಿಶೇಷ ಆರೋಗ್ಯ ಸೌಲಭ್ಯಗಳು ಮತ್ತು ಆರೈಕೆ ಕುರಿತು, ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ. ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH -TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಸದ್ವಿದ್ಯಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ ಭಾಗ–2, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಕೊಳ್ಳೇಗಾಲ ತಾಲೂಕು ಸತ್ತೇಗಾಲದ ಶಿವಮ್ಮ ಮತ್ತು ಸಂಗಡಿಗರಿಂದ ನಂಜುಂಡೇಶ್ವರನ ಹಾಡು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ–ಪ್ರಸಂಗ– ಪಾರಿಜಾತಾಪಹರಣ, ಪ್ರಸ್ತುತಿ–ಯಕ್ಷಾರಾಧನ ಕಲಾ ಕೇಂದ್ರ ಉರ್ವ, ಮಂಗಳೂರು ಸದಸ್ಯರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ,ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಮುಂಬೈನಲ್ಲಿ ನಡೆಯುತ್ತಿರುವ ವರ್ಲ್ಡ್ ಆಡಿಯೋ ವಿಷುವಲ್ ಅಂಡ್ ಎಂಟರ್ ಟೈನ್ಮೆಂಟ್ ಸಮಿಟ್‌ನ ನಾಲ್ಕನೇ ದಿನದ ಕಾರ್ಯ ಕಲಾಪಗಳ ವರದಿ, 9.15 ರಂಗಗೀತೆಗಳು–ಜಿ. ಆರ್. ರಾಮಚಂದ್ರ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಪಂಡಿತ್ ವಸಂತ್ ರಾವ್ ದೇಶಪಾಂಡೆ–ಗಾಯನ

ನಕ್ಕರೆ ಅದೇ ಸ್ವರ್ಗ

ಗುಂಡ : ನಿನಗೆ ಯಾವ ತರದ ಹೆಂಡತಿ ಬೇಕು?
ತಿಮ್ಮ : ಚಂದ್ರನಂತೆ ಇರೋಳು!
ಗುಂಡ : ಚಂದ್ರನಂತೆ ಅಂದರೆ?
ತಿಮ್ಮ : ಅಂದರೆ ಅವಳು ರಾತ್ರಿ ಬರಬೇಕು, ಹಗಲು ಹೊರಟು ಹೋಗಬೇಕು!

ಮೈಸೂರು ಮಿತ್ರ

ಭಾನುವಾರ, 4 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಿಟ್ಟು ಮಾಡಿಕೊಳ್ಳುವುದೆಂದರೆ ನಾವು ವಿಷ ಕುಡಿದು ಇನ್ನೊಬ್ಬರು ಸಾಯಲಿ ಎಂದು ಹಾರೈಸಿದಂತೆ. – ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸುಖ ಬಂದಾಗ ಹಿಗ್ಗಬೇಡ, ಕಷ್ಟ ಬಂದಾಗ ಕುಗ್ಗಬೇಡ

ನಿಮ್ಮ ಪತ್ರಗಳು

■ 22 ಮಂದಿಗೆ 625ಕ್ಕೆ 625!

ಮಾನ್ಯರೆ,

ಇದು ಈಗಷ್ಟೇ ಪ್ರಕಟಗೊಂಡ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಝಲಕ್ ! ಈ ಬಾರಿಯೂ ಬಾಲಕಿಯರದ್ದೇ ಮೇಲುಗೈ. ಎಂದಿನಂತೆ ದಕ್ಷಿಣ ಕನ್ನಡ ನಂಬರ್ ಒನ್, ಕಲಬುರ್ಗಿ ಕೊನೆ. ಇವೆಲ್ಲ ಮಾಮೂಲಿ ಅಂದುಕೊಂಡರೂ, ಒಂದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 22 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿ, ಪ್ರಥಮ ರ್‍ಯಾಂಕ್ ಪಡೆದಿರುವುದು ಏನನ್ನು ಸೂಚಿಸುತ್ತದೆ. ಸಾಮಾನ್ಯವಾಗಿ, ಪ್ರಥಮ, ದ್ವಿತೀಯ, ತೃತೀಯ ಅಂಕಗಳೆಲ್ಲಾ ಕೇವಲ ಕೆಲವರಿಂದಷ್ಟೇ ಹಂಚಿಕೊಳ್ಳಲಾಗುತ್ತದೆ. ಆದಾ ಅವಧಿಯ. ಒಂದನೇ ರ್‍ಯಾಂಕಿಗೆ ಒಬ್ಬರೇ ಎನ್ನುವುದನ್ನೂ ನಾವೆಲ್ಲ ದಶಕಗಳಿಂದ ನೋಡುತ್ತಾ ಬಂದಿರುವ ಸನ್ನಿವೇಶ. ಉಳಿದಂತೆ, ಎರಡನೆಯ ಮತ್ತು ಮೂರನೇ ಸ್ಥಾನದಲ್ಲಿ ಒಂದಕ್ಕಿಂತ ಹೆಚ್ಚು ಇರುವುದೂ ಇರುತ್ತಿತ್ತು. ಇಂದಿನ ಈ ಫಲಿತಾಂಶ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಆಮೂಲಾಗ್ರ ಬದಲಾವಣೆ ಅನ್ನಬೇಕೋ ಅಥವಾ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಅನ್ನಬೇಕೋ ತಿಳಿಯದಂತಾಗಿದೆ. ಪರೀಕ್ಷೆ ಅಂದರೆ ಸ್ಪರ್ಧೆ ಇದ್ದೇ ಇರುತ್ತದೆ. ಕೇವಲ ಅರ್ಧ ಅಂಕಗಳಿಂದ ಅಥವಾ ಒಂದೆರಡು ಅಂಕಗಳ ವ್ಯತ್ಯಾಸದಿಂದ ಪ್ರಥಮ ಸ್ಥಾನ ತಪ್ಪುವುದನ್ನೂ ಕಂಡಾಗಿದೆ. ಆದರೆ ಇಂದು ಮೊದಲ ಸ್ಥಾನದಲ್ಲಿರುವವರೇ ಜಾಸ್ತಿಯಾಗಿದ್ದು ಅಷ್ಟೊಂದು ಉತ್ಸಾಹದಾಯಕ ಬೆಳವಣಿಗೆ ಅಲ್ಲ. ಇಂದಿನ ಪರೀಕ್ಷೆಗಳಲ್ಲಿ, ಭಾಷೆ, ಇತಿಹಾಸ, ಭೂಗೋಳಗಳಂತಹ ವಿಷಯದಲ್ಲೂ ನೂರಕ್ಕೆ ನೂರು ಅಂದರೆ ಇದೇನು ಗಣಿತ, ವಿಜ್ಞಾನ ಇದ್ದ ಹಾಗೆಯೇ? ಎಲ್ಲೂ ಏನೂ ತಪ್ಪೇ ಆಗಿಲ್ಲ ಅಂದರೆ, ಮೌಲ್ಯಮಾಪನವನ್ನೇ ಪ್ರಶ್ನಿಸಬೇಕೋ, ಮೌಲ್ಯಮಾಪನದ ಪದ್ಧತಿಯೇ ಬದಲಾಗಿದೆಯೋ, ಎಲ್ಲದಕ್ಕೂ ಸಿದ್ಧ ಉತ್ತರ ಮೊದಲೇ ಕೊಡಲ್ಪಡುತ್ತದೋ ಯಾವುದೂ ಅರ್ಥವಾಗುತ್ತಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ ಉತ್ತರಗಳೂ ಅಷ್ಟೊಂದು ಸರಿಯಾಗಲು ಹೇಗೆ ಸಾಧ್ಯ? ಭಾಷಾ ಶೈಲಿ, ಅಕ್ಷರ, ವಿಷಯ ಮಂಡನೆ, ಪ್ರಶ್ನೆಗೆ ತಕ್ಕ ಉತ್ತರ ರೂಪಿಸುವುದು ಇವೆಲ್ಲ ಮುಖ್ಯವಾಗಿರುವಾಗ 22 ವಿದ್ಯಾರ್ಥಿಗಳು ಎಲ್ಲೂ ಏನೇ ತಪ್ಪು ಮಾಡೇ ಇಲ್ಲ ಎಂದರೆ? ಇಂದಿನದು ಅಂಕಾಧಾರಿತ ಶಿಕ್ಷಣ ಪದ್ಧತಿ ಎಂಬುದನ್ನು ಒಪ್ಪಿಕೊಂಡರೂ, ಆ 22 ವಿದ್ಯಾರ್ಥಿಗಳ ಐಕ್ಯೂ ಒಂದೇ ರೀತಿಯಿದ್ದು, ಮೌಲ್ಯಮಾಪನ ಮಾಡುವವರಿಗೆ ನೂರಕ್ಕೆ ನೂರು ಕೊಡದೇ ಅನ್ಯ ದಾರಿಯೇ ಇರಲಿಲ್ಲವೆ? ಅಥವಾ ಇಂದಿನ ಮೌಲ್ಯಮಾಪನದ ಪದ್ಧತಿಯೇ ಬದಲಾಗಿರಬಹುದೆ?

ಇದು ಇಷ್ಟಕ್ಕೇ ಸಮಾಪ್ತಿ ಆಗುತ್ತದೆ ಅನ್ನಲೂಬಾರದು. ಗಣಿತದಲ್ಲೇ ನೂರಕ್ಕೆ 99 ಪಡೆದವರ ದಂಡೇ ಇದ್ದಿರಲೂ ಸಾಕು. ಅವರೆಲ್ಲ ಮರುಮಾಪನಕ್ಕೆ ಅರ್ಜಿ ಸಲ್ಲಿಸಲೂಬಹುದು. ಕೇವಲ ಗಣಿತವಷ್ಟೇ ಅಲ್ಲ, ಕನ್ನಡದಲ್ಲಿ, ಹಿಂದಿಯಲ್ಲಿ, ಇತಿಹಾಸದಲ್ಲೂ ಅಂಕ ನಿರೀಕ್ಷಿಸಿದಷ್ಟು ಬಂದಿಲ್ಲ ಅಂತ ಮರುಮಾಪನಕ್ಕೆ ಅರ್ಜಿ ಸಲ್ಲಿಸುವವರೂ ಸಾಕಷ್ಟಿದ್ದಾರೆ. ಅವರೆಲ್ಲ ಕ್ರಮಾಂಕದಲ್ಲಿ ಮೇಲೇರುವ ಸಾಧ್ಯತೆಗಳನ್ನೂ ತಳ್ಳಿಹಾಕಲಾಗದು.

ನಾವೆಲ್ಲ ಎಸ್‌ಎಸ್‌ಎಲ್‌ಸಿ, ಪದವಿ, ಸ್ನಾತಕೋತ್ತರ ಪರೀಕ್ಷೆಗಳನ್ನು ಬರೆದಾಗ, ಅದೆಷ್ಟೇ ಚುರುಕು ಎಂದುಕೊಂಡವರೂ ನೂರಕ್ಕೆ 55, 60 ಅಥವಾ ಹೆಚ್ಚೆಂದರೆ 65 ತಲುಪುವುದೇ ಅಪರೂಪವಾಗಿತ್ತು. ಆದರೆ ಇಷ್ಟು ಅಂಕ ಸಾಮಾನ್ಯರೂ ಪಡೆಯುತ್ತಾರೆ. ಹಾಗೆ ನೋಡಿದರೆ, ದ್ವಿತೀಯ, ತೃತೀಯ ದರ್ಜೆಯಲ್ಲಿ ಪಾಸಾಗುವವರೇ ಕಡಿಮೆ ಅಂದರೂ ತಪ್ಪಾಗಲಾರದು. ಇದನ್ನು ಸಡಿಲು ಮೌಲ್ಯಮಾಪನ ಅಂದುಕೊಂಡರೂ ಸಮಾಧಾನ ಸಿಗದು. ಈ ರೀತಿ ಅಂಕ ಪಡೆದವರಿಗೂ ಇನ್ನೊಂದು ರೀತಿಯ ಮೌಖಿಕ ಪರೀಕ್ಷೆ ಇಟ್ಟು, ಕೌಂಟರ್ ಚೆಕ್ ಮಾಡುವಂತಿದ್ದರೆ ಹೇಗಿದ್ದೀತು? ಒಂದೊಮ್ಮೆ ಹಾಗಾದಲ್ಲಿ, ಗಟ್ಟಿ ಕಾಳು ಮಾತ್ರ ಉಳಿದು ಜೊಳ್ಳು ಸೋಸಿ ಹೋದೀತೋ ಏನೋ? ಒಂದೆಡೆ ಪರ್ಸಂಟೇಜ್ ಫಲಿತಾಂಶ ಕುಗ್ಗುತ್ತಿದೆ. ಇನ್ನೊಂದೆಡೆ ಟಾಪರ್ಸ್ ಸಂಖ್ಯೆ ಹೆಚ್ಚುತ್ತಿದೆ. ಇದು ನಿಜವಾದ ಸ್ಪರ್ಧಾತ್ಮಕ ವಾತಾವರಣ ತಂದೀತೆ? ಎಲ್ಲೋ ಮಕ್ಕಳ ಮನಸ್ಥಿತಿಗೆ ಆಘಾತ ತರುತ್ತಿರಬಹುದೆ? ಶಿಕ್ಷಣ ತಜ್ಞರು ವಿಚಾರಿಸುವಂತಾಗಲಿ. ಈ ಬಾರಿಯ ದಾಖಲೆಯ ಫಲಿತಾಂಶ ಚರ್ಚೆಗೆ ಅವಕಾಶ ಮಾಡಿಕೊಡಲಿ.

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

■ ಸಮರ್ಪಕ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಸಾತಗಳ್ಳಿ ಡಿಪೋದಿಂದ ಸಂಚರಿಸುವ ರೂಟ್ ನಂ.186 ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಬಂದರೆ ಒಟ್ಟೊಟ್ಟಿಗೆ ಒಂದರ ಹಿಂದೆ ಒಂದರಂತೆ ಮೂರು–ನಾಲ್ಕು ಬಸ್ಸುಗಳು ಬರುತ್ತವೆ. ಈ ಬಸ್‌ಗಳು ಬಂದು ಹೋದ ಮೇಲೆ ಮತ್ತೆ ಒಂದು ಗಂಟೆ, ಎರಡು ಗಂಟೆಗಳ ಕಾಲ ಬಸ್ ಬರುವುದಿಲ್ಲ. ಪ್ರಯಾಣಿಕರು ಮತ್ತು ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿ ಕಾದು ಕುಳಿತುಕೊಳ್ಳಬೇಕಾಗಿದೆ. ಈ ರೂಟ್‌ನ 186 ಬಸ್‌ಗಳಿಗೆ ಸಿಬಿಎಸ್‌ನಿಂದ ಮಾದೇಗೌಡ ಸರ್ಕಲ್, ರಾಜೀವ್‌ನಗರ ಈ ಬಸ್‌ಗಳಿಗೆ ಕೊನೆಯ ನಿಲ್ದಾಣ. ಆದರೆ ಕೆಲವು ಚಾಲಕ ಮತ್ತು ನಿರ್ವಾಹಕರು ಶಿವಣ್ಣ ಸರ್ಕಲ್‌ನಿಂದ ಎಡಕ್ಕೆ ತಿರುಗಿಸಿಕೊಂಡು ಹೊರಟು ಹೋಗುತ್ತಾರೆ. ಮಾದೇಗೌಡ ಸರ್ಕಲ್‌ಗೆ ಸುಮಾರು ಅರ್ಧ ಕಿಲೋ ಮೀಟರ್ ಆಗುತ್ತದೆ. ಚಾಲಕ ಮತ್ತು ನಿರ್ವಾಹಕರು ಈ ರೀತಿ ಮಾಡುವುದರಿಂದ ಹಿರಿಯ ನಾಗರಿಕರು, ಹೆಂಗಸರು ಮತ್ತು ಮಕ್ಕಳು ಶಿವಣ್ಣ ಸರ್ಕಲ್‌ನಿಂದ ಮಾದೇಗೌಡ ಸರ್ಕಲ್‌ಗೆ ನಡೆದುಕೊಂಡು ಹೋಗಲು ತುಂಬಾ ತೊಂದರೆಯಾಗುತ್ತದೆ. ಇದರ ಬಗ್ಗೆ ಮಹಿಳೆಯರು ಮತ್ತು ಹಿರಿಯ ನಾಗರಿಕರು ಬಸ್ಸಿನ ಚಾಲಕ ಮತ್ತು ನಿರ್ವಾಹಕರಿಗೆ ಮನವಿ ಮಾಡಿಕೊಂಡರೆ; ನೀವು ಬಸ್ಸಿನಲ್ಲಿ ಫ್ರೀಯಾಗಿ ಬಂದಿದ್ದೀರಿ. ಅಲ್ಲಿಂದ ಆಟೋ ಮಾಡಿಕೊಂಡು ಹೋಗಿ ಎಂದು ಒಂದು ತರಹದ ಉಡಾಫೆ ಉತ್ತರವನ್ನು ನೀಡುತ್ತಾರೆ. 14.1.2025 ಮತ್ತು 18.1.2025 ರಂದು ಗಾಡಿ ನಂ.4922 ರಲ್ಲಿ ನಾನು ಸಿಬಿಎಸ್‌ನಿಂದ ಮಾದೇಗೌಡ ಸರ್ಕಲ್‌ಗೆ ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡಿದೆ. ಆದರೆ ಈ ಬಸ್ ಅನ್ನು ಶಿವಣ್ಣ ಸರ್ಕಲ್‌ಗೆ ಲಾಸ್ಟ್ ಸ್ಟಾಪ್ ಮಾಡಿದ್ದರು. ಇದರ ಬಗ್ಗೆ ನಾನು ಚಾಲಕ ಮತ್ತು ನಿರ್ವಾಹಕರಿಗೆ ವಿಚಾರಿಸಿದರೆ, ಚಾಲಕ ನಾನು ಹೋಗಲು ಸಿದ್ಧ. ಆದರೆ ನಿರ್ವಾಹಕ ಹೋಗಲು ಬಿಡುತ್ತಿಲ್ಲ ಎಂದು ಉತ್ತರಿಸಿದರು. ನಿರ್ವಾಹಕರ ಬಳಿ ವಿಚಾರಿಸಿದೆ. ನೀನು ಯಾರು ನನ್ನನ್ನು ಕೇಳಲು ಬಂದು ನನ್ನ ಜೊತೆ ವಾಗ್ವಾದಕ್ಕೆ ಇಳಿದು ಏಕವಚನದಲ್ಲಿ ಉತ್ತರ ಕೊಟ್ಟರು. ಇವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಮನವಿ.

ಸಾತಗಳ್ಳಿ ಡಿಪೋಯಿಂದ ಸಂಚರಿಸುವ ರೂಟ್ ನಂ.186ಎ/1 ಬಸ್ ವಾರಕ್ಕೆ ಒಂದು ದಿನ ಬರುತ್ತದೆ. ಮಾದೇಗೌಡ ಸರ್ಕಲ್, ರಾಜೀವ್‌ನಗರದಿಂದ ಉದಯಗಿರಿಗೆ ಸಂಚರಿಸುತ್ತದೆ. ನಾವು ರಾಜೀವ್‌ನಗರದಿಂದ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 8ಕ್ಕೆ ಹೋಗಲು ಮತ್ತು ಕರೆಂಟ್ ಬಿಲ್ ಕಟ್ಟಲು, ಪಿಎನ್‌ಟಿ ಕ್ವಾಟ್ರಸ್ ಹತ್ತಿರ ಇರುವ ಚೆಸ್ಕಾಂ ಕಚೇರಿಗೆ ಹೋಗಲು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಸಮರ್ಪಕ ಬಸ್ ಸೌಕರ್ಯ ಕಲ್ಪಿಸಬೇಕೆಂದು ಮನವಿ.

– ರಿಯಾಜ್ ಪಾಷಾ, ಸಾತಗಳ್ಳಿ, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 96639 96390

ಹಳ್ಳಿ ಹಕ್ಕಿ ಹಾಡು



ಸಿದ್ದರಾಮಯ್ಯ ಸರಕಾರದ ಆಯ! ನಾಡಿನ ಜನರ ಸಂಸ್ಕಾರಗಳು ವ್ಯಯ!!



> “ ಸಮಾಜವನ್ನು ಶಕ್ತಿಹೀನ ಮಾಡುತ್ತಾ ನಾವು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ತಿಂಗಳಿಗೆ ತಲಾ ಎರಡು ಸಾವಿರ ರೂಪಾಯಿ ಕೊಡುತ್ತಿದ್ದೇವೆ. ನಮ್ಮದು ನುಡಿದಂತೆ ನಡೆವ ಸರಕಾರ ಎಂದು ಮುಖ್ಯಮಂತ್ರಿಗಳಾದಿಯಾಗಿ, ಮಂತ್ರಿ ಮಹೋದಯರು, ಶಾಸಕರಾದಿಯಾಗಿ ಬೊಬ್ಬೆ ಹೊಡೆಯುತ್ತಿದ್ದಾರೆ. ಮಕ್ಕಳ, ಯುವಕರ ಮನಸ್ಸನ್ನು ಹಾಳು ಮಾಡಿ ತಾಯಂದಿರಿಗೆ ಉಚಿತ ಕಾರ್ಯಕ್ರಮಗಳನ್ನು ಕೊಡುವುದರಿಂದ ಸರ್ಕಾರ ಸಾಧಿಸಿದ್ದಾದರೂ ಏನು?

ಕರ್ನಾಟಕ ರಾಜ್ಯ ಸರಕಾರದ 2025–26ರ ಆಯ–ವ್ಯಯದಲ್ಲಿ ವಿವಿಧ ಬಾಬ್ತುಗಳ ತೆರಿಗೆಯನ್ನ ಅತೀ ಹೆಚ್ಚು ಮಾಡಿ ಸಾಮಾನ್ಯ ಜನರ ನಡು ಮುರಿಯಲಾಗಿದೆ. ಈ ಸರಕಾರದ ವಿಶೇಷವೆಂದರೆ, ಆಯ–ವ್ಯಯ ಮಂಡಿಸುವ ಮೊದಲೇ ಸಾಕಷ್ಟು ಬೆಲೆ ಏರಿಸಿ,



ಆಯ–ವ್ಯಯದ ಬಳಿಕವೂ ಬೆಲೆ ಏರಿಸುತ್ತಿರುವುದು! ಇದು ಅನ್ಯಾಯದ ಪರಮಾವಧಿ.

ಹಾಲು, ಆಲ್ಕೊಹಾಲ್, ನೀರು, ವಿದ್ಯುಚ್ಛಕ್ತಿ, ಬಸ್ ದರ, ಮೆಟ್ರೋ ದರ, ನೆಲ ಕಂದಾಯ, ಸ್ಟ್ಯಾಂಪ್ ಡ್ಯೂಟಿ, ಆಹಾರ ಪದಾರ್ಥಗಳು, ಇಂಧನ, ಶಿಕ್ಷಣ ಶುಲ್ಕ, ಆರೋಗ್ಯ ಶುಲ್ಕ ಮುಂತಾದವುಗಳ ಮನಸ್ಸೋ ಇಚ್ಛೆ ಏರಿಕೆ ಮಾಡಿ, ಈಗ ಮತ್ತೊಮ್ಮೆ ಆಲ್ಕೊಹಾಲ್ ಬೆಲೆ ಏರಿಸಲು ತಯಾರಿ ನಡೆಸಿದೆ. ಅಬಕಾರಿ ಬಾಬ್ತಿನಿಂದ ನಲವತ್ತು ಸಾವಿರ ಕೋಟಿಗೂ ಮೀರಿದ ಆದಾಯವನ್ನು ಅಂದಾಜಿಸಲಾಗಿದೆ.

ಇತ್ತ ಕೇಂದ್ರ ಸರಕಾರ ಇವೆಲ್ಲವುಗಳ ಮೇಲೆ 18% ಜಿ.ಎಸ್.ಟಿ. ಹಾಕಿದೆ. ಬೆಳಿಗ್ಗೆ ಎದ್ದು ಬೀಡಿ, ಸಿಗರೇಟ್ ಒಂದು ಧಂ ಹೊಡೆಯುವುದರೊಂದಿಗೆ; ಕಾಫಿ–ಟೀ ಹೀರುವ ಚಟದೊಂದಿಗೆ; ರಾತ್ರಿ ಗುಂಡು ಹಾಕಿ ಮಲಗುವ ತನಕವೂ ಜಿ.ಎಸ್.ಟಿ. ಕಟ್ಟುತ್ತಲೇ ಸೋತು ಸೊರಗಿ ನಿದ್ರೆಗೆ ಜಾರಬೇಕು. ಏನ್ರೀ ಇದು ಎಂದು ಕೇಂದ್ರ ಸರಕಾರದವರನ್ನು ಕೇಳಿದರೆ ದೇಶಕ್ಕೋಸ್ಕರ ಇಷ್ಟು ಕಟ್ಟಲಾಗುವುದಿಲ್ಲವೇ ಎನ್ನುತ್ತಾರೆ. ರಾಜ್ಯ ಸರಕಾರದವರು ನಮ್ಮ ತೆರಿಗೆ ಯಾವ ಮಹಾ, ಕೇಂದ್ರ ಸರಕಾರದ ತೆರಿಗೆ ನೋಡ್ರೀ ಎನ್ನುತ್ತಾರೆ. ಒಟ್ಟಾರೆ, ಕೇಂದ್ರ ಮತ್ತು ರಾಜ್ಯ ಸರಕಾರಗಳ ತೆರಿಗೆಯ ಭಾರದಿಂದ ಶ್ರೀಸಾಮಾನ್ಯನ ಸೊಂಟ ಬಾಗುತ್ತಲೇ ಇದೆ.

ಚಟಗಳ ಬಾಬ್ತಿನ ಮೇಲೆ ತೆರಿಗೆ ವಿಪರೀತ ಹಾಕುವುದು ಮನುಷ್ಯನ ಸಾಮಾಜಿಕ ಸಂಸ್ಕಾರಗಳ ಹಿನ್ನೆಲೆಯಲ್ಲಿ ಅತ್ಯಂತ ಕೆಟ್ಟ ಪರಿಣಾಮಗಳನ್ನು ಬೀರುವಂತಹದು. ಸರಕಾರ ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳಲು ಹಾಕಿರುವ, ಹಾಕುತ್ತಿರುವ ತೆರಿಗೆ ಸಾಮಾನ್ಯ ಮನುಷ್ಯನಿಂದ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾಡಿನ ಜನರ ಬೆವರಿನ ಶ್ರಮದ ದುಡಿಮೆಯಿಂದ ತುಂಬುವ ಖಜಾನೆ, ಅದೇ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆಯೇ ಎಂಬ ಪ್ರಶ್ನೆಗೆ ಸರ್ಕಾರದ ಉತ್ತರ ಸಮಂಜಸವಾದುದಲ್ಲ.

ಅಬಕಾರಿ ಇಲಾಖೆಯಲ್ಲಿ 40 ಸಾವಿರ ಕೋಟಿ ತೆರಿಗೆಯನ್ನು ನಿರೀಕ್ಷಿಸುವ ಸರಕಾರ ಆ ಇಲಾಖೆಯ ಅಧಿಕಾರಿಗಳಿಗೆ ಬಾರುಕೋಲು ಹಿಡಿದು ಹೇಳುತ್ತದೆ, 'ನಮಗದೆಲ್ಲಾ ಗೊತ್ತಿಲ್ಲ ಅಷ್ಟು ಕಲೆಕ್ಷನ್ ಆಗಲೇಬೇಕು'. ಇದರ ಜೊತೆಗೆ ಪೊಲೀಸ್ ಇಲಾಖೆ ಮತ್ತು ಅಬಕಾರಿ ಇಲಾಖೆಗೆ ಮಾಮೂಲಿ ಕೊಡಲೇಬೇಕು.

ನಾವುಗಳು ವಿದ್ಯಾರ್ಥಿಗಳಾಗಿದ್ದ ಸಮಯದಿಂದಲೂ ನೋಡುತ್ತಿದ್ದೇವೆ, ಕಾಲೇಜು ಹುಡುಗರು ಆಗಾಗ ಬಿಯರ್ ಕುಡಿಯುತ್ತಾರೆ. ಈಗ ಅದು ಚಟವಾಗಿದೆ. ಬಿಯರ್ ಬೆಲೆ ದುಬಾರಿಯಾಗುತ್ತಿದೆ. ಆಯ–ವ್ಯಯಕ್ಕಿಂತ ಮುಂಚೆ ಇದ್ದ ಬಿಯರ್ ಬೆಲೆ 100 ರೂಪಾಯಿ ಗಳು. ಆಯ–ವ್ಯಯದ ನಂತರ 155 ರೂಪಾಯಿ ಆಯಿತು. ಈಗ ಮತ್ತೊಮ್ಮೆ ಬೆಲೆ ಏರಿಸುವ ಒಂದು ಪ್ರಸ್ತಾವನೆಯಲ್ಲಿ ಬಿಯರ್ ಬಾಟಲ್ ಬೆಲೆ 200 ರೂಪಾಯಿ ಆಗಲಿದೆ. Cheaper Liquor (ತೀರಾ ಸಾಮಾನ್ಯರ, ಶ್ರಮಿಕರ Drink) 90 MLಗೆ 40/– ರೂಪಾಯಿ ಇದ್ದದ್ದು ಈಗ 50/– ರೂಪಾಯಿ ಆಗುತ್ತಿದೆ.

ನಿಶೆ ಬಾಬ್ತಿನ ಹಣ ಜಾಸ್ತಿ ಆದಂತೆಲ್ಲಾ ಯುವಕರು ಕಡಿಮೆ ಹಣದಲ್ಲಿ ನಿಶೆ ಬರುವಂತಹ ಗಾಂಜಾ, ಅಫೀಮು ಮುಂತಾದ ಪದಾರ್ಥಗಳತ್ತ ಜಾರುತ್ತಿದ್ದಾರೆ. ಇತ್ತೀಚಿನ ಕೆಲವು ಹೊಸ ವಿಧಾನಗಳಲ್ಲಿ ಟೈರ್–ಟ್ಯೂಬ್ ಗಳಿಗೆ ಪಂಕ್ಚರ್ ಹಾಕುವಾಗ ಉಪಯೋಗಿಸುವ ಸಲ್ಯೂಶನ್ ಅನ್ನು ಬಟ್ಟೆಗೆ ಸುತ್ತಿ ಅದರ ವಾಸನೆಯನ್ನ ಧಂ ರೀತಿ ಎಳೆದುಕೊಂಡರೆ ನಿಶೆ ಬರುತ್ತದಂತೆ. ಇಂತಹ ಹತ್ತು ಹಲವು ಮಾರ್ಗ ಹಿಡಿದು ನಿಶೆ ಏರಿಸಿಕೊಳ್ಳುತ್ತಿದ್ದು; ಇದರಿಂದ ಆರೋಗ್ಯದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುತ್ತದೆ. ಇಂತಹ ಹಲವಾರು ಪ್ರಯೋಗಗಳು ಯುವಕರಿಗೆ ದೈಹಿಕ ಮತ್ತು ಮಾನಸಿಕವಾಗಿ ಕೆಟ್ಟ ಪರಿಣಾಮಗಳನ್ನ ಬೀರುತ್ತಿವೆ.

ಹೆಚ್ಚುತ್ತಿರುವ ಅಬಕಾರಿ ತೆರಿಗೆಯಿಂದ ಬಹಳ ಯುವಕರು ದಾರಿ ತಪ್ಪುತ್ತಿದ್ದಾರೆ. ಹಳ್ಳಿಗಾಡಿನ ಮತ್ತು ನಗರ ಪ್ರದೇಶದಲ್ಲಿಯೂ ಗೂಡಂಗಡಿಗಳಲ್ಲಿ ಕಲಬೆರಕೆ ಮದ್ಯದ ಬಾಟಲಿಗಳು ಕೈಚಾಚಿದಲ್ಲೆಲ್ಲಾ ಸಿಗುತ್ತವೆ. ಗಾಂಜಾ, ಅಫೀಮು ಪೊಟ್ಟಣಗಳೂ ಸಹ ಸಿಗುತ್ತಿವೆ.

ಬಿಯರ್ ಬದಲು ಯುವಕರು ಗೂಡಂಗಡಿಗಳಲ್ಲಿ ಕಡಿಮೆ ದರಕ್ಕೆ ಸಿಗುವ ಗಾಂಜಾ ಪೊಟ್ಟಣಗಳನ್ನು ತೆಗೆದುಕೊಂಡು ಅದೇ ಅಂಗಡಿಯಲ್ಲಿ ಕಡಿಮೆ ದರದ ಸಿಗರೇಟ್ ಪ್ಯಾಕ್‌ಗಳನ್ನು ಖರೀದಿಸಿ, ಸೂಕ್ಷ್ಮವಾಗಿ ಸಿಗರೇಟಿನ ಹೊಗೆಸೊಪ್ಪನ್ನು ತೆಗೆದು, ಅದರಲ್ಲಿ ಗಾಂಜಾ ಪುಡಿಯನ್ನು ಸೇರಿಸಿ ಧಂ ಹೊಡೆದು ನಶೆ ಏರಿಸಿಕೊಂಡು ತೂರಾಡುತ್ತಾ ಮನೆ ಸೇರುತ್ತಾರೆ. ಮನೆಗೆ ಹೋದ ಯುವಕ ಅಲ್ಲಿ ಯಾವ ಆಹಾರವನ್ನೂ ಸೇವಿಸದೆ ಮತ್ತಿನಿಂದ ನಿದ್ರೆಗೆ ಜಾರುತ್ತಾನೆ. ಬೆಳಿಗ್ಗೆ ಎದ್ದಾಗ ಅವನ ಕೈ–ಕಾಲು ಜೋಮು ಬಂದು ಓಡಾಡಲಾಗದೇ ಒಂದೆಡೆ ಬಿದ್ದುಕೊಳ್ಳುತ್ತಾನೆ. ಅವನ ದೈನಂದಿನ ಚಟುವಟಿಕೆಗಳು ಸ್ತಬ್ಧಗೊಳ್ಳುತ್ತವೆ. ಅವನ ಆದಾಯ ಬಂದ್ ಆಗುತ್ತದೆ. ಕೊನೆಗೆ ಕುಟುಂಬ ಬೀದಿಗೆ ಬೀಳುತ್ತದೆ.

ಈಗಂತೂ ಈ ದಂಧೆ, ಧಂ ಸಮಾಜದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತಿದೆ. ಇದೆಲ್ಲಾ ಪೊಲೀಸ್ ಮತ್ತು ಅಬಕಾರಿ ಇಲಾಖೆಗೆ ಚೆನ್ನಾಗಿ ಗೊತ್ತಿದೆ. ಆದರೇನು ! ಯಾರಾದರೂ ಸಾಯಲಿ ಸರಕಾರದ ಖಜಾನೆ ತುಂಬಬೇಕು. ಇದು ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು, ಸಾಮಾನ್ಯರಿಗೆಲ್ಲಾ ತಿಳಿಯದ ವಿಷಯವೇನೂ ಅಲ್ಲ.

ಹೀಗೆ ಸಮಾಜವನ್ನು ಶಕ್ತಿಹೀನ ಮಾಡುತ್ತಾ ನಾವು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ತಿಂಗಳಿಗೆ ಎರಡು ಸಾವಿರ ರೂಪಾಯಿ ಕೊಡುತ್ತಿದ್ದೇವೆ. ನಮ್ಮದು ನುಡಿದಂತೆ ನಡೆವ ಸರಕಾರ ಎಂದು ಮುಖ್ಯಮಂತ್ರಿಗಳಾದಿಯಾಗಿ, ಮಂತ್ರಿ ಮಹೋದಯರು, ಶಾಸಕರಾದಿಯಾಗಿ ಬೊಬ್ಬೆ ಹೊಡೆಯುತ್ತಿದ್ದಾರೆ. ಮಕ್ಕಳ, ಯುವಕರ ಮನಸ್ಸನ್ನು ಹಾಳು ಮಾಡಿ ತಾಯಂದಿರಿಗೆ ಉಚಿತ ಕಾರ್ಯಕ್ರಮಗಳನ್ನು ಕೊಡುವುದರಿಂದ ಸರಕಾರ ಸಾಧಿಸಿದ್ದಾದರೂ ಏನು?

ಸಿದ್ದರಾಮಯ್ಯನವರ ಮಂತ್ರಿಮಂಡಲ ಬರಿಯ 'ಹೌದಪ್ಪ'ಗಳ ಚಾವಡಿಯಾಗಿದ್ದು, ಅನಿಷ್ಟ ಕಾರ್ಯಕ್ರಮಗಳ ವಿರುದ್ಧ ಕನಿಷ್ಠ ಪ್ರತಿಭಟನೆಯನ್ನೂ ಮಾಡಲಾಗದ ಅಶಕ್ತ ಮಂತ್ರಿಗಳು ಮತ್ತು ಶಾಸಕರುಗಳಿಗೆ ಸಮಾಜ ಒಳಗೊಳಗೇ ಶಾಪ ಹಾಕುತ್ತಿದೆ. ಇದರ ಪರಿಣಾಮ ಚುನಾವಣೆಯಲ್ಲಿ ಬಟಾಬಯಲಾಗಲಿದೆ. ಇದು ಜನತಂತ್ರ ವ್ಯವಸ್ಥೆಯ ಕರ್ಮವಾಗುತ್ತಿದೆ. ಇಂತಹ ದುಷ್ಟ ನೀತಿಯ ಸರಕಾರದ ವಿರುದ್ಧ ಸೆಟೆದು ನಿಲ್ಲಬೇಕಾದಂತಹ ಯುವಕರು ನಶೆಯಿಂದಲೋ, ಜೀವನ ಜಂಜಾಟದಿಂದಲೋ ಮುದುಡಿ ಮಲಗುತ್ತಿರುವುದು ಜನತಂತ್ರಕ್ಕೆ ಮಾಡಿದ ದ್ರೋಹವಲ್ಲವೇ?

ಮೊನ್ನೆಯ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸರ್ಕಾರ ಮದ್ಯಗಳ ದರ ಏರಿಸಿರುವುದು ಜನ ಹೆಚ್ಚು ಕುಡಿಯಬಾರದು ಎಂದು ಹೇಳಿಕೆ ನೀಡಿದ್ದಾರೆ. ಹೆಚ್ಚು ಕುಡಿಯದಿದ್ದರೆ ನಲವತ್ತು ಸಾವಿರ ಕೋಟಿಗೂ ಮೀರಿದ ಆದಾಯ ಬರುವುದೆಲ್ಲಿ? ಅವರು ಹೇಳುವುದೆಲ್ಲ ಸತ್ಯ ಎಂದುಕೊಂಡಿದ್ದಾರೆ. ಕರ್ನಾಟಕದ ಜನರೇನೂ ದಡ್ಡರಲ್ಲ. ಇವರ ನಾಟಕವನ್ನೆಲ್ಲಾ ಮುಗುಮ್ಮಾಗಿ ಗಮನಿಸುತ್ತಿದ್ದಾರೆ.

1964ನೇ ಇಸವಿಯಲ್ಲಿ ನಿಜಲಿಂಗಪ್ಪನವರ ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದಂತಹ ಮೈಸೂರಿನ ಶ್ರೀಮತಿ ಯಶೋಧರಮ್ಮ ದಾಸಪ್ಪನವರು, ಮದ್ಯಪಾನ ನಿಷೇಧ ಮಾಡದೆ ಹೋದರೆ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿಕೆ ನೀಡಿ, ಕೊನೆಗೆ ರಾಜೀನಾಮೆಯನ್ನೇ ನೀಡಿದ ನಿದರ್ಶನವಿದೆ. ಬಡವರು, ದೀನ–ದಲಿತರು, ಕಾರ್ಮಿಕರು ಈ ಮದ್ಯಪಾನದ ಚಟದಿಂದ ನರಳುತ್ತಿದ್ದಾರೆ. ಕರ್ನಾಟಕದಲ್ಲಿ ಇಂತಹ ಅನೇಕಾನೇಕ ಉದಾಹರಣೆಗಳನ್ನು ಲೆಕ್ಕಿಸದೆ ಅಬಕಾರಿ ಇಲಾಖೆಯಿಂದ ಸಾವಿರಾರು ಕೋಟಿ ಆದಾಯವನ್ನು ನಿರೀಕ್ಷಿಸಿಯುವ ಸಮುದಾಯವನ್ನೇ ಹಾಳು ಮಾಡುತ್ತಿರುವ ಕೀರ್ತಿ ಕರ್ನಾಟಕದ ಈಗಿನ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲಬೇಕಾಗಿದೆ.

ಇಂತಹ ಸಮಾಜ ವಿರೋಧಿ ಮತ್ತು ಸಂಸ್ಕೃತಿ–ಸಂಸ್ಕಾರಗಳ ಪತನದ ಹಾದಿ ಹಿಡಿದ ಸಿದ್ದರಾಮಯ್ಯನವರ ಸರಕಾರ ಮತ್ತೊಂದೆಡೆ ಸಾಲದ ರೂಪದಲ್ಲಿ ರಾಜ್ಯದ ಜನರನ್ನ ಕೂಪಕ್ಕೆ ತಳ್ಳುತ್ತಿರುವುದು ಹೇಯವಲ್ಲವೇ?

ವಿದೇಶದಲ್ಲಿ ಮೇಳೈಸುತ್ತಿದೆ ಭಾರತೀಯತೆ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಸನಾತನ ಧರ್ಮ, ನಮ್ಮ ಸಂಸ್ಕೃತಿ, ಆಚರಣೆ, ಪದ್ಧತಿ, ಆಚಾರ–ವಿಚಾರ ಇತ್ಯಾದಿ ವಿಷಯಗಳ ಬಗ್ಗೆ ಬಹಳ ಹೆಮ್ಮೆಯಿಂದ ಮಾತನಾಡುವ ನಾವು ಬದಲಾಗುತ್ತಿರುವ ಕಾಲಘಟ್ಟದ ಜೊತೆಜೊತೆಗೆ ಹೆಜ್ಜೆ ಹಾಕಬೇಕಾಗಿರುವ ಅನಿವಾರ್ಯತೆಯ ಬಗೆಗೂ ಯೋಚಿಸದಿದ್ದರೆ, ಬಹಳ ನಷ್ಟಕ್ಕೆ ಈಡಾಗಬೇಕಾಗುತ್ತದೆ ಎಂಬುದು ನಾನು ವಿದೇಶ ಪ್ರವಾಸ ಮಾಡಿದಾಗಲೆಲ್ಲ ಅನುಭವಕ್ಕೆ ಬರುವ ಸಂಗತಿ. ಪ್ರತಿಭಾ ಪಲಾಯನ ಎನ್ನಿ, ವೈಯಕ್ತಿಕ ಅನಿವಾರ್ಯತೆ ಎನ್ನಿ, ಒಟ್ಟಾರೆ ತಾಯಿನಾಡನ್ನು ತೊರೆದು ವಿದೇಶದಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕಾದ ವಾಸ್ತವಕ್ಕೆ ಕೆಲವರು ತಮ್ಮನ್ನು ಒಡ್ಡಿಕೊಳ್ಳಲೇಬೇಕಾಗುತ್ತದೆ. ಅಂಥವರ ಮನಃಸ್ಥಿತಿ ಹೇಗಿರುತ್ತದೆ ಎಂಬುದನ್ನು ತಿಳಿಯುವ ಕುತೂಹಲ ನನಗೆ.

ಹೀಗಾಗಿ ನಾನು ಹೋಗಿದ್ದ ಕೆಲವು ದೇಶಗಳಲ್ಲಿ ವಾಸ ಮಾಡುತ್ತಿದ್ದ ಭಾರತೀಯರನ್ನು ತಪ್ಪದೇ ಕೇಳುತ್ತಿದ್ದ ಪ್ರಶ್ನೆ ಒಂದೇ. ಭಾರತಕ್ಕೆ ಹಿಂದಿರುಗಬೇಕೆಂದು ನಿಮಗೆ ಅನಿಸುವುದಿಲ್ಲವೇ ಎಂದು. ಕೆಲವೇ ತಿಂಗಳುಗಳ ವಾಸಕ್ಕೆ ಎಂದು ಹೋಗಿದ್ದ ನನ್ನಂಥವರಿಗೇ ಎಂದು ಭಾರತಕ್ಕೆ ಮರಳುವೆನೋ ಎಂಬ ಕಾತುರತೆಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಅಂತಹುವುದರಲ್ಲಿ ವಿದೇಶದಲ್ಲಿಯೇ ಖಾಯಮ್ಮಾಗಿ ನೆಲಸಿದವರಿಗೆ ತಾಯ್ನಾಡಿನ ಆಕರ್ಷಣೆ ಉಳಿದಿರುವುದಿಲ್ಲವೇ ಎಂಬುದು ನನ್ನ ಚಿಂತೆ ಹಾಗೂ ಕುತೂಹಲ.

ಆಸ್ಟ್ರೇಲಿಯಾ ಇರಲಿ, ಅಮೆರಿಕಾ ಇರಲಿ, ಇಂಗ್ಲೆಂಡ್ ಇರಲಿ ಆರಂಭದಲ್ಲಿ ಅಲ್ಲಿಗೆ ಹೋಗಲು ಹಲವು ಆಕರ್ಷಣೆಗಳು ಇರುತ್ತವೆ. ಅದು ಹೆಚ್ಚಿನ ಓದಿನದಾಗಿರಬಹುದು, ಸಿಗುವ ದೊಡ್ಡ ಮೊತ್ತದ ಸಂಬಳದ ನೌಕರಿ ಆಗಿರಬಹುದು, ಆಧುನಿಕ ಸೌಲಭ್ಯಗಳನ್ನುಳ್ಳ ಐಷಾರಾಮಿ ಜೀವನ ಇರಬಹುದು, ಅಥವಾ ಮತ್ತೇನೋ ಆಗಿರಬಹುದು. ಇವೆಲ್ಲಾ ನಮ್ಮ ತಾಯಿನಾಡಲ್ಲೂ ಇರುವುದಿಲ್ಲವೇ ಎಂದು ಅನ್ನಿಸಬಹುದು. ಇವೆಲ್ಲವನ್ನೂ ಮೀರಿದ ಮತ್ಯಾವುದೋ ಆಕರ್ಷಣೆ ಖಂಡಿತಾ ಅದರಲ್ಲಿ ಅಡಗಿದೆ ಎಂಬುದಂತೂ ಸತ್ಯ.

ಭಾರತೀಯ ವಿದ್ಯಾರ್ಥಿಗಳು ಓದನ್ನು ಅಂದರೆ ವಿದ್ಯಾರ್ಹತೆಯನ್ನು ಬಹಳ ಗಂಭೀರವಾಗಿ ಪರಿಗಣಿಸುವವರು. ಅದಕ್ಕಾಗಿ ಎಂಥದೇ ಕಷ್ಟಪಟ್ಟು ಓದಲು ಸಿದ್ಧರಾಗಿರುವವರು. ಜಗತ್ತಿನ ಅನೇಕ ದೇಶಗಳ ವಿಶ್ವವಿದ್ಯಾಲಯಗಳಲ್ಲಿ, ಕಾಣಸಿಗುವ ಭಾರತೀಯ ವಿದ್ಯಾರ್ಥಿಗಳೇ ಇದಕ್ಕೆ ಸಾಕ್ಷಿ. ವಿದೇಶಗಳಲ್ಲಿ ಸಿಗುವ ಅತ್ಯುತ್ತಮ ಗುಣಮಟ್ಟದ ವಿದ್ಯಾಭ್ಯಾಸ ಅವರನ್ನು ಆಕರ್ಷಿಸುತ್ತದೆ. ಜೊತೆಗೆ ಅರ್ಹರಿಗೆ ಸಿಗುವ ಮನ್ನಣೆಯೂ ಅದರಲ್ಲಿ ಸೇರಿರುತ್ತದೆ. ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ, ಚಿನ್ನದಾತುರಕಿಂತ ಹೆಣ್ಣು ಗಂಡೊಲವು, ಮನ್ನಣೆಯ ದಾಹವೀ ಎಲ್ಲಕುಂ ತೀಕ್ಷ್ಣತಮ ತಿನ್ನುವುದದಾತ್ಮವನೆ ಮಂಕುತಿಮ್ಮ.

ಮಾರ್ಕ್ಸ್ ಕಾರ್ಡ್ ಅನ್ನು ತಿದ್ದುವಂತಹ, ಫಲಿತಾಂಶವನ್ನು ತಪ್ಪಾಗಿ ನೀಡುವಂತಹ, ವಿದ್ಯಾರ್ಥಿಯ ಇಡೀ ಭವಿಷ್ಯವನ್ನೇ ಹರಾಜಿಗೆ ಹಾಕುವಂತಹುದಾಗಲೀ, ಭ್ರಷ್ಟಾಚಾರ, ಮೋಸ ವಂಚನೆ ಇತ್ಯಾದಿಗಳ ಚಿಂತೆಯೇ ಇಲ್ಲದಂತೆ ನೆಮ್ಮದಿಯಾಗಿ ಓದಬಹುದಾದ ವಾತಾವರಣದ ಹಂಬಲದಿಂದಲೂ ನಮ್ಮ ವಿದ್ಯಾರ್ಥಿಗಳು ವಿದೇಶಕ್ಕೆ

> “ ನಮ್ಮ ಹಬ್ಬ ಹರಿದಿನಗಳನ್ನು, ರಾಜ್ಯೋತ್ಸವವನ್ನು ಒಟ್ಟಾಗಿ ಸೇರಿ ಆಚರಿಸುವುದಷ್ಟೇ ಅಲ್ಲದೆ ಕನ್ನಡ ಭಾಷೆಯನ್ನು ಉಳಿಸುವ ನಿಟ್ಟಿನಲ್ಲೂ ಅವುಗಳ ಕೊಡುಗೆ ಮಹತ್ವವಾದುದು. ಅಲ್ಲಿರುವ ಕನ್ನಡ ಕಂದಮ್ಮಗಳೂ ನಮ್ಮ ಭಾಷೆಯನ್ನು ಕಲಿಯಬೇಕಲ್ಲವೇ ಅದಕ್ಕೂ ವಿದೇಶಿ ನೆಲದಲ್ಲಿ ವ್ಯವಸ್ಥೆ ಇದೆ. ಭಾರತದಲ್ಲಿ ಕನ್ನಡವು ಇಂಗ್ಲೀಷಿನ ಪ್ರಭಾವದಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿದ್ದರೂ ವಿದೇಶದಲ್ಲಿ ಕನ್ನಡ ಉಳಿಯುತ್ತದೆ ಎಂಬ ಭರವಸೆ ಮೂಡುವ ವಾಸ್ತವವು ವ್ಯಂಗ್ಯವೋ ತೃಪ್ತಿಯೋ... ತಿಳಿಯದು...

ಪಲಾಯನ ಮಾಡಿದ್ದಿರಬಹುದು, ಮಾಡುತ್ತಿರಬಹುದು.

ಹಾಗೆ ಹೋದವರು ಓದು ಮುಗಿದ ಕೂಡಲೇ ತಾಯ್ನಾಡಿಗೆ ಮರಳುವುದಿಲ್ಲ. ಸಹಜವಾಗಿಯೇ ಅಲ್ಲಿಯೇ ನೌಕರಿಯನ್ನು ಮಾಡಲು ಇಚ್ಛಿಸುತ್ತಾರೆ. ಮಧ್ಯಮ ವರ್ಗದವರಾಗಿದ್ದರೆ, ಓದಿಗಾಗಿ ಮಾಡಿದ ಬ್ಯಾಂಕ್ ಸಾಲದ ಹೊರೆ ಹೊತ್ತಿರುತ್ತಾರೆ. ಭಾರತದಲ್ಲಿ ನೆಲಸಿದ ತಮ್ಮ ತಂದೆ ತಾಯಂದಿರಿಗೆ ಆರ್ಥಿಕವಾಗಿ ನೆರವನ್ನೀಯುವ ಉದ್ದೇಶ ಕೆಲವರದಾಗಿರುತ್ತದೆ. ಇವುಗಳನ್ನು ಈಡೇರಿಸಲು ಅಲ್ಲಿಯ ದೊಡ್ಡ ಮೊತ್ತದ ಡಾಲರುಗಳಲ್ಲಿ ಸಿಗುವ ಸಂಬಳದ ಆಕರ್ಷಣೆ ಸಹಜವಾಗಿಯೇ ತೀವ್ರತರದ್ದಾಗಿರುತ್ತದೆ.

ಕೆಲವೇ ವರುಷಗಳು ದುಡಿದು, ದುಡ್ಡು ಮಾಡಿಕೊಂಡು ಹಿಂದಿರುಗಿಬಿಡುವುದು ಎಂದೇ ಆರಂಭವಾಗುವ ಇದು ಕೆಲವೇ ವರ್ಷಗಳಲ್ಲಿ ಬದಲಾಗುತ್ತದೆ. ಅಲ್ಲಿಯೇ ನೆಲಸುವ ನಿರ್ಧಾರ ಗಟ್ಟಿಯಾಗುತ್ತಾ ಹೋಗುತ್ತದೆ. ಮುಂದೆ ಮದುವೆ, ಮಕ್ಕಳು, ಅವರ ವಿದ್ಯಾಭ್ಯಾಸ ಮುಂತಾದ ಸಂಸಾರ ಜಂಝಡದಲ್ಲಿ ತಾಯ್ನಾಡಿನಲ್ಲಿ ನೆಲಸುವ ವಿಚಾರ ಹಿನ್ನೆಲೆಗೆ ಹೋಗುತ್ತದೆ. ವರುಷ, ಎರಡು ವರುಷಕ್ಕೆ ಒಮ್ಮೆ ಭಾರತಕ್ಕೆ ಬಂದು ಬಂಧು–ಬಾಂಧವರನ್ನು ಭೇಟಿಯಾಗಿ ಹೋಗುವುದರ ನೆಮ್ಮದಿ ಇದಕ್ಕೆ ಇಂಬಾಗಿರುತ್ತದೆ.

ಹಾಗೆ ವಿದೇಶಿ ನೆಲದಲ್ಲಿ ನೆಲಸಿದವರು ತಮ್ಮ ಬೇರನ್ನು ಮರೆಯುವುದು ಸಾಧ್ಯವೇ ಖಂಡಿತಾ ಇಲ್ಲ. ನೀ ಮೆಟ್ಟುವ ನೆಲ ಅದೆ ಕರ್ನಾಟಕ, ನೀ ಕುಡಿಯುವ ನೀರ್ ಕಾವೇರಿ, ನೀ ಏರುವ ಮಲೆ ಸಹ್ಯಾದ್ರಿ ಎಂದು ಭಾವಿಸಿ ತಾವಿರುವ ತಾಣದಲ್ಲಿಯೇ ಪುಟ್ಟ ಭಾರತವನ್ನು ಅರಸುವ, ನಿರ್ಮಿಸುವ ದಿಸೆಯಲ್ಲಿ ಪ್ರಯತ್ನವನ್ನು ಆರಂಭಿಸುತ್ತಾರೆ. ಇದರ ಫಲವೇ ಎಂಬಂತೆ ಹಲವು ದೇಶಗಳಲ್ಲಿ ಹುಟ್ಟಿರುವ ಕನ್ನಡ ಸಂಘಗಳು. ಅವುಗಳ ಕೊಡುಗೆಯನ್ನು ನಿರ್ಲಕ್ಷಿಸುವಂತೆಯೇ ಇಲ್ಲ. ಕನ್ನಡ ಭಾಷೆ, ಸಂಸ್ಕೃತಿ, ಆಚಾರ–ವಿಚಾರಗಳು ವಿದೇಶೀ ನೆಲದಲ್ಲಿ ಇನ್ನೂ ಉಳಿದಿವೆ ಎಂಬುದಾದರೆ, ಅದರ ದೊಡ್ಡ ಪಾಲು ಮಾತೃಭಾಷೆಯ ಉಳಿವಿಗಾಗಿ ಟೊಂಕ ಕಟ್ಟಿರುವ ಇಂತಹ ಸಂಘ ಸಂಸ್ಥೆಗಳಿಗೆ ಸಲ್ಲುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ನಮ್ಮ ಹಬ್ಬ ಹರಿದಿನಗಳನ್ನು, ರಾಜ್ಯೋತ್ಸವವನ್ನು ಒಟ್ಟಾಗಿ ಸೇರಿ ಆಚರಿಸುವುದಷ್ಟೇ ಅಲ್ಲದೆ ಕನ್ನಡ ಭಾಷೆಯನ್ನು ಉಳಿಸುವ ನಿಟ್ಟಿನಲ್ಲೂ ಅವುಗಳ ಕೊಡುಗೆ ಮಹತ್ವವಾದುದು. ಅಲ್ಲಿರುವ ಕನ್ನಡ ಕಂದಮ್ಮಗಳೂ ನಮ್ಮ ಭಾಷೆಯನ್ನು ಕಲಿಯಬೇಕಲ್ಲವೇ? ಅದಕ್ಕೂ ವಿದೇಶಿ ನೆಲದಲ್ಲಿ ವ್ಯವಸ್ಥೆ ಇದೆ. ಭಾರತದಲ್ಲಿ ಕನ್ನಡವು ಇಂಗ್ಲೀಷಿನ ಪ್ರಭಾವದಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿದ್ದರೂ ವಿದೇಶದಲ್ಲಿ ಕನ್ನಡ ಉಳಿಯುತ್ತದೆ ಎಂಬ ಭರವಸೆ ಮೂಡುವ ವಾಸ್ತವವು ವ್ಯಂಗ್ಯವೋ... ತೃಪ್ತಿಯೋ... ತಿಳಿಯದು.

ಹಾಗೆಯೇ ನಮ್ಮ ಧಾರ್ಮಿಕ ಆಚರಣೆಗಳನ್ನು ಅಲ್ಲಿ ನೆಲೆಸಿರುವವರು ಉಳಿಸಿಕೊಳ್ಳಲು ಮಾಡಿಕೊಂಡ ಪರಿಹಾರದ ವಿಚಾರವನ್ನು ಪ್ರಸ್ತಾಪಿಸಲೇಬೇಕು. ಹಿಂದೂ ದೇವಸ್ಥಾನಗಳಿಗೆ ಅಲ್ಲಿ ಕೊರತೆ ಖಂಡಿತಾ ಇಲ್ಲ. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳಿಂದ ಹಿಡಿದು ಸಾಯಿಬಾಬ, ಗಣೇಶ, ಈಶ್ವರ, ಷಣ್ಮುಗ, ಆಂಜನೇಯ, ತಿರುಪತಿಯ ಶ್ರೀನಿವಾಸ ಎಲ್ಲರಿಗೂ ಇಲ್ಲಿಯ ಗುಡಿಗಳಲ್ಲಿ ಸ್ಥಳವುಂಟು, ಪೂಜೆಯೂ ಉಂಟು. ಬಂದ ಭಕ್ತರು ಭಕ್ತಿಯಿಂದ ಪೂಜೆ ಸಲ್ಲಿಸಿ, ಡಾಲರನ್ನು ಹುಂಡಿಗೆ ಹಾಕುತ್ತಾರೆ. ದೇವಸ್ಥಾನಗಳಲ್ಲಿ ನಡೆಯುವ ಎಲ್ಲ ವಿಶೇಷ ಪೂಜೆಗಳೂ ಇಲ್ಲಿ ನಡೆಯುತ್ತವೆ. ಇಸ್ಕಾನ್ ದೇವಾಲಯಗಳೂ ಇವೆ. ವಿಶೇಷ ಎಂದರೆ ಈ ಎಲ್ಲ ದೇವಾಲಯಗಳಲ್ಲಿ ಕಂಡುಬರುವ ವಿದೇಶೀ ಭಕ್ತರು ಭಕ್ತಿಯಿಂದ ನಮಸ್ಕರಿಸುವುದು.

ಹಿಂದೆ ಸಂಪ್ರದಾಯಸ್ಥರು ವಿದೇಶ ಪ್ರವಾಸ ಮಾಡುವುದಾಗಲೀ, ಸಮುದ್ರ ದಾಟುವುದನ್ನಾಗಲೀ ಮಾಡುತ್ತಲೇ ಇರಲಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಬಹಿಷ್ಕಾರಕ್ಕೆ ಅಂಜುತ್ತಿದ್ದ ಕಾಲವದು. ಈಗ ಮಠಾಧಿಪತಿಗಳೇ ವಿದೇಶ ಸಂಚಾರಕ್ಕೆ ಹೊರಡುವಷ್ಟು ಕಾಲ ಬದಲಾಗಿದೆ. ಅದರಿಂದ ವಿದೇಶದಲ್ಲಿ ನೆಲಸಿರುವ ಭಕ್ತರಿಗೆ ಆಗಿರುವ ಅನುಕೂಲ ಬಹಳಷ್ಟು. ಅಲ್ಲಿಯೇ ನಾಮಕರಣ, ಉಪನಯನ, ವಿವಾಹ ಇತ್ಯಾದಿ ವಿಧಿಗಳನ್ನು ನೆರವೇರಿಸಲು ಅನುಕೂಲವಾಗಿದೆ ಎಂಬುದು ಬಹಳ ಸತ್ಯ.

ವಿದೇಶದಲ್ಲಿ ಭಾರತದಲ್ಲಿ ಸಿಗುವ ಪ್ರತಿಯೊಂದು ವಸ್ತುವೂ ಲಭ್ಯ. ಚಕ್ಕುಲಿ ಕೋಡುಬಳೆಯಿಂದ ಹಿಡಿದು ತುಳಸಿ, ವಿಳ್ಯೇದೆಲೆ, ಹೂಬತ್ತಿಗಳವರೆಗೆ ಸಕಲವೂ ಇಲ್ಲಿನ ಭಾರತೀಯ ಅಂಗಡಿಗಳಲ್ಲಿ ಸಿಗುತ್ತವೆ. ದೇವಸ್ಥಾನದ ಪೂಜಾರಿಗಳೂ ಮಠಗಳ ಆಚಾರರೂ ಪ್ರತಿಯೊಂದು ವಿಧಿ ವಿಧಾನಗಳನ್ನು ವಿಷದವಾಗಿ ಮಾಡಿಸುತ್ತಾರೆ. ಭಾರತೀಯ ಎಲ್ಲ ಅಡುಗೆಗಳನ್ನೂ ಮಾಡಿ ಬಡಿಸುತ್ತಾರೆ. ಒಮ್ಮೆ ಅಮೆರಿಕಾದಲ್ಲಿ ನಡೆದ ಸತ್ಯನಾರಾಯಣ ಪೂಜೆಯಲ್ಲಿ ಅದರ ಕತೆಯನ್ನು ಇಂಗ್ಲೀಷಿನಲ್ಲಿ ಓದಲು ಆರಂಭಿಸಿದಾಗ, ನಾನು ಕಣ್ ಕಣ್ ಬಿಟ್ಟಿದ್ದೆ. ಅಲ್ಲಿನ ಮಕ್ಕಳ ಸಲುವಾಗಿ ಈ ಉಪಾಯ ಎಂಬುದನ್ನು ಅರಿತಾಗ, ಕಾಲಾಯ ತಸ್ಮೈ ನಮಃ ಅಂದುಕೊಂಡೆ.

ನಿಂತ ನೆಲದಲ್ಲಿಯೇ ತಮ್ಮತನವನ್ನು ಕಾಪಾಡಿಕೊಂಡು ಬರುತ್ತಿರುವವ ಕೇಳಿದ ಭಾರತಕ್ಕೆ ಏಕೆ ಮರಳುವುದಿಲ್ಲ ಎಂಬ ಪ್ರಶ್ನೆಗೆ ನನಗೆ ಉತ್ತರಗಳು ಖಂಡಿತಾ ಸಿಕ್ಕಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಮೈಸೂರಲ್ಲಿ ಭಾರಿ ಸಮಾವೇಶ

● ಕೇಂದ್ರದ ಈ ಕಾಯ್ದೆ ಸಂವಿಧಾನ, ಏಕತೆಗೆ ವಿರುದ್ಧವಾಗಿದೆ; ಬಲವಾದ ಪ್ರತಿಪಾದನೆ ● ಕಾಯ್ದೆ ಸಮರ್ಥನೆಗೆ ಕೇಂದ್ರ ಯಾವುದೇ ಕಾರಣ ನೀಡಿದರೂ ನಂಬಲಾಗದು



ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಶನಿವಾರ ಬೃಹತ್ ಸಮಾವೇಶ ನಡೆಯಿತು.



ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ನೆರೆದಿದ್ದ ಭಾರೀ ಜನಸ್ತೋಮ

ಮೈಸೂರು, ಮೇ 3(ಎಂಕೆ)– 'ವಕ್ಫ್ ಅಲ್ಲಾಹ್‌ಗೆ ಸೇರಿದ್ದು, ಅದರ ಮಾರ್ಪಾಡು ಸ್ವೀಕಾರಾರ್ಹವಲ್ಲ'... ಎಂಬ ಧ್ಯೇಯವಾಕ್ಯದೊಂದಿಗೆ ನಾವು ಭಾರತದ ಜನರೇ... ಹಿಂದೂಸ್ತಾನ್ ಜಿಂದಾಬಾದ್... ಭಾರತೀಯ ಏಕತೆಗೆ ಜಿಂದಾಬಾದ್... ಜೈ ಭೀಮ್... ಜೈ ಸಂವಿಧಾನ... ಘೋಷಣೆಗಳೊಂದಿಗೆ ಮೈಸೂರಿನಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆ–2025ಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು.

ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ವತಿಯಿಂದ ಕೇಂದ್ರ ಸರ್ಕಾರ ಅಂಗೀಕರಿಸಿರುವ ವಕ್ಫ್ ತಿದ್ದುಪಡಿ ಕಾಯ್ದೆ–2025 ವಿರೋಧಿಸಿ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆಯು ಸಂವಿಧಾನ ಹಾಗೂ ದೇಶದ ಏಕತೆಯ ವಿರುದ್ಧವಾಗಿದೆ ಎಂದು ಬಲವಾಗಿ ಪ್ರತಿಪಾದಿಸಲಾಯಿತು.

ಬೃಹತ್ ವೇದಿಕೆಯತ್ತ ಉದಯಗಿರಿ, ಎನ್.ಆರ್.ಮೊಹಲ್ಲಾ, ಶಾಂತಿನಗರ, ತಿಲಕ್‌ನಗರ, ರಾಜೀವ್‌ನಗರ, ಗೌಸಿಯಾನಗರ, ಕಲ್ಯಾಣಗಿರಿ, ಅಜೀಜ್ ಸೇಠ್ ನಗರ, ಶುಭಾಷ್ ನಗರ, ಸಿದ್ದಿಖ್ ನಗರ, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ ಸೇರಿದಂತೆ ಹಲವೆಡೆಯಿಂದ ತಂಡೋಪತಂಡವಾಗಿ ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು, ತ್ರಿವರ್ಣ ಧ್ವಜಗಳು ಹಾಗೂ ವಕ್ಫ್ ಕಾಯ್ದೆ ವಿರೋಧಿಸುವ ಫಲಕಗಳನ್ನು ಹಿಡಿದು ಧಾವಿಸಿದ ಸಾವಿರಾರು ಮಂದಿ ಮುಸ್ಲಿಂ ಮಹಿಳೆಯರು, ಮಕ್ಕಳು, ಯುವಕ–ಯುವತಿಯರು, ಧರ್ಮಗುರುಗಳು, ರಾಜಕೀಯ ಮುಖಂಡರು, ವಿವಿಧ ಪ್ರಗತಿಪರ ಸಂಘಟನೆಗಳ ನಾಯಕರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಮೊಳಗಿಸಿ, ಕರಾಳ ಕಾಯ್ದೆ(ವಕ್ಫ್ ತಿದ್ದುಪಡಿ ಕಾಯ್ದೆ–2025)ಯನ್ನು ಹಿಂಪಡೆಯುವಂತೆ ಒಕ್ಕೊರಲಿನಿಂದ ಆಗ್ರಹಿಸಿದರು.

ಶ್ರದ್ಧಾಂಜಲಿ, ಏಕತೆ ಸಂದೇಶ ಸಾರಿದ ಪ್ರತಿಭಟನಾ ಸಮಾವೇಶ...

ಪ್ರತಿಭಟನಾ ಸಮಾವೇಶದಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆಗೆ ವಿರೋಧಿಸುತ್ತಲೇ ಇತ್ತೀಚೆಗೆ ಜಮ್ಮು–ಕಾಶ್ಮೀರದ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ಪೈಶಾಚಿಕ ದಾಳಿಯನ್ನು ತೀವ್ರವಾಗಿ ಖಂಡಿಸಲಾಯಿತು. ಮೃತ ಪ್ರವಾಸಿಗರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹಾಗೆಯೇ ಸಂವಿಧಾನ ಪೀಠಿಕೆಯನ್ನು ವಾಚಿಸಿ, 'ಸಾರೆ ಜಹಾನ್ ಸೆ ಅಚ್ಛಾ, ಹಿಂದೂಸ್ತಾನ್ ಹಮಾರಾ' ಗೀತೆಯ ಮೂಲಕ ಏಕತೆಯ ಸಂದೇಶವನ್ನೂ ಸಾರಲಾಯಿತು. ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ ಟೋಪಿ ಹಾಕಿಕೊಳ್ಳುವ ಮೂಲಕ ಪರಸ್ಪರ ಸೌಹಾರ್ದತೆ ತೋರಿದರು. ಎಲ್ಲೆಲ್ಲೂ ತ್ರಿವರ್ಣ ಧ್ವಜಗಳನ್ನು ಹಾರಿಸಿ ದೇಶಪ್ರೇಮ ಮೆರೆಯಲಾಯಿತು. ಹಿಂದೂಸ್ತಾನ್ ಜಿಂದಾಬಾದ್, ಜೈ ಸಂವಿಧಾನ, ಜೈ ಭೀಮ್ ಘೋಷಣೆಗಳು ಮೊಳಗಿದವು.

ಆರಂಭದಲ್ಲಿ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಮಾಜಿ ಪೊಲೀಸ್ ಅಧಿಕಾರಿ ಸುಹೇಲ್ ಅಹ್ಮದ್, ಪ್ರಜಾಪ್ರಭುತ್ವವನ್ನು ಕಾಪಾಡಬೇಕಾದ ಸಂವಿಧಾನಾತ್ಮಕ ಸ್ವತಂತ್ರ ತನಿಖಾ ಸಂಸ್ಥೆಗಳು, ಮಾಧ್ಯಮಗಳು ಕಾವಲುನಾಯಿಗಳಾಗಿರದೆ, ಕೇಂದ್ರ ಬಿಜೆಪಿ ಸರ್ಕಾರದ ಸಾಕು ನಾಯಿಗಳಂತಾಗಿವೆ. ಇಡಿ, ಸಿಬಿಐಗಳಿಂದ ಚುನಾಯಿತ ಪ್ರತಿನಿಧಿಗಳನ್ನು ಬೆದರಿಸಿ ಸರ್ಕಾರಗಳನ್ನು ಕೆಡವಲಾಗುತ್ತಿದೆ. ಇದೆಲ್ಲದರ ವಿರುದ್ಧ ಪ್ರತಿಭಟಿಸದಿದ್ದರೆ ನಮ್ಮ ಸಂವಿಧಾನ ಉಳಿಯುವುದೇ ಡೌಟಾಗಿದೆ. ವಕ್ಫ್ ತಿದ್ದುಪಡಿ ಕಾಯ್ದೆಯು, ಅಂಬಾನಿ ಮತ್ತು ಪ್ರಧಾನಿಯ ದೋಸ್ತಿಯ ಹಿತಾಸಕ್ತಿಯದ್ದಾಗಿದ್ದು, ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡಿ, ಸಮುದಾಯದ ಆಸ್ತಿಯನ್ನು ಅಂಬಾನಿಗೆ ಮಾರಾಟ ಮಾಡುವ ಹುನ್ನಾರ ಅಡಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಉಡುಪಿಯ ಜಮಾತ್–ಎ–ಇಸ್ಲಾಮಿ ಹಿಂದ್ ಕಾರ್ಯದರ್ಶಿ ಅಕ್ಬರ್ ಅಲಿ ಮಾತನಾಡಿ, ಈ ಸಮಾವೇಶವೂ ಬರೀ ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧ ಮಾತ್ರವಲ್ಲ, ಸಂವಿಧಾನವನ್ನು ಉಳಿಸುವ ಆಂದೋಲನವೂ ಆಗಿದೆ. ವಕ್ಫ್‌ಗೆ ದಾನ ಮಾಡಬೇಕಾದರೆ, ಆ ವಸ್ತು ಅಥವಾ ಜಮೀನು ಹಲಾಲ್ ಆಗಿರಬೇಕೇ ಹೊರತು ಹರಾಮ್ ಆಗಿರಬಾರದು. ಹರಾಮ್ ಆಗಿ ಒಂದಿಂಚು ಜಮೀನು ಬಂದಿದ್ದರೂ ವಕ್ಫ್ ತನ್ನ ಬಳಿ ಇಟ್ಟುಕೊಳ್ಳುವುದಿಲ್ಲ. ಪವಿತ್ರವಾದ ಭೂಮಿಯನ್ನು ಮಾತ್ರವೇ ವಕ್ಫ್‌ಗೆ ದಾನ ಮಾಡಲಾಗುತ್ತದೆ. ಅಂದರೆ ಅಲ್ಲಾಹನಿಗೆ ಕೊಟ್ಟಿರುವುದಾಗಿದೆ. ಅಲ್ಲಾಹನಿಗೆ ಕೊಟ್ಟಿರುವುದು ಎಂದರೆ ಈ(ಮುಸ್ಲಿಂ) ಸಮುದಾಯದ ಏಳಿಗೆಗೆ ಕೊಟ್ಟಿರುವಂತಹದ್ದಾಗಿದೆ ಎಂದರು.

ವಕ್ಫ್ ಆಸ್ತಿ ಒತ್ತುವರಿ: ವಕ್ಫ್ ಆಸ್ತಿಯನ್ನು ಸ್ವಾತಂತ್ರ್ಯ ಬಂದಾಗಿನಿಂದ ದುರ್ಬಳಕೆ ಮಾಡಲಾಗುತ್ತಿದೆ. ಸರಕಾರ, ಸಂಸ್ಥೆಗಳು ಹಾಗೂ ಮುಸ್ಲಿಮರು ಸಹ ಒತ್ತುವರಿ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಬಂದ ಎಲ್ಲಾ ಸರಕಾರಗಳು ಕೂಡ ವಕ್ಫ್ ಆಸ್ತಿ ಉಳಿವಿಗೆ ನೋಟಿಸ್ ನೀಡಿವೆ. ನೋಟಿಸ್ ನೀಡಿದ ಮಾತ್ರಕ್ಕೆ ಮಾಲೀಕತ್ವ ವಶಕ್ಕೆ ಪಡೆಯುವುದಲ್ಲ. ಇದರ ಸಾಧಕ–ಬಾಧಕ ನೋಡಿ ವಕ್ಫ್ ಆಸ್ತಿಯೇ ಎಂದು ಪರಿಶೀಲಿಸುವುದಾಗಿದೆ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದಕ್ಕೆ ಕೋಮು ಬಣ್ಣ ಕಟ್ಟುತ್ತಿವೆ. ಅಲ್ಲದೆ ವಕ್ಫ್ ಆಸ್ತಿ ಕಬಳಿಸಲು ಕೇಂದ್ರ ಸರಕಾರ ಹೊರಟಿದೆ. ವಕ್ಫ್ ತಿದ್ದುಪಡಿ ಮುಸ್ಲಿಮರ ಸುರಕ್ಷತೆಗೆ ಎಂಬ ಹಸಿ ಸುಳ್ಳನ್ನು ಹೇಳುತ್ತಿದೆ. ಸಂಸತ್ತಿನಲ್ಲಿ ಸುಳ್ಳುಗಳನ್ನು ಹೇಳುವುದಲ್ಲದೆ, ನ್ಯಾಯಾಲಯಕ್ಕೂ ಸುಳ್ಳು ಅಫಿಡವಿಟ್ ಸಲ್ಲಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತದ ಆತ್ಮಕ್ಕೆ ಪೆಟ್ಟು: ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ವಕ್ಫ್ ತಿದ್ದುಪಡಿ ಸಂವಿಧಾನ ವಿರುದ್ಧವಾಗಿದೆ. ಈ ಮೂಲಕ ಭಾರತದ ಆತ್ಮಕ್ಕೆ ಪೆಟ್ಟುಕೊಡುತ್ತಿದ್ದಾರೆ. ಸಂಕುಚಿತ ಮನೋಭಾವದಲ್ಲಿ ಆಡಳಿತ ನಡೆಸುತ್ತಿರುವವರಿಗೆ ಏಕತೆ ಸಂದೇಶ ನೀಡಲು ಹೋರಾಟ ನಡೆಯುತ್ತಿದೆ. ವಕ್ಫ್ ವೈಯಕ್ತಿಕ ಕಾನೂನನ್ನು ರಕ್ಷಣೆ ಮಾಡಲು ನಡೆಸುತ್ತಿರುವ ಹೋರಾಟಕ್ಕೆ ರೈತ ಸಂಘದ ಸಂಪೂರ್ಣ ಬೆಂಬಲ ಇದೆ ಎಂದರು.

ವಕ್ಫ್ ಉಳಿವಿಗೆ ಹೋರಾಟ...

ದೇಶದಲ್ಲಿ 2014ರಲ್ಲಿ ಸಂವಿಧಾನ ಬುಡಮೇಲು ಮಾಡುವಂತಹ ಸರಕಾರ ಅಧಿಕಾರಕ್ಕೆ ಬಂತು. ಈ ಸರಕಾರ ಬಂದಾಗಿನಿಂದ ನಿರಂತರ ಹೋರಾಟ ನಡೆಯುತ್ತಿದೆ. 2019ರಲ್ಲಿ ಸಿಎಎ, ಎನ್.ಆರ್.ಸಿ ತಂದರು. ರೈತ ವಿರೋಧಿ ಕಾನೂನುಗಳು ಜಾರಿಗೆ ಬಂದವು. ವಕ್ಫ್ ಉಳಿವಿಗೆ ಈಗ ಮತ್ತೊಂದು ದೊಡ್ಡ ಹೋರಾಟ ದೇಶದಾದ್ಯಂತ ನಡೆಯುತ್ತಿದೆ. ವಕ್ಫ್ ಎಂದರೆ ಏನೆಂಬುದನ್ನು ದೇಶದ ಮೂಲೆ ಮೂಲೆಗೆ ತಿಳಿಸಬೇಕಿದೆ. ಅಲ್ಲಾನ ಹೆಸರಿನಲ್ಲಿ ಸಮುದಾಯಕ್ಕಾಗಿ, ಧಾರ್ಮಿಕ ಕೆಲಸಕ್ಕಾಗಿ ಮೀಸಲಿಡಲು ಶಾಶ್ವತವಾಗಿ ಕೊಡುವ ಸ್ಥಿರಾಸ್ತಿಯನ್ನು ವಕ್ಫ್ ಎಂದು ಕರೆಯಲಾಗುತ್ತದೆ. ಸಮುದಾಯದ ಒಳಿತಿಗಾಗಿ ಕೊಟ್ಟಿರುವ ಭೂಮಿಯನ್ನು ಇದನ್ನು ನರೇಂದ್ರ ಮೋದಿ ಸರ್ಕಾರ ಕಿತ್ತುಕೊಳ್ಳಲು ಸಾಧ್ಯವಿಲ್ಲ.

– ಡಾ.ಹೆಚ್.ವಿ.ವಾಸು, ಜಾಗೃತ ಕರ್ನಾಟಕ ರಾಜ್ಯಾಧ್ಯಕ್ಷ

ಮುಸ್ಲಿಂ ಧರ್ಮಗುರುಗಳಾದ ಮೈಸೂರು ಸರ್‌ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಮೌಲಾನ ಜಕಾವುಲ್ಲಾ, ಮೌಲಾನ ಅಯೂಬ್ ಅನ್ಸಾರಿ, ಮೌಲಾನ ಕಲೀಂ ಉರ್ ರೆಹಮಾನ್, ಮೌಲಾನ ಇಬ್ರಾಹಿಂ ಸಾಬ್, ಖಾರಿಖ ಉಸ್ಮಾನ್ ಷರೀಫ್, ಸೈಯದ್ ತಾಜ್ ಉದ್ದೀನ್ ಮಿಫ್ತಾಹಿ, ಅಹಲೇದ್ದೀಸ್ ಇಮಾಮ್, ಮೌಲಾನ ಹರ್ಷದ್, ಅಬ್ದುಲ್ ಅಜೀಝ್ ಚಾಂದ್ ಸಾಹೇಬ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಜಾಗೃತ ಕರ್ನಾಟಕದ ರಾಜ್ಯಾಧ್ಯಕ್ಷ ಡಾ.ಹೆಚ್.ವಿ.ವಾಸು, ಪ್ರಗತಿಪರ ಚಿಂತಕ ಉಗ್ರನರಸಿಂಹೇಗೌಡ ಮತ್ತಿತರರು ವೇದಿಕೆಯಲ್ಲಿದ್ದರು.

ವೇದಿಕೆ ಎದುರು ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಯೂಬ್ ಖಾನ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಮಾಜಿ ಪಾಲಿಕೆ ಸದಸ್ಯ ಆರಿಫ್ ಹುಸೇನ್, ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಶಬ್ಬೀರ್ ಅಹ್ಮದ್, ಶಬ್ಬೀರ್ ಅಹ್ಮದ್ ಖಾನ್, ಸುಹೇಲ್ ಅಹ್ಮದ್, ಗೋಪಾಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರೆ, ಸಾವಿರಾರು ಜನರು ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಿದ್ದರು.


ಎಸ್‌ಎಸ್‌ಎಲ್‌ಸಿಯಲ್ಲಿ ನೃಪತುಂಗ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಾಧನೆ



ಲಕ್ಷ್ಮಿ ಆರ್. | ಶಿವಶಂಕರ್ | ವಿದ್ಯಾಶ್ರೀ

ಮೈಸೂರು, ಮೇ 3– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಲಕ್ಷ್ಮಿ ಆರ್. (598 ಅಂಕ), ಶಿವಶಂಕರ್ .ಎಸ್ (574 ಅಂಕ) ಮತ್ತು ವಿದ್ಯಾಶ್ರೀ (534 ಅಂಕ) ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಹಾಗೂ ಆರು ವಿದ್ಯಾರ್ಥಿಗಳು ಪ್ರಥಮದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶ್ರೀರಾಂಪುರದ ಶ್ರೀ ಬಿಜಿಎಸ್ ಬಾಲಜಗತ್ ಪ್ರೌಢಶಾಲೆಗೆ ಉತ್ತಮ ಫಲಿತಾಂಶ



ಪ್ರತಿಭ | ಸುಧಾ | ಮಾನ್ಯ | ಭೂಮಿಕ | ಲಿಶಾ
ಸ್ಪಂದನ | ವರ್ಷಿಣಿ | ದೀಪ್ತಿ | ಶೋಭಿತ | ಪ್ರಮುಖ್
ಮಹಾಲಕ್ಷ್ಮೀ | ಸೋಮ್‌ರಾಜ್ | ದೀಕ್ಷಾ

ಮೈಸೂರು: ನಗರದ ಶ್ರೀರಾಂಪುರದಲ್ಲಿರುವ ಶ್ರೀ ಬಿಜಿಎಸ್ ಬಾಲಜಗತ್ ಪ್ರೌಢಶಾಲೆಯಲ್ಲಿ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಬಂದಿದೆ. ಪ್ರತಿಭಎಂ ಎಂಬ ವಿದ್ಯಾರ್ಥಿನಿಯು 622 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪರೀಕ್ಷೆಯಲ್ಲಿ 49 ವಿದ್ಯಾರ್ಥಿಗಳ ಪೈಕಿ ಸುಧಾ ಚಿತ್ತರಗಿ 618, ಮಾನ್ಯ ಕನ್ವರ್ 595, ಭೂಮಿಕ ಕೆ 587, ಲಿಶಾ ಎನ್.ಎಸ್ 584, ಸ್ಪಂದನ ಎಸ್ 581, ವರ್ಷಿಣಿ ಸಿ 580, ದೀಪ್ತಿ ವಿ 579, ಶೋಭಿತ ಎಂ.ಎನ್ 574, ಪ್ರಮುಖ್ ಆರ್ 571, ಮಹಾಲಕ್ಷ್ಮೀ ಎಸ್ 568, ಸೋಮ್‌ರಾಜ್ ಹೆಚ್.ಆರ್ 564, ದೀಕ್ಷಾ ಎಸ್ 564, ಅಂಕಗಳನ್ನು ಪಡೆದುಕೊಂಡಿದ್ದಾರೆ ವಿದ್ಯಾರ್ಥಿಗಳನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶಾಲಾ ಮುಖ್ಯ ಶಿಕ್ಷಕಿ, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ವಿ.ಎಸ್. ಸಾರಿಕಾಗೆ 556 ಅಂಕ



ಮೈಸೂರು, ಮೇ 3– ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಐಡಿಯಲ್ ಜಾವ ರೋಟರಿ ಶಾಲೆಯ ವಿದ್ಯಾರ್ಥಿನಿ ವಿ.ಎಸ್. ಸಾರಿಕಾ – 556 (ಶೇ. 89) ಅಂಕವನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಡಿ. ಸುಬ್ಬಯ್ಯ ರಸ್ತೆಯ ನಿವಾಸಿ ಸತೀಶ್, ಶ್ರೀವಿದ್ಯಾ ಅವರ ಪುತ್ರಿ.

ವರಕೋಡಿನ ವೈಷ್ಣವಿಗೆ 615 ಅಂಕ



ಮೈಸೂರು, ಮೇ 3– ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸುಮನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ವಿ.ಎಲ್.ವೈಷ್ಣವಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕ ಪಡೆದು ಅತ್ಯುತ್ತಮ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.

ಈಕೆ ಕನ್ನಡದಲ್ಲಿ 125, ಇಂಗ್ಲೀಷ್ 96, ಹಿಂದಿಯಲ್ಲಿ 99, ಗಣಿತ 100, ವಿಜ್ಞಾನದಲ್ಲಿ 95, ಸಮಾಜ ವಿಜ್ಞಾನದಲ್ಲಿ 100 ಅಂಕ ಪಡೆದು ಗಮನ ಸೆಳೆದಿದ್ದಾಳೆ. ಈಕೆ ಮೈಸೂರು ತಾಲೂಕು ವರಕೋಡು ಗ್ರಾಮದ ಲಕ್ಷ್ಮಣ, ಎನ್.ವಿನೋದ ದಂಪತಿ ಪುತ್ರಿ.

ಪ್ರಗತಿ ವಿದ್ಯಾ ಕೇಂದ್ರ ಶಾಲೆಗೆ ಉತ್ತಮ ಫಲಿತಾಂಶ



ಮೋನಿಷಾ. ಆರ್ (603–96.5%) | ರವಿಚಂದ್ರ. ಆರ್ (594–95%) | ನವ್ಯಶ್ರೀ. ಎನ್ (581–93%) | ರೋಹನ್ ಟಿ.ಡಿ (576–92.2%) | ಪ್ರೀತಂ. ಎ.ಆರ್ (573–91.7%)
ಸಿದ್ದಾರ್ಥ ಹೇಮಂತ್ (566–90.6%) | ಕೃತ್‌ರಿನ್. ಎ (563–90.1%) | ನಿಖಿತಾ. ಪಿ (538–86.1%) | ದಿಗಂತ್ ಗೌಡ. ಕೆ.ಆರ್ (538–86.1%) | ಮೈತ್ರಿ. ಹೆಚ್.ಪಿ (535–85.6%)

ಮೈಸೂರು, ಮೇ 3– ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಪ್ರಗತಿ ವಿದ್ಯಾಕೇಂದ್ರ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ.

ಮೋನಿಷಾ. ಆರ್– 603–96.5%, ರವಿಚಂದ್ರ, ಆರ್– 594–95%, ನವ್ಯಶ್ರೀ. ಎನ್–581–93%, ರೋಹನ್ ಟಿ.ಡಿ–576–92.2%, ಪ್ರೀತಂ. ಎ.ಆರ್–573–91.7%, ಸಿದ್ದಾರ್ಥ ಹೇಮಂತ್– 566–90.6%, ಕೃತ್‌ರಿನ್. ಎ– 563–90.1%, ನಿಖಿತಾ. ಪಿ–538–86.1%, ದಿಗಂತ್ ಗೌಡ. ಕೆ.ಆರ್–538–86.1%, ಮೈತ್ರಿ ಹೆಚ್.ಪಿ–535–85.6% ಅಂಕ ಗಳಿಸಿದ್ದಾರೆ. 51 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ 7 ಮಂದಿ ಎ ಪ್ಲಸ್, 9 ಮಂದಿ ಎ ಗ್ರೇಡ್, 14 ಮಂದಿ ಬಿ ಪ್ಲಸ್, 10 ಮಂದಿ ಬಿ ಗ್ರೇಡ್, 8 ಮಂದಿ ಸಿ ಪ್ಲಡ್ ಗ್ರೇಡ್ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಯಮುನಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ತಾಲೂಕಿನ ಮರಳೂರು ಗೊದ್ದನಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಯಮುನಾ 517 (ಶೇ.82) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಗೊದ್ದನಪುರ ಗ್ರಾಮದ ಮಹದೇವ್, ಹೇಮ ಅವರ ಪುತ್ರಿ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 3(ಎಂಕೆ)– 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯ ವಿದ್ಯಾರ್ಥಿನಿ ಪಿ.ಹಂಸಿಕಾ 625ಕ್ಕೆ 621 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಜೆ.ಸಿ.ನಗರದ ನಿವಾಸಿ ಎನ್.ಪ್ರಭಾಕರ್, ಕೆ.ಚಿಕ್ಕಮ್ಮ ದಂಪತಿ ಪುತ್ರಿಯಾದ ಹಂಸಿಕಾ, ಇಂಗ್ಲಿಷ್(ಎನ್‌ಸಿಆರ್‌ಟಿ)ನಲ್ಲಿ 123, ಕನ್ನಡ 100, ಹಿಂದಿ(ಎನ್‌ಸಿಆರ್‌ಟಿ) 99, ಗಣಿತ 100, ವಿಜ್ಞಾನ 100 ಹಾಗೂ ಸಮಾಜ ವಿಜ್ಞಾನದಲ್ಲಿ 99 ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಟಾಪರ್ ಆಗಿದ್ದಾರೆ. ವಿದ್ಯಾರ್ಥಿನಿ ಸಾಧನೆಗೆ ಶಾಲೆಯ ಶಿಕ್ಷಕ ವೃಂದ ಅಭಿನಂದಿಸಿದ್ದಾರೆ.

ರಾಮಕೃಷ್ಣ ವಿದ್ಯಾಕೇಂದ್ರಕ್ಕೆ ಉತ್ತಮ ಫಲಿತಾಂಶ



ಮೈಸೂರು, ಮೇ 3– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರಕ್ಕೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಪೈಕಿ A+ ಗ್ರೇಡ್‌ನಲ್ಲಿ 11 ವಿದ್ಯಾರ್ಥಿಗಳು ಮತ್ತು A ಗ್ರೇಡ್‌ನಲ್ಲಿ 07 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಸಿಂಧು ಎಸ್. ವಿದ್ಯಾರ್ಥಿನಿಯು 619 (99.04%) ಅಂಕಗಳೊಂದಿಗೆ ಶಾಲೆಗೆ ಮೊದಲಿಗಳಾಗಿದ್ದು, ಸಂಸ್ಕೃತದಲ್ಲಿ 125 ಅಂಕ ಗಳಿಸಿದ್ದಾಳೆ.

ನಿತ್ಯಶ್ರೀ ಎನ್. ಉಡುಪ ಎಂಬ ವಿದ್ಯಾರ್ಥಿನಿ ಒಟ್ಟು 615 (98.4%) ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದು, ಸಂಸ್ಕೃತದಲ್ಲಿ 125, ತೃತೀಯ ಭಾಷೆ ಕನ್ನಡದಲ್ಲಿ 100, ಗಣಿತದಲ್ಲಿ 100 ಅಂಕಗಳನ್ನು ಗಳಿಸಿದ್ದಾಳೆ.

ಸಂಜನ ಹೆಚ್. ಎಂಬ ವಿದ್ಯಾರ್ಥಿನಿಯು 614 (98.24%) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದು, ಪ್ರಥಮ ಭಾಷೆ ಸಂಸ್ಕೃತದಲ್ಲಿ 125, ತೃತೀಯ ಭಾಷೆ ಕನ್ನಡದಲ್ಲಿ 100 ಅಂಕಗಳನ್ನು ತೆಗೆದುಕೊಂಡಿದ್ದಾಳೆ.

ಪ್ರಥಮ ಭಾಷೆ ಸಂಸ್ಕೃತದಲ್ಲಿ 6 ವಿದ್ಯಾರ್ಥಿಗಳು 125ಕ್ಕೆ 125 ಅಂಕ, ತೃತೀಯ ಭಾಷೆ ಕನ್ನಡದಲ್ಲಿ 2 ವಿದ್ಯಾರ್ಥಿಗಳು 100ಕ್ಕೆ 100, ಸಮಾಜ ವಿಜ್ಞಾನದಲ್ಲಿ 2 ವಿದ್ಯಾರ್ಥಿಗಳು 100ಕ್ಕೆ 100, ಒಬ್ಬ ವಿದ್ಯಾರ್ಥಿಯು ಗಣಿತದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾಳೆ.

ಉತ್ತಮ ಅಂಕದೊಂದಿಗೆ ತೇರ್ಗಡೆ



ಹಾಸನ, ಮೇ 3– ಅರಕಲಗೂಡು ತಾಲೂಕು, ರಾಮನಾಥಪುರದ ಶ್ರೀ ದಕ್ಷಿಣಕಾಶಿ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ ಎಸ್.ವಿನುತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.85.92 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.

ಕನ್ನಡದಲ್ಲಿ 110, ಇಂಗ್ಲಿಷ್ ಹಾಗೂ ಹಿಂದಿಯಲ್ಲಿ 99, ಸಮಾಜ ವಿಜ್ಞಾನದಲ್ಲಿ 82, ವಿಜ್ಞಾನ 76 ಹಾಗೂ ಗಣಿತದಲ್ಲಿ 71 ಸೇರಿ ಒಟ್ಟು 537 ಅಂಕ ಗಳಿಸಿದ್ದಾಳೆ. ಈಕೆ ಸೆಸ್ಕ್ ರಾಮನಾಥಪುರ ಉಪವಿಭಾಗದ ಪವರ್‌ಮನ್ ಎಸ್.ಎನ್.ಶಿವದೇವ್ ಹಾಗೂ ಎಸ್.ಬಿ.ಉಷಾ ದಂಪತಿ ಪುತ್ರಿ.

ಲತಾಗೆ ಉತ್ತಮ ಅಂಕ



ಮೈಸೂರು, ಮೇ 3– ನಂಜನಗೂಡು ತಾಲೂಕು, ದೇಬೂರು ಗ್ರಾಮದಲ್ಲಿರುವ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಲತಾ ಎಸ್., ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.81.76 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಇಂಗ್ಲಿಷ್‌ನಲ್ಲಿ 125ಕ್ಕೆ 110, ಕನ್ನಡ 97, ಹಿಂದಿ 71, ಗಣಿತ 70, ವಿಜ್ಞಾನ 85, ಸಮಾಜ ವಿಜ್ಞಾನ 78 ಸೇರಿದಂತೆ ಒಟ್ಟು 511 ಅಂಕಗಳನ್ನು ಗಳಿಸಿದ್ದಾಳೆ. ಈಕೆ 'ಮೈಸೂರು ಮಿತ್ರ' ಮುದ್ರಣ ವಿಭಾಗದ ಸಿಬ್ಬಂದಿ ಸಿದ್ದರಾಜು ಬಿ. ಹಾಗೂ ಸುಮತಿ ಕೆ.ಬಿ ದಂಪತಿ ಪುತ್ರಿ.

ಪ್ರೀತಮ್‌ಗೆ ಶೇ.99 ಅಂಕ



ಮೈಸೂರು, ಮೇ 3– ನಗರದ ಐಡಿಯಲ್ ಜಾವಾ ರೋಟರಿ ಶಾಲೆಯ ವಿದ್ಯಾರ್ಥಿ ಪ್ರೀತಮ್ ಎನ್., ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.99 ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಸಂಸ್ಕೃತದಲ್ಲಿ 125ಕ್ಕೆ 125, ಸಮಾಜ ವಿಜ್ಞಾನದಲ್ಲಿ 100ಕ್ಕೆ 100, ಕನ್ನಡ, ಗಣಿತ ಹಾಗೂ ವಿಜ್ಞಾನದಲ್ಲಿ 99 ಹಾಗೂ ಇಂಗ್ಲಿಷ್‌ನಲ್ಲಿ 97 ಸೇರಿ ಒಟ್ಟು 619 ಅಂಕ ಗಳಿಸಿದ್ದಾನೆ. ಈತ ಅಗ್ರಹಾರದ ರಾಮಾನುಜ ರಸ್ತೆ ನಿವಾಸಿ ನಾಗೇಶ್ ಎನ್. ಹಾಗೂ ವೀಣಾ ಎನ್ ದಂಪತಿ ಪುತ್ರ.

ಸುತ್ತೂರು ಜೆಎಸ್‌ಎಸ್ ಶಾಲೆಗೆ ಶೇ. 78 ಫಲಿತಾಂಶ



ಶಾಂತವೀರಸ್ವಾಮಿ | ಅಕ್ಷಯ ಸಂಜೀವ

ಮೈಸೂರು, ಮೇ 3– ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 78 ರಷ್ಟು ಫಲಿತಾಂಶ ಲಭಿಸಿದೆ. ಒಟ್ಟು 559 ವಿದ್ಯಾರ್ಥಿಗಳು ಹಾಜರಾಗಿದ್ದು, 433 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 92 ವಿದ್ಯಾರ್ಥಿಗಳು 500ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಆಂಗ್ಲ ಮಾಧ್ಯಮದಲ್ಲಿ ಶಾಂತವೀರ ಸ್ವಾಮಿ ಮಠದ 625ಕ್ಕೆ 606 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮನಾಗಿದ್ದಾನೆ. ಆಂಗ್ಲ ಮಾಧ್ಯಮದಲ್ಲಿ ಶಾಲೆಗೆ ಶೇ. 86 ರಷ್ಟು ಫಲಿತಾಂಶ ಲಭಿಸಿದೆ.

ಕನ್ನಡ ಮಾಧ್ಯಮದಲ್ಲಿ ಅಕ್ಷಯ ಸಂಜೀವ ಬಿಳ್ಳೂರ 585 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮನಾಗಿದ್ದಾನೆ. ಕನ್ನಡ ಮಾಧ್ಯಮದಲ್ಲಿ ಶೇ. 71 ರಷ್ಟು ಫಲಿತಾಂಶ ಲಭಿಸಿದೆ. ಮಣಿಪುರದ ವಿದ್ಯಾರ್ಥಿನಿಯಾದ ಇಸ್ನೇಹಾ ಚಿಂಗಮ್ 625 ಕ್ಕೆ 488 ಅಂಕಗಳನ್ನು ಗಳಿಸಿದ್ದಾಳೆ.

ಜೆ. ಛಾಯಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 3– ಪ್ರಸಕ್ತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಸಿಕೆಸಿ ಕಾನ್ವೆಂಟ್ ವಿದ್ಯಾರ್ಥಿನಿ ಜೆ. ಛಾಯಾ 618 ಅಂಕ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಜಗದೀಶ್ ಮತ್ತು ಶಿಲ್ಪಾ ದಂಪತಿ ಪುತ್ರಿ.

ನೂತನ್ ಎಂ. ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 3– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಹೆಬ್ಬಾಳು 2ನೇ ಹಂತದ ಪರಮಹಂಸ ವಿದ್ಯಾನಿಕೇತನದ ವಿದ್ಯಾರ್ಥಿ ನೂತನ್ ಎಂ. 570 ಅಂಕ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಹೆಬ್ಬಾಳಿನ ಬಸವನಗುಡಿ ಸಮೀಪದ ನಿವಾಸಿ ಸೌಮ್ಯ ಪಿ. ಪುತ್ರ.



ಮೈಸೂರಿನ ಟಿ ಕೆ ಲೇಔಟ್‌ನಲ್ಲಿರುವ ಮಿತ್ರ ಹಿಂದಿ ವಿದ್ಯಾಲಯದ ವಿದ್ಯಾರ್ಥಿ ಮನೋಜ್ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ 97% ಅಂಕ ಗಳಿಸಿದ್ದು, ಈತನನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ವಿಶ್ವನಾಥ ಶರ್ಮ, ಶ್ರೀಮತಿ ಗಾಯಿತ್ರಿ ಶರ್ಮ, ಶ್ರೀಮತಿ ನಳಿನಿ, ಹರೀಶ್, ವಿದ್ಯಾಲಯದ ರಘುವೀರ್ ಇದ್ದಾರೆ.

ಮೈಸೂರು ಮಿತ್ರ

ಪಹಲ್ಗಾಂ ದಾಳಿ ಖಂಡಿಸಿ ಜಾಮಿಯಾ ಮಸ್ಜಿದ್ ಕಮಿಟಿ ಮನವಿ ಪತ್ರ ಸಲ್ಲಿಕೆ



ಮದ್ದೂರು, ಮೇ3– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮುಗ್ಧ ಪ್ರವಾಸಿಗರ ಮೇಲೆ ಭಯೋತ್ಪಾದಕರು ದಾಳಿ ನಡೆಸಿ 26 ಪ್ರವಾಸಿಗರನ್ನು ಹತ್ಯೆಗೈದ ವರ್ತನೆ ಖಂಡಿಸಿ ಪಟ್ಟಣದ ಜಾಮಿಯ ಮಸ್ಜಿದ್ ಕಮಿಟಿ ವತಿಯಿಂದ ಪಟ್ಟಣದ ತಾಲೂಕು ಕಚೇರಿಯಲ್ಲಿ ಗ್ರೇಡ್2 ತಹಸೀಲ್ದಾರ್ ಸೋಮಶೇಖರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮುಖಂಡ ಆದಿಲ್ ಆಲಿ ಖಾನ್ ಮಾತನಾಡಿ, ಪಹಲ್ಗಾಮ್‌ನಲ್ಲಿ ನಡೆದಿರುವ ಉಗ್ರರ ದಾಳಿಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಈ ಕೃತ್ಯದಲ್ಲಿ ಭಾಗಿಯಾದ ಭಯೋತ್ಪಾದಕರನ್ನು ಹುಡುಕಿ ಶಿಕ್ಷಿಸಬೇಕೆಂದು ಹಾಗೂ ಆಜಾದ್ ಕಾಶ್ಮೀರವನ್ನು ಪಾಕಿಸ್ತಾನದ ಹಿಡಿತದಿಂದ ಬೇರ್ಪಡಿಸಿ ಭಾರತದಲ್ಲಿ ವಿಲೀನಗೊಳಿಸಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಈ ಕೃತ್ಯವನ್ನು ಬಳಿಸಿಕೊಂಡು ಭಾರತದ ಎಲ್ಲಾ ಮುಸ್ಲಿಮರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಜಾತಿವಾದಿಗಳ ಕೃತ್ಯವನ್ನು ಉಗ್ರವಾಗಿ ಖಂಡಿಸುತ್ತೇವೆ. ನಾವು ಎಲ್ಲಾ ಭಾರತೀಯರು ಈ ಕಷ್ಟದ ಸಮಯದಲ್ಲಿ ಒಗ್ಗಟ್ಟಾಗಿ ಇರಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.

ಜಾಮಿಯ ಮಸ್ಜಿದ್ ಕಮಿಟಿ ಆದಿಲ್ ಆಲಿ ಖಾನ್, ಘನಿ ಷರೀಫ್, ಪರ್ವೀಜ್ ಖಾನ್, ಮಹಮದ್ ನಾಸೀರ್, ಮಹಮದ್ ರಿಯಾಜ್, ನವೀದ್ ಖಾನ್, ಮುನ್ಸಿಫ್ ಪಾಷ, ಇಂತಿಯಾಜ್‌ವುಲ್ಲಾ ಖಾನ್, ಹಜರತ್ ಸೈಯದ್ ಅಹಮದ್, ಅಯೂಬ್ ಖಾನ್, ಮಹಮದ್ ಅಕ್ಮಲ್, ಜಮೀರ್ ಪಾಷ್, ನಿಸಾರ್ ಪಾಷ ಇದ್ದರು.

ಇಂದು ಜೆಪಿ, ನಾಗರಾಜು ಅಭಿನಂದನಾ ಸಮಾರಂಭ

ಮಂಡ್ಯ,ಮೇ 3– ನಾಗರಿಕ ಅಭಿನಂದನಾ ಸಮಿತಿ ವತಿಯಿಂದ ಕನ್ನಡ ಪುಸ್ತಕ ಪ್ರಾಧಿಕಾರದ ಡಾ.ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ ಪುರಸ್ಕೃತ ಪ್ರೊ.ಜಯಪ್ರಕಾಶ್‌ಗೌಡ ಹಾಗೂ ಪುಸ್ತಕ ಮುದ್ರಣ ಸೊಗಸು ಬಹುಮಾನ ಪುರಸ್ಕೃತ ಎನ್.ನಾಗರಾಜು ಅವರಿಗೆ ಅಭಿನಂದನೆ ಸಲ್ಲಿಸಲು ಸಮಾರಂಭವನ್ನು ಮೇ 4ರಂದು ಆಯೋಜಿಸಲಾಗಿದೆ ಎಂದು ವಿಶ್ರಾಂತ ಪ್ರಾಧ್ಯಾಪಕ ಬಿ.ಎಸ್.ಶಂಕರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭವು ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಮಾಜಿ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆಯ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಭಿನಂದನಾ ನುಡಿಗಳನ್ನಾಡುವರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸುವರು. ಅಭಿನಂದಿತ ಪ್ರೊ.ಜಯಪ್ರಕಾಶ್‌ಗೌಡ ಹಾಗೂ ಎನ್.ನಾಗರಾಜು ಉಪಸ್ಥಿತರಿರಲಿದ್ದಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿ ತಗ್ಗಹಳ್ಳಿ ವೆಂಕಟೇಶ್, ವಿನಯ್‌ಕುಮಾರ್, ಜಿ.ಎಂ.ಶಿವರುದ್ರಪ್ಪ, ಜಯರಾಮು, ನಾಗಪ್ಪ ಸುರೇಶ್, ಲೋಕೇಶ್ ಇದ್ದರು.

ನಾಳೆಯಿಂದ ಒಳಮೀಸಲಾತಿ ಜಾತಿ ಸಮೀಕ್ಷೆ

ಪರಿಶಿಷ್ಟ ಜಾತಿ ಒಳಮೀಸಲಾತಿ ದತ್ತಾಂಶ ಸಂಗ್ರಹಿಸಲು ಮುಖಂಡರುಗಳ ಸಹಕಾರ ಅತಿಮುಖ್ಯ

ಮಂಡ್ಯ,ಮೇ3– ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಏಕಸದಸ್ಯ ವಿಚಾರಣ ಆಯೋಗದಿಂದ ದತ್ತಾಂಶ ಶೇಖರಿಸುವ ಸಮೀಕ್ಷೆಯು ಜಿಲ್ಲೆಯಲ್ಲಿ ಮೇ 5 ರಿಂದ 17 ರವರೆಗೆ ನಡೆಸಲಾಗುವುದು. ಪರಿಶಿಷ್ಟ ಜಾತಿ ಸಮುದಾಯ ಹಾಗೂ ವಿವಿಧ ಸಂಘ ಸಂಸ್ಥೆಯ ಮುಖಂಡರುಗಳು ಸಮೀಕ್ಷೆಯ ಬಗ್ಗೆ ಪರಿಶಿಷ್ಟ ಜಾತಿಯ ಕುಟುಂಬದವರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.



ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಮುಖಂಡರುಗಳ ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಮುಖಂಡರುಗಳ ಸಭೆ ನಡೆಸಿ ಮಾತನಾಡಿದರು. ಮೇ 5 ರಿಂದ 17 ರವರೆಗೆ ಮನೆ ಮನೆ ಸಮೀಕ್ಷೆ ನಡೆಯಲಿದೆ. ಗಣತಿದಾರರನ್ನು ಶಾಲಾ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಸಮೀಕ್ಷೆಯನ್ನು ಆ್ಯಪ್‌ನಲ್ಲಿ ಭರ್ತಿ ಮಾಡಲಾಗುವುದು ಎಂದರು.

ಸಮೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳ ವಿವರ ನೀಡಿದರು. ಸಮೀಕ್ಷಾದಾರು ಕೇಳುವ ಪ್ರಶ್ನೆಗಳಿಗೆ ನಿಖರ ಮಾಹಿತಿ ನೀಡುವಂತೆ ಪರಿಶಿಷ್ಟ ಜಾತಿಯ ಕುಟುಂಬ ಸ್ಥರಿಗೆ ಜಾಗೃತಿ ಮೂಡಿಸುವಂತೆ ಮುಖಂಡರುಗಳಲ್ಲಿ ಮನವಿ ಮಾಡಿದರು.

10 ಗಣತಿದಾರರಿಗೆ ಒಬ್ಬರು ಸೂಪರ್ ವೈಸರ್ ನೇಮಕ ಮಾಡಲಾಗಿದೆ ಹಾಗೂ ಅವರಿಗೆ ತರಬೇತಿ ನೀಡಲಾಗಿದೆ. ಆ್ಯಪ್‌ನಲ್ಲಿ ಭರ್ತಿ ಮಾಡಬೇಕಿರುವುದರಿಂದ ತರಬೇತಿಗೆ ಹೆಚ್ಚು ಒತ್ತು ಮೀಸಲಾಗಿದೆ ಎಂದರು.

ಮೇ 19 ರಿಂದ 21ರವರೆಗೆ ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಕೈಗೊಳ್ಳುವುದು. ಕಾರಣಾಂತರಗಳಿಗೆ ಮನೆ–ಮನೆ ಸಮೀಕ್ಷೆಯ ಸಂದರ್ಭದಲ್ಲಿ ಸಮೀಕ್ಷೆಗೆ ಒಳಗಾಗದವರು ತಮ್ಮ ವ್ಯಾಪ್ತಿಯ ಮತಗಟ್ಟೆಗೆ ಭೇಟಿ ನೀಡಿ ಸಮೀಕ್ಷೆಗೆ ಒಳಗಾಗುವುದು. ಇದಲ್ಲದೇ ಮೇ 19 ರಿಂದ 23 ರವರೆಗೆ ಆನ್‌ಲೈನ್ ಮೂಲಕ ಸ್ವಯಂ–ಘೋಷಣೆಗೆ ಅವಕಾಶವಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ಅವರು ಮಾತನಾಡಿ, ಸಮೀಕ್ಷೆಯಲ್ಲಿ ಗಣತಿದಾರರು ತಾಂತ್ರಿಕವಾಗಿ ಹೆಚ್ಚಿನ ಜ್ಞಾನ ಹೊಂದಿರಬೇಕು ಎಂಬ ದೃಷ್ಟಿಯಿಂದ ತರಬೇತಿ ನೀಡಲಾಗಿದೆ ಎಂದರು.

ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರುಗಳು ಕಸ ಸಂಗ್ರಹಿಸುವ ವಾಹನದ ಧ್ವನಿವರ್ಧಕದ ಮೂಲಕ ಹೆಚ್ಚಿನ ಪ್ರಚಾರ ನೀಡಿ, ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಕುಟುಂಬದವರು ಸಮೀಕ್ಷೆಗೆ ಒಳಗಾಗಲು ಹಿಂಜರಿಯುತ್ತಾರೆ, ಸಮೀಕ್ಷೆಗೆ ಆನ್‌ಲೈನ್‌ನಲ್ಲೂ ಅವಕಾಶ ಇದೆ ಎಂಬುದರ ಬಗ್ಗೆ ಪ್ರಚಾರ ನೀಡಿ, ಸಮೀಕ್ಷೆಗೆ ಸಮೀಕ್ಷೆದಾರರು ಬೆಳಿಗ್ಗೆ 7 ಗಂಟೆಗೆ ಹೋಗುವುದು ಉತ್ತಮ. ಇದರಿಂದ ಕೆಲಸಕ್ಕೆ ತೆರಳುವವರಿಗೆ ಅನುಕೂಲವಾಗುತ್ತದೆ, ಪೌರ ಕಾರ್ಮಿಕರು, ಅಲೆಮಾರಿಗಳು ಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಿ ಎಂದು ಸಭೆಗೆ ಸಲಹೆ ನೀಡಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸಿದ್ದಲಿಂಗೇಶ್ ಉಪಸ್ಥಿತರಿದ್ದರು.

ಸಮೀಕ್ಷೆದಾರರಿಗೆ ತರಬೇತಿ: ಪರಿಶಿಷ್ಟ ಜಾತಿಗಳ ದತ್ತಾಂಶ ಸ್ವೀಕರಿಸುವ ಸಮೀಕ್ಷೆಗಾಗಿ ಆಯ್ಕೆಯಾಗಿರುವ ಸಮೀಕ್ಷೆದಾರರಿಗಾಗಿ ಮತ್ತು ಮೇಲ್ವಿಚಾರಕರಿಗಾಗಿ ಪಿ.ಇ.ಎಸ್ ಕಾಲೇಜಿನಲ್ಲಿ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಜಿಲ್ಲೆಯಿಂದ ಒಟ್ಟು 410 ಗಣತಿದಾರರನ್ನು ಸಮೀಕ್ಷೆಗಾಗಿ ಆಯ್ಕೆಮಾಡಿದ್ದು, ತರಬೇತಿಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ ಭಾಗವಹಿಸಿ, ಸಮೀಕ್ಷೆ ಸಂದರ್ಭದಲ್ಲಿ ಆ್ಯಪ್‌ಅನ್ನು ಯಾವ ರೀತಿ ಬಳಸಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಿ ಎಂದರು.

ಮುತ್ತತ್ತಿಯಲ್ಲಿ ಯುವಕ ಜಲಸಮಾಧಿ

ಹಲಗೂರು: ಪ್ರಸಿದ್ಧ ಪ್ರವಾಸಿ ತಾಣ ಮುತ್ತತ್ತಿಯ ಕಾವೇರಿ ನದಿಯಲ್ಲಿ ಈಜಲು ಹೋದ ಯುವಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ದುರ್ಘಟನೆ ಗುರುವಾರ ಸಂಭವಿಸಿದೆ.



ಮೃತ ಚೇತನ್ (22) ಚಿತ್ತದುರ್ಗದ ನಿವಾಸಿಯಾಗಿದ್ದು, ಬೆಂಗಳೂರಿನ ತಿಟ್ಟಗೊಂಡನಹಳ್ಳಿಯಲ್ಲಿ ಇರುವ ಏರ್ ಟೆಸ್ಟ್ ಕಂಪನಿಯಲ್ಲಿ ಸೆಕ್ಯೂರಿಟಿ ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ತನ್ನ 22 ಸ್ನೇಹಿತರೊಂದಿಗೆ ಮುತ್ತತ್ತಿಗೆ ಪ್ರವಾಸಕ್ಕಾಗಿ ಬಂದಿದ್ದ ಅವರು ದೇವರ ದರ್ಶನ ಬಳಿಕ ಬಿಸಿಲಿನ ತಾಪವನ್ನು ತಣಿಸಿಕೊಳ್ಳಲು ನದಿಯಲ್ಲಿ ಈಜಲು ಇಳಿದಾಗ, ದುರ್ಘಟನೆ ಸಂಭವಿಸಿದೆ. ತಕ್ಷಣ ಸ್ಥಳೀಯರು ಹಾಗೂ ನುರಿತ ಈಜುಗಾರರನ್ನು ಕರೆಸಿ ಹುಡುಕಾಟ ನಡೆಸಿದ್ದು, ಶವವನ್ನು ಶುಕ್ರವಾರ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಯಿತು. ನಂತರ ಶವವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಯಿತು.

ಈ ಕುರಿತು ಹಲಗೂರು ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ.

ಮೇ 6 ರಂದು ಮಹಿಳಾ ಸರ್ಕಾರಿ ಕಾಲೇಜಿನ ವಾರ್ಷಿಕೋತ್ಸವ

ಮಂಡ್ಯ,ಮೇ3– ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಮಹಿಳಾ ಸರ್ಕಾರಿ ಕಾಲೇಜಿ (ಸ್ವಾಯತ್ತ)ನಲ್ಲಿ 2024–2025 ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ್ ಮತ್ತು ಗೈಡ್ಸ್ ರೇಂಜರ್ಸ್ ಹಾಗೂ ರೆಡ್ ಕ್ರಾಸ್ ಚಟುವಟಿಕೆಗಳ ಸಮಾರೋಪ ಸಮಾರಂಭ ಮತ್ತು 2025ರ ಕಾಲೇಜು ವಾರ್ಷಿಕೋತ್ಸವ ಸಮಾರಂಭವನ್ನು ಮೇ 6 ರಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ವನರಂಗದಲ್ಲಿ ಆಯೋಜಿಸಲಾಗಿದೆ ಕಾರ್ಯಕ್ರಮದ ಉದ್ಘಾಟನೆಯನ್ನು ಮಂಡ್ಯ ವಿಧನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್ ಅವರು ನೆರವೇರಿಸಲ್ಲಿದ್ದಾರೆ. ಮಹಿಳಾ ಸರ್ಕಾರಿ ಕಾಲೇಜಿನ(ಸ್ವಾಯತ್ತ) ಪ್ರಾಂಶುಪಾಲರಾದ ಡಾ.ಗುರುರಾಜ್ ಪ್ರಭು.ಕೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಖ್ಯಾತ ಚಲನಚಿತ್ರನಟ ಮತ್ತು ಮಂಡ್ಯ ರಮೇಶ್ ಭಾಗವಹಿಸಲಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಕೆ.ಆರ್.ಪೇಟೆಗೆ ಶೇ.60.88 ರಷ್ಟು ಫಲಿತಾಂಶ

ಕೆ.ಆರ್.ಪೇಟೆ, ಮೇ 3– ಈ ಭಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿಗೆ 60.88ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಕುಳಿತಿದ್ದ 2544 ವಿದ್ಯಾರ್ಥಿಗಳಲ್ಲಿ 1549 ವಿದ್ಯಾರ್ಥಿಗಳು ಉತ್ತೀರ್ಣ ಹೊಂದಿರುತ್ತಾರೆ.

ಈ ಪೈಕಿ ಪಟ್ಟಣದ ಎಸ್.ಎಸ್.ಕೆ.ಸಿ ಪ್ರೌಢಶಾಲೆಯ ಧೃತಿ.ಜೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ತಾಲೂಕಿನ ಕೀರ್ತಿಯನ್ನು ರಾಜ್ಯ ಮಟ್ಟದಲ್ಲಿ ಹೆಚ್ಚಿಸಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡ ತಿಳಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ 625 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಧೃತಿ.ಜೆ, 623 ಅಂಕಗಳನ್ನು ಪಡೆದ ಮೋದೂರಿನ ಎಂ.ಎಸ್.ಗೀತಾಂಜಲಿ, 620 ಅಂಕಗಳನ್ನು ಪಡೆದ ಆರ್.ಎಸ್.ಸ್ವಪ್ನ ಅವರನ್ನು ಇಲಾಖೆಯ ಪರವಾಗಿ ಸನ್ಮಾನಿಸಿ ಮಾತನಾಡಿದರು.

ಟಾಪ್ ಟೆನ್ ವಿದ್ಯಾರ್ಥಿಗಳು: ಎಸ್‌ಎಸ್‌ಕೆಸಿ ಶಾಲೆಯ ಧೃತಿ.ಜೆ–625, ಎಂ.ಎಸ್.ಗೀತಾಂಜಲಿ– 623, ಸ್ವಪ್ನ.ಆರ್.ಎಸ್–620, ಆದಿಚುಂಚನಗಿರಿ ಪ್ರೌಢಶಾಲೆಯ ಬಿ.ಧನುಷ್ ಗೌಡ–619, ಡಿ.ಆರ್.ಕೃಪ–619, ಆರ್ಯನ್ ಸತೀಶ್ ನಾಯಕ್–618, ಕೇಂಬ್ರಿಡ್ಜ್ ಹೆಚ್.ಡಿ.ಮೌಲ್ಯ–612, ಚೈತನ್ಯ ಶಾಲೆಯ ಗೀತಾ.ಎಸ್– 612, ತೇಗನಹಳ್ಳಿ ಆಶೀರ್ವಾದ ಶಾಲೆಯ ಅಮೂಲ್ಯ ಬಿ.ಎನ್–611, ಆದಿಚುಂಚನಗಿರಿ ಶಾಲೆಯ ಸ್ಫೂರ್ತಿ. ಆರ್– 609, ಕೇಂಬ್ರಿಡ್ಜ್ ಶಾಲೆ ಹಂಸವೇಣಿ– 609 ಅಂಕಗಳನ್ನು ಪಡೆದ ಟಾಪ್ ವಿದ್ಯಾರ್ಥಿಗಳಾಗಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಧೃತಿ.ಜೆ, ಮೋದೂರಿನ ಎಂ.ಎಸ್. ಗೀತಾಂಜಲಿ, ಆರ್.ಎಸ್. ಸ್ವಪ್ನ ಅವರನ್ನು ಇಲಾಖೆಯ ಪರವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಮಂಜುನಾಥ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ಧೃತಿ.ಜೆ. ಪೋಷಕರಾದ ಜ್ಞಾನೇಶ್–ರಶ್ಮಿ, ಗೀತಾಂಜಲಿ ಪೋಷಕರಾದ ಮೋದೂರು ಶ್ರೀನಿವಾಸ್–ರಾಧಾ, ಸ್ವಪ್ನ ಪೋಷಕರಾದ ರಮೇಶ್–ಸರ್ವಮಂಗಳ ಹಾಗೂ ಶಿಕ್ಷಣ ಸಂಯೋಜಕರಾದ ಹರೀಶ್, ಕೃಷ್ಣನಾಯಕ್, ನವೀನ್‌ಕುಮಾರ್, ಮೋಹನ್‌ಕುಮಾರ್, ವೀರಭದ್ರಯ್ಯ, ಎಸ್.ಎಸ್.ಕೆ.ಸಿ. ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕುಮಾರ್, ಗ್ರಾಮ ಭಾರತಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಹೆಚ್.ಎಸ್.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಪಟ್ಟಸೋಮನಹಳ್ಳಿ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ, ಮೇ3– ತಾಲೂಕಿನ ಪಟ್ಟಸೋಮನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಗಳಾದ ಪಿ.ಕೆ.ರಮೇಶ್, ಉಪಾಧ್ಯಕ್ಷರಾಗಿ ಕೃಷ್ಣಾಚಾರಿ ಆಯ್ಕೆಯಾದರು.

11 ಮಂದಿ ಚುನಾಯಿತ ನಿರ್ದೇಶಕ ಹಾಗೂ ಬ್ಯಾಂಕ್ ಪ್ರತಿನಿಧಿ ಸೇರಿ ಒಟ್ಟು 12 ಸದಸ್ಯರ ಸಂಖ್ಯಾಬಲ ಹೊಂದಿರುವ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್–ಬಿಜೆಪಿ ಮೈತ್ರಿಯಾಗಿ ಪಿ.ಕೆ.ರಮೇಶ್ ಹಾಗೂ ರೈತ ಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ತಿಮ್ಮರಾಜು ನಾಮಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಕೃಷ್ಣಾಚಾರಿ ಹಾಗೂ ರೈತಸಂಘ–ಕಾಂಗ್ರೆಸ್ ಅಭ್ಯರ್ಥಿಯಾಗಿ ರಜಿನಿ ನಾಮಪತ್ರ ಸಲ್ಲಿಸಿದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎರಡೆರಡು ನಾಮಪತ್ರಗಳು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಆರ್.ನಿರ್ಮಲ ಅವರು ಮತದಾನ ಪ್ರಕ್ರಿಯೆ ನಡೆಸಿದರು. ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಪಿ.ಕೆ.ರಮೇಶ್ ಅವರಿಗೆ –7 ಮತ ಹಾಗೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತಿಮ್ಮರಾಜು–5 ಮತಗಳ ಬಂದವು. 2ಮತಗಳ ಅಂತರದಿಂದ ಪಿ.ಕೆ.ರಮೇಶ್ ಗೆಲುವು ಸಾಧಿಸಿದರು.

ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೃಷ್ಣಾಚಾರಿ–7 ಹಾಗೂ ರಜಿನಿ–5 ಮತಗಳ ಬಂದವು ಕೃಷ್ಣಾಚಾರಿ 2 ಮತಗಳ ಅಂತರದಿಂದ ಗೆಲುವು ಸಾಧಿಸುವ ಮೂಲಕ ಅಧ್ಯಕ್ಷ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಅವರು ಘೋಷಿಸಿದರು.

ಒಂದನೇ ಪುಟದಿಂದ

ಕಾವೇರಿ ಆರತಿ

ಇಲಾಖೆ ಜೊತೆಗೆ ಪ್ರವಾಸೋದ್ಯಮ, ಮುಜರಾಯಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಗಳು ತಮ್ಮ ವ್ಯಾಪ್ತಿಗೆ ಒಳಪಟ್ಟು ಅಭಿವೃದ್ಧಿ ಕಾರ್ಯ ಕೈಗೊಳ್ಳಲಿವೆ. ಎಲ್ಲಾ ಆರ್ಥಿಕ ಹೊರೆ ಜಲಸಂಪನ್ಮೂಲ ಇಲಾಖೆ ಮೇಲೆ ಬೀಳುವುದಿಲ್ಲ, ಕಾವೇರಿ ಆರತಿ ಕಾರ್ಯಕ್ರಮವನ್ನು ದಕ್ಷಿಣ ಭಾರತದ ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಗುವುದು.

ಯೋಜನಾ ಪ್ರಾಧಿಕಾರ: ಈ ಉದ್ದೇಶಕ್ಕಾಗಿ ಕೆಆರ್‌ಎಸ್ ಅಣೆಕಟ್ಟೆಗೆ ಹೊಂದಿಕೊಂಡಿರುವ ನಾಲ್ಕು ಪಂಚಾಯತ್‌ಗಳನ್ನು ಸೇರಿಸಿ ಯೋಜನಾ ಪ್ರಾಧಿಕಾರ ರಚಿಸಲಾಗುವುದು. ಇದಕ್ಕಾಗಿ ಯಾವುದೇ ಭೂಸ್ವಾಧೀನ ಮಾಡುವುದಿಲ್ಲ. ಪ್ರವಾಸಿಗರ ಅನುಕೂಲಕ್ಕಾಗಿ ವಸತಿ, ಹೋಟೆಲ್ ಸೇರಿದಂತೆ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಸ್ಥಳೀಯ ಭೂಮಾಲೀಕರಿಗೆ ಅವಕಾಶ ನೀಡಲಾಗುವುದು. ಅವರು, ಯೋಜನಾ ಪ್ರಾಧಿಕಾರದ ಅನುಮತಿ ಪಡೆದು ಪ್ರವಾಸಿಗರಿಗೆ ಅನುಕೂಲವಾಗುವ ಸೌಲಭ್ಯಗಳನ್ನು ರೂಪಿಸಬಹುದಾಗಿದೆ ಎಂದರು. ಕೆಆರ್‌ಎಸ್‌ನ ನಾಲ್ಕು ಮಾರ್ಗಗಳನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗಿದೆ. ದಸರಾ ಆಚರಣೆಗೆ ಇನ್ನೂ ಆರು ತಿಂಗಳ ಸಮಯವಿದ್ದು, ಅಷ್ಟರಲ್ಲಿ ಕಾವೇರಿ ಆರತಿ ಕಾರ್ಯಕ್ರಮಗಳ ಪೂರ್ಣ ಸಿದ್ಧತೆ ನಡೆಯಲಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಆಸ್ತಿ ತೆರಿಗೆ ಸಂಗ್ರಹ

ಒಂದೇ ತಿಂಗಳಲ್ಲಿ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಸಿದ್ದಾರೆ. ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ 3ರಲ್ಲೇ 22,65,70,780 ರೂ. ಆಸ್ತಿ ತೆರಿಗೆ ಸಂಗ್ರಹಿಸಿ ದಾಖಲೆ ಮಾಡಿರುವ ವಲಯಾಧಿಕಾರಿ ಸತ್ಯಮೂರ್ತಿ ನೇತೃತ್ವದ ಕಂದಾಯಾಧಿಕಾರಿ, ಸಹಾಯಕ ಕಂದಾಯಾಧಿಕಾರಿ ಹಾಗೂ ಸಿಬ್ಬಂದಿ, ಮತ್ತೆ ಶೇ.5ರ ರಿಯಾಯಿತಿ ಅವಧಿ ವಿಸ್ತರಿಸಿದ್ದಲ್ಲಿ ಮತ್ತಷ್ಟು ಸಂಗ್ರಹವಾಗಲಿದೆ.

ವಲಯ ಕಚೇರಿ–3ರ ವ್ಯಾಪ್ತಿಯ 18,931 ಆಸ್ತಿ ಮಾಲೀಕರು ಆನ್‌ಲೈನ್ ಮೂಲಕ 8,78,63,586 ರೂ., ಕರ್ನಾಟಕ ಒನ್‌ನಲ್ಲಿ 3,56,56,499 ರೂ., ಬ್ಯಾಂಕ್ ಕೌಂಟರ್‌ನಲ್ಲಿ 9,40,22,787 ರೂ., ಚೆಕ್ ಮೂಲಕ 89,43,811 ರೂ., ಒಟ್ಟು 22,65,70,780 ರೂ. ಆಸ್ತಿ ತೆರಿಗೆ ಪಾವತಿಸಿದ್ದಾರೆ. ಕಳೆದ ವರ್ಷ ಏಪ್ರಿಲ್ ಮಾಹೆಯಲ್ಲಿ 91 ಕೋಟಿ ರೂ. ಆಸ್ತಿ ತೆರಿಗೆ ವಸೂಲಾಗಿದ್ದು, ಈ ಬಾರಿ 30 ಕೋಟಿ ರೂ. ಹೆಚ್ಚು ಆದಾಯ ಸಂಗ್ರಹವಾದಂತಾಗಿದೆ. ಮೈಸೂರು ಮಹಾನಗರ ಪಾಲಿಕೆಯು ಶೇ.5ರ ರಿಯಾಯಿತಿಯನ್ನು ಜೂನ್ 30ರವರೆಗೆ ಎರಡು ತಿಂಗಳ ಕಾಲ ವಿಸ್ತರಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಈವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸರ್ಕಾರದ ಅನುದಾನ ಬಾರದೇ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ಮೈಸೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆ ಸಂಗ್ರಹವಾಗಿರುವುದರಿಂದ ಸ್ವಲ್ಪ ಮಟ್ಟಿಗೆ ಹಣಕಾಸು ಕೊರತೆ ನೀಗಿದಂತಾಗಿದೆ.

ಪರಿಶಿಷ್ಟ ಜಾತಿ ಸಮೀಕ್ಷೆ

ಸಮೀಕ್ಷೆ ನಡೆಸಲಾಗುತ್ತಿದೆ. ಆ್ಯಪ್‌ನಲ್ಲಿ ಮಾಹಿತಿ ಸಂಗ್ರಹಿಸಲು ಪ್ರಶ್ನಾವಳಿಗಳನ್ನು ಸಿದ್ಧಪಡಿಸಲಾಗಿದೆ ಎಂದು ರಂಗೇಗೌಡರು ತಿಳಿಸಿದರು.

ಮೇ 5ರಿಂದ ಆರಂಭವಾಗುವ ಸಮೀಕ್ಷೆ ಕಾರ್ಯ ಮೇ 23ರವರೆಗೆ ನಿರಂತರವಾಗಿ ನಡೆಯಲಿದೆ. ಸಮೀಕ್ಷೆಯಲ್ಲಿ ಭಾಗಿಯಾಗುವ ಶಿಕ್ಷಕರಿಗೆ ಗಳಿಕೆ ರಜೆ ನೀಡುವ ಬಗ್ಗೆ ಸರ್ಕಾರ ತೀರ್ಮಾನಿಸಲಿದೆ ಎಂದು ರಂಗೇಗೌಡರು ಹೇಳಿದರು.

ಗಣತಿದಾರರು ತಮ್ಮ ಮೊಬೈಲ್‌ನಲ್ಲಿ ಪರಿಶಿಷ್ಟ ಜಾತಿಯ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಸಮೀಕ್ಷೆ ನಡೆಸುವರು. ಪ್ರತಿ ಮನೆಗೆ ಭೇಟಿ ನೀಡಿದಾಗ ಪರಿಶಿಷ್ಟ ಜಾತಿಯ ಕುಟುಂಬದವರಿಂದ ಆ್ಯಪ್‌ನಲ್ಲಿ ಕೇಳಿರುವ ಪ್ರಶ್ನೆಗಳಿಗೆ ಉತ್ತರ ಪಡೆಯುವರು ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿಗೆ ಸೇರದ ಕುಟುಂಬವಲ್ಲ ಎಂದು ತಿಳಿದರೆ ಆ ಮಾಹಿತಿಯನ್ನು ಕೂಡ ಆ್ಯಪ್‌ನಲ್ಲಿ ನಮೂದಿಸಬೇಕು ಎಂದರು.

ಪ್ರತಿ ಬೂತ್‌ನಲ್ಲಿ ಮೇ 18ರಿಂದ 20ರವರೆಗೆ ಪರಿಶಿಷ್ಟ ಜಾತಿ ಸಮೀಕ್ಷೆ ಕೇಂದ್ರ ತೆರೆಯಲಾಗುವುದು. ತಮ್ಮ ಮನೆಗೆ ಗಣತಿದಾರರು ಭೇಟಿ ನೀಡಿಲ್ಲ ಎಂದಾದರೆ ಅಥವಾ ಗಣತಿದಾರರು ಮನೆಗೆ ಭೇಟಿ ನೀಡಿದ್ದ ಸಮಯದಲ್ಲಿ ಮನೆಯಲ್ಲಿ ಇಲ್ಲದ ಪರಿಶಿಷ್ಟ ಜಾತಿಯವರು ಈ ಬೂತ್‌ಗೆ ಭೇಟಿ ನೀಡಿ ತಮ್ಮ ಜಾತಿ ಸೇರಿದಂತೆ ಇತರೆ ಮಾಹಿತಿ ನೀಡಬಹುದು ಎಂದರು. ಒಟ್ಟಾರೆ ವೈಜ್ಞಾನಿಕವಾಗಿ ಪರಿಶಿಷ್ಟ ಜಾತಿ ಸಮೀಕ್ಷೆ ಮಾಡಲಾಗುತ್ತದೆ. ಈ ಸಂಬಂಧ ಪ್ರತಿಯೊಬ್ಬ ಶಿಕ್ಷಕ ಸಮೀಕ್ಷೆದಾರರಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಸಮೀಕ್ಷೆಗೆ ಅವಶ್ಯವಿರುವ ಪೆನ್, ಪುಸ್ತಕ, ಗುರುತಿನ ಚೀಟಿ ಸೇರಿದಂತೆ ಇತರೆ ಪರಿಕರಗಳನ್ನು ನೀಡಲಾಗಿದೆ ಎಂದು ರಂಗೇಗೌಡರು ತಿಳಿಸಿದರು.

ಮೆಚ್ಚಿದವಳ ಮದುವೆ ಮಾಡಿಕೊಳ್ಳಲು 'ಆಸ್ತಿ'ಗಾಗಿ ಹತ್ಯೆ!

ಕ್ರಿಮಿನಲ್ ಚಟುವಟಿಕೆಗಳನ್ನೇ ಹವ್ಯಾಸವಾಗಿಟ್ಟುಕೊಂಡಿದ್ದ ಅನಿಲ್, ಉದ್ಯಮಿ ಪ್ರದೀಪ್ ಕೊಯ್ಲಿ ಅವಿವಾಹಿತರಾಗಿದ್ದು, ಬಹಳಷ್ಟು ಆಸ್ತಿ ಹೊಂದಿದ್ದಾರೆ ಎಂಬ ಮಾಹಿತಿ ಸಂಗ್ರಹಿಸಿ, ಅವರ ಹತ್ಯೆ ಮಾಡಿ, ಹಣ ದೋಚುವ ಉದ್ದೇಶದಿಂದ ಅವರ ಆಸ್ತಿ ಖರೀದಿ ಮಾಡುವ ನೆಪದಲ್ಲಿ ಪರಿಚಯ ಮಾಡಿಕೊಂಡಿದ್ದಾನೆ. ಆಸ್ತಿ ಖರೀದಿಸುವವರು ವಿದೇಶದಲ್ಲಿರುವುದರಿಂದ ಅವರ ಪರವಾಗಿ ತಾನು ವ್ಯವಹರಿಸುವುದಾಗಿ ತಿಳಿಸಿದ್ದ ಆತ ಪ್ರದೀಪ್ ಕೊಯ್ಲಿ ಅವರಿಗೆ ಲಕ್ಷ ರೂ. ಮುಂಗಡ ಹಣವನ್ನೂ ನೀಡಿ ನಂಬಿಕೆ ಹುಟ್ಟಿಸಿದ್ದ. ಅದೇ ವೇಳೆ ಅವರ ಹತ್ಯೆಗೆ ಸ್ಕೆಚ್ ರೂಪಿಸಿದ್ದ ಆತ ತನ್ನ ಸ್ನೇಹಿತರೊಂದಿಗೆ ಏ.23ರಂದು ಪ್ರದೀಪ್ ಕೊಯ್ಲಿ ಅವರ ಮನೆಗೆ ಬಂದು, ಹಗ್ಗದಿಂದ ಅವರ ಕುತ್ತಿಗೆ ಬಿಗಿದು ಕೊಲೆ ಮಾಡಿ, ಆಸ್ತಿ ಪತ್ರ ಮತ್ತು ಮೊಬೈಲ್ ತೆಗೆದುಕೊಂಡು ಹೋಗಿದ್ದಾನೆ. ಅದೇ ದಿನ ರಾತ್ರಿ ಮತ್ತೆ ಪ್ರದೀಪ್ ಮನೆಗೆ ಆಗಮಿಸಿ ಮೃತದೇಹವನ್ನು ಹೂತು ಹಾಕಿ, ಮನೆಯಲ್ಲಿದ್ದ ಕರಿಮೆಣಸು, ಕಾರು, ಹಾಗೂ ಸಿಸಿ ಕ್ಯಾಮರಾ ನಾಶಪಡಿಸುವ ಸಂಚು ರೂಪಿಸಿದ್ದ. ಆದರೆ ಅಷ್ಟೊತ್ತಿಗೆ ಕೊಲೆ ಪ್ರಕರಣ ಬಹಿರಂಗವಾಗಿದ್ದು, ಸ್ಥಳಕ್ಕೆ ಪೊಲೀಸರು ಬಂದಿದ್ದ ಹಿನ್ನೆಲೆಯಲ್ಲಿ ಸಾಕ್ಷ್ಯನಾಶದ ಉದ್ದೇಶ ಈಡೇರಿಲ್ಲ ಎಂದು ಎಸ್.ಪಿ.ರಾಮರಾಜನ್ ವಿವರಿಸಿದರು.

ಆರೋಪಿ ಅನಿಲ್ ಯುವತಿ ಯೋರ್ವಳನ್ನು ಪ್ರೀತಿಸುತ್ತಿದ್ದು, ಮದುವೆ ಮಾಡಿಕೊಡುವಂತೆ ಆಕೆಯ ಪೋಷಕರನ್ನು ಕೇಳಿದ್ದ. ಈ ವೇಳೆ ಯುವತಿಯ ಪೋಷಕರು ವರನಿಗೆ ಆಸ್ತಿ ಮತ್ತು ಕೆಲಸ ಇಲ್ಲದಿರುವುದರಿಂದ ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ್ದರು. ಹೀಗಾಗಿ ಆಸ್ತಿ ಮತ್ತು ಹಣ ಮಾಡಿ ಆಕೆಯನ್ನು ಮದುವೆಯಾಗುವ ಉದ್ದೇಶದಿಂದ ಈ ಕೃತ್ಯ ಎಸಗಿರುವುದಾಗಿ ವಿಚಾರಣೆ ವೇಳೆ ಅನಿಲ್ ತಿಳಿಸಿರುವುದಾಗಿ ಎಂದು ಜಿಲ್ಲಾ ಎಸ್‌ಪಿ ಕೆ.ರಾಮರಾಜನ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮತ್ತಷ್ಟು ವಂಚನೆ ಬೆಳಕಿಗೆ: ಈತ ಈ ಹಿಂದೆ ಕೆಲವರನ್ನು ಪರಿಚಯ ಮಾಡಿಕೊಂಡು ಜಮೀನಿನಲ್ಲಿ ನಿಧಿ ಇದೆ ಎಂದು ನಂಬಿಸಿ ಬೆಂಗಳೂರು, ಹಾಸನ, ಪೊನ್ನಂಪೇಟೆ ಮುಂತಾದೆಡೆ ಹಣ ಪಡೆದು ವಂಚಿಸಿರುವುದು ವಿಚಾರಣೆ ಸಂದರ್ಭ ಬೆಳಕಿಗೆ ಬಂದಿದೆ. ಅಲ್ಲದೆ, ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ತಿತಿಮತಿಯಲ್ಲಿ ಆಸ್ತಿ ಖರೀದಿ ಮತ್ತು ಮಾರಾಟ ಮಾಡುವ ನೆಪದಲ್ಲಿ ಒಂಟಿ ಮಹಿಳೆಯನ್ನು ಈತ ಸಂಪರ್ಕಿಸಿದ್ದ. ಆ ಮಹಿಳೆಗೆ ಸ್ಥಳೀಯ ಸಂಬಂಧಿಕರಿದ್ದ ಹಿನ್ನೆಲೆಯಲ್ಲಿ ಆಕೆಯೊಂದಿಗಿನ ವ್ಯವಹಾರವನ್ನು ಸ್ಥಗಿತಗೊಳಿಸಿದ್ದ. ಕೋಣನಕಟ್ಟೆ ಎಂಬಲ್ಲಿ 50 ಎಕರೆ ತೋಟ ಹೊಂದಿರುವ ಒಬ್ಬರನ್ನು ಆಸ್ತಿ ಖರೀದಿಸುವ ನೆಪದಲ್ಲಿ ಪರಿಚಯಿಸಿಕೊಂಡಿದ್ದ. ಈ ವೇಳೆ ಅವರ ಮನೆಯಲ್ಲಿ ಅವರ ಮಕ್ಕಳು ಕೂಡ ಇರುವುದನ್ನು ಅರಿತು ಈ ಆಸ್ತಿ ಖರೀದಿ ವ್ಯಹಾರ ವನ್ನು ಕೂಡ ಕೈ ಬಿಟ್ಟಿದ್ದ. ಕೊನೆಗೆ ಪ್ರದೀಪ್ ಅವರನ್ನು ಹತ್ಯೆ ಮಾಡಿದ್ದಾನೆ ಎಂಬುದು ವಿಚಾರಣೆ ವೇಳೆ ತಿಳಿದುಬಂದಿರುವುದಾಗಿ ಎಸ್‌ಪಿ ಮಾಹಿತಿ ನೀಡಿದರು.

ವಿರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ್ ಮುಧೋಳ್, ವಿರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಕುಟ್ಟ ವೃತ್ತ ನಿರೀಕ್ಷಕ ಶಿವರುದ್ರ ಬಿ.ಎಸ್, ಗೋಣಿಕೊಪ್ಪ ಠಾಣಾಧಿಕಾರಿ ಪ್ರದೀಪ್ ಕುಮಾರ್, ವಿರಾಜಪೇಟೆ ಠಾಣಾಧಿಕಾರಿ ಪ್ರಮೋದ್‌ಕುಮಾರ್, ಪೊನ್ನಂಪೇಟೆ ಠಾಣಾಧಿಕಾರಿ ನವೀನ್, ಶ್ರೀಮಂಗಲ ಠಾಣಾಧಿಕಾರಿ ರವೀಂದ್ರ ಮತ್ತು ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಪಾಕ್ ಮಣಿಸಲು ಭಾರತ ಚಾಣಾಕ್ಷ ತಂತ್ರ!

ಅಂಚೆ ಪಾರ್ಸೆಲ್ ವಿನಿಮಯ ಸ್ಥಗಿತ: ಭಾರತ ಶನಿವಾರ ಪಾಕಿಸ್ತಾನದಿಂದ ವಿಮಾನ ಮತ್ತು ರಸ್ತೆ, ಜಲ ಮಾರ್ಗಗಳ ಮೂಲಕ ಎಲ್ಲಾ ವರ್ಗದ ಅಂಚೆ ಮತ್ತು ಪಾರ್ಸೆಲ್‌ಗಳ ವಿನಿಮಯವನ್ನು ಸ್ಥಗಿತಗೊಳಿಸಿದೆ. ಸಂವಹನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಂಚೆ ಇಲಾಖೆಯ ಸೇವೆಗಳನ್ನು ಸ್ಥಗಿತಗೊಳಿಸುವ ಆದೇಶ ಹೊರಡಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪಾಕಿಸ್ತಾನದ ನಂಟು ಉಲ್ಲೇಖಿಸಿರುವ ಭಾರತ ಪಾಕ್ ವಿರುದ್ಧ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಉಗ್ರರಿಗೆ ಕಠಿಣ ಶಿಕ್ಷೆ ವಿಧಿಸುವ ಭರವಸೆ ನೀಡಿದೆ. ಪಾಕಿಸ್ತಾನದಿಂದ ಎಲ್ಲಾ ಸರಕುಗಳ ನೇರ ಅಥವಾ ಪರೋಕ್ಷ ಆಮದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಭಾರತ ಸರ್ಕಾರ ನಿಷೇಧಿಸಿದೆ.

ಪಾಕ್ ಹಡಗುಗಳಿಗೆ ನಿಷೇಧ: ಇದೀಗ ಭಾರತದ ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯವು ಇಂದಿನಿಂದ ಪಾಕಿಸ್ತಾನ ಧ್ವಜ ಹೊಂದಿರುವ ಹಡಗುಗಳು ಭಾರತೀಯ ಬಂದರುಗಳಿಗೆ ಪ್ರವೇಶಿಸುವುದನ್ನು ನಿಷೇಧಿಸಿದೆ. ಬಂದರುಗಳು, ಹಡಗು ಮತ್ತು ಜಲ ಮಾರ್ಗಗಳ ಸಚಿವಾಲಯದ ಆದೇಶದಂತೆ, ಪಾಕಿಸ್ತಾನದ ಧ್ವಜವನ್ನು ಹೊಂದಿರುವ ಹಡಗುಗಳು ಯಾವುದೇ ಭಾರತೀಯ ಬಂದರಿಗೆ ಭೇಟಿ ನೀಡಲು ಅನುಮತಿ ಇಲ್ಲ. ಹಾಗೇ, ಭಾರತೀಯ ಧ್ವಜ ಹಡಗು ಪಾಕಿಸ್ತಾನದ ಯಾವುದೇ ಬಂದರುಗಳಿಗೆ ಭೇಟಿ ನೀಡಬಾರದು ಎಂದು ಸೂಚಿಸಲಾಗಿದೆ


ಪಾಕ್‌ನಿಂದ ಆಮದಾಗುವ ಎಲ್ಲಾ ವಸ್ತುಗಳಿಗೆ ನಿರ್ಬಂಧ: ಪಾಕಿಸ್ತಾನದ ಎಲ್ಲಾ ರೀತಿಯ ವಸ್ತುಗಳ ಆಮದಿಗೆ ಭಾರತ ನಿರ್ಬಂಧ ವಿಧಿಸಿದೆ. ಭಾರತದ ಈ ನಿರ್ಧಾರದಿಂದ ಪಾಕ್ ಮತ್ತಷ್ಟು ಆರ್ಥಿಕ ಸಮಸ್ಯೆಗೆ ಒಳಗಾದರೆ, ಭಾರತದಲ್ಲಿ ಹಲವು ವಸ್ತುಗಳ ಬೆಲೆ ಏರಿಕೆಯಾಗುವ ಸಾಧ್ಯತೆಗಳಿವೆ. ಪಾಕಿಸ್ತಾನದಿಂದ ಭಾರತ ಕೃಷಿ ಉತ್ಪನ್ನಗಳಾದ ಡ್ರೈಫ್ರೂಟ್ಸ್ (ಅಂಜೂರ, ದ್ರಾಕ್ಷಿ, ಬಾದಾಮಿ), ತಾಜಾ ಹಣ್ಣುಗಳು (ಡೇಟ್ಸ್), ಮತ್ತು ಕೆಲವು ಧಾನ್ಯಗಳನ್ನು ಮತ್ತು ಕಲ್ಲು ಉಪ್ಪು, ಸುಣ್ಣದ ಕಲ್ಲು, ಸಿಮೆಂಟ್ ಕಲ್ಲಿನಂತಹ ಖನಿಜ ಉತ್ಪನ್ನಗಳನ್ನು ಹಾಗೂ ಚರ್ಮದ ವಸ್ತುಗಳು, ಹತ್ತಿ, ಉಕ್ಕಿನ ಉತ್ಪನ್ನಗಳಂತಹ ಕೈಗಾರಿಕಾ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಇದರ ಜೊತೆಗೆ ಪಾಕ್‌ನಿಂದ ಆಪ್ಟಿಕಲ್ ಲೆನ್ಸ್‌ಗಳು, ಕೆಲವು ಮಸಾಲೆ ಪದಾರ್ಥಗಳು ಭಾರತಕ್ಕೆ ಬರುತ್ತಿತ್ತು.

ಭಾರತದ ನಿರ್ಧಾರದಿಂದ ಪಾಕಿಸ್ತಾನದ ಮೇಲೆ ಹೆಚ್ಚು ಪರಿಣಾಮ ಬೀರಲಿದೆ. ಪಾಕಿಸ್ತಾನದ ರಫ್ತು ಆದಾಯದ ಗಣನೀಯ ಭಾಗವು ಭಾರತಕ್ಕೆ ಸಂಬಂಧಿಸಿದೆ. ಈ ಆಮದುಗಳನ್ನು ತಡೆಯುವುದರಿಂದ ಪಾಕಿಸ್ತಾನದ ಆರ್ಥಿಕತೆಗೆ ದೊಡ್ಡ ಹೊಡೆತವಾಗುತ್ತದೆ. ಭಾರತಕ್ಕೆ ರಫ್ತು ಕಡಿಮೆಯಾದರೆ, ಪಾಕಿಸ್ತಾನದ ವಿದೇಶಿ ವಿನಿಮಯ ಸಂಗ್ರಹ ಕಡಿಮೆಯಾಗುತ್ತದೆ. ಇದು ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನಕ್ಕೆ ಮತ್ತಷ್ಟು ತೊಂದರೆಯನ್ನುಂಟುಮಾಡುತ್ತದೆ.

ಪಾಕ್ ವಾಯುಪ್ರದೇಶ ಕೈಬಿಟ್ಟ ವಿದೇಶಿ ವಿಮಾನಗಳು: ಪಹಲ್ಗಾಮ್ ಘಟನೆ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಪಾಕಿಸ್ತಾನವು ತನ್ನ ವಾಯುಪ್ರದೇಶದಲ್ಲಿ ಭಾರತದ ವಿಮಾನಗಳಿಗೆ ನಿರ್ಬಂಧ ಹೇರಿದೆ. ಆದರೆ ವಿದೇಶಗಳ ಹಲವು ವಿಮಾನಗಳೂ ಸ್ವಯಂ ಪ್ರೇರಣೆಯಿಂದ ಪಾಕಿಸ್ತಾನ ವಾಯುಪ್ರದೇಶವನ್ನು ಕೈಬಿಟ್ಟಿವೆ. ಪಶ್ಚಿಮ ರಾಷ್ಟ್ರಗಳಿಗೆ ಪ್ರಯಾಣಿಸುವ ಭಾರತ ಮೂಲದ ವಿಮಾನಗಳು ಈಗ ಸುತ್ತಿಬಳಸಿ ಪ್ರಯಾಣಿಸುತ್ತಿವೆ. ಇದು ಹೆಚ್ಚು ಇಂಧನ ಮತ್ತು ಸಮಯ ತೆಗೆದುಕೊಳ್ಳುತ್ತಿದೆ. ಪಾಕಿಸ್ತಾನದ ಈ ನಿರ್ಬಂಧ ವಿದೇಶಿ ವಿಮಾನಗಳಿಗೆ ಅನ್ವಯಿಸದಿದ್ದರೂ, ಲುಫ್ತಾನ್ಸಾ ಏರ್‌ಲೈನ್ಸ್, ಬ್ರಿಟಿಷ್ ಏರ್‌ವೇಸ್, ಸ್ವಿಸ್ ಏರ್‌ವೇಸ್, ಏರ್ ಫ್ರಾನ್ಸ್, ಇಟಲಿಯ ಐಟಿಎ ಮತ್ತು ಪೋಲೆಂಡ್‌ನ ಎಲ್‌ಒಟಿ ವಿಮಾನಯಾನ ಸಂಸ್ಥೆಗಳೂ ಪಾಕಿಸ್ತಾನದ ವಾಯುಪ್ರದೇಶವನ್ನು ಕೈಬಿಟ್ಟಿವೆ. ಇದರಿಂದಾಗಿ ತನ್ನ ವಾಯುಪ್ರದೇಶ ಬಳಕೆಗೆ ಲಭಿಸುತ್ತಿದ್ದ ರಾಯ ಧನವನ್ನು ಪಾಕಿಸ್ತಾನ ಕಳೆದುಕೊಂಡಿದೆ. ಮತ್ತೊಂದೆಡೆ ಪರ್ಯಾಯ ಮಾರ್ಗದಲ್ಲಿ ಭಾರತೀಯ ವಿಮಾನಗಳು ಸಾಗಬೇಕಿರುವುದರಿಂದ ಹಾರಾಟ ವೆಚ್ಚ ಹೆಚ್ಚಳವಾಗಿ ನಷ್ಟ ಅನುಭವಿಸುತ್ತಿದೆ.

ಜೂನ್ ಅಂತ್ಯಕ್ಕೆ ಕಂದಾಯ ಗ್ರಾಮಗಳಿಗೆ ಅಧಿಸೂಚನೆ: ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು, ಮೇ.3– ಜೂನ್ ತಿಂಗಳ ಅಂತ್ಯದೊಳಗೆ ರಾಜ್ಯದ ಎಲ್ಲ 3,614 ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಿ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.



ಜಿಲ್ಲಾಧಿಕಾರಿಗಳ ಜತೆಗೆ ಶನಿವಾರ ವಿಡಿಯೊ ಸಂವಾದ ನಡೆಸಿದ ಅವರು, ಮೂಲ ಸೌಕರ್ಯಗಳಿಂದ ವಂಚಿತರಾಗಿರುವ ಕಡುಬಡವರಿಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂಬ ಉದ್ದೇಶದಿಂದಲೇ ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸುವ ನೀತಿಯನ್ನು 2017ರಲ್ಲಿ ರೂಪಿಸಲಾಗಿತ್ತು. ಆದರೆ, ಹಲವು ವರ್ಷಗಳ ನಂತರವೂ ಈ ಕೆಲಸ ಪೂರ್ಣವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ 3,614 ಕಂದಾಯ ಗ್ರಾಮಗಳು ಇದ್ದು, ಹಿಂದಿನ ಸರ್ಕಾರದ ಅವಧಿಯಲ್ಲಿ ಅಧಿಸೂಚನೆ ಹೊರಡಿಸಿ 1,400 ಗ್ರಾಮಗಳನ್ನು ರಚಿಸಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ 1,200 ಗ್ರಾಮಗಳನ್ನು ರಚಿಸಲಾಗಿದೆ. ಅಂತಿಮ ಅಧಿಸೂಚನೆ ಆಗದ 1,014 ಗ್ರಾಮಗಳಿವೆ ಈ ಕೆಲಸವನ್ನು ಶೀಘ್ರ ಮುಗಿಸಬೇಕು ಎಂದರು.

ಜುಲೈನಿಂದ ಜನಗಣತಿ ಆರಂಭವಾಗುವ ಸಾಧ್ಯತೆ ಇದೆ. ಹಾಗೆ ಆದರೆ, ಆನಂತರ ಅಧಿಸೂಚನೆ ಹೊರಡಿಸಲು ಆಗುವುದಿಲ್ಲ. ಹೀಗಾಗಿ ಜೂನ್ ಅಂತ್ಯದೊಳಗೇ ಎಲ್ಲ ಗ್ರಾಮಗಳಿಗೂ ಅಧಿಸೂಚನೆ ಹೊರಡಿಸಿ, ಜುಲೈ ನಂತರ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಬೇಕು ಎಂದು ಸೂಚಿಸಿದರು. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತ ಸುನೀಲ್ ಕುಮಾರ್ ಮತ್ತು ಭೂ ಮಾಪನಾ ಇಲಾಖೆ ಆಯುಕ್ತ ಮಂಜುನಾಥ್ ಸಭೆಯಲ್ಲಿ ಉಪಸ್ಥಿತರಿದ್ದರು.

ಚರಿತ್‌ಗೌಡಗೆ ಕಂಚಿನ ಪದಕ



ಚೀನಾದಲ್ಲಿ ನಡೆದ ಏಷಿಯನ್ MTB ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಚರಿತ್‌ಗೌಡ ಭಾಗವಹಿಸಿ ಮಿಕ್ಸ್ ಟೀಂ ರಿಲೆಯಲ್ಲಿ ಭಾರತಕ್ಕೆ ಕಂಚಿನ ಪದಕ ತಂದು ಕೊಟ್ಟಿದ್ದಾರೆ. ಇವರು ಸೇಫಿಯಂಟ್ ಕಾಲೇಜಿನಲ್ಲಿ ಬಿ.ಬಿ.ಎ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿಜಯನಗರ 2ನೇ ಹಂತದ ನಿವಾಸಿ ಡಿ.ಕೆ.ಚಂದ್ರು ಮತ್ತು ಪ್ರತಿಭಾ ಎಂ.ಆರ್ ಅವರ ಪುತ್ರ.

ಪಹಲ್ಗಾಮ್ ದಾಳಿಯ ಉಗ್ರರು ಶ್ರೀಲಂಕಾಗೆ ಪಲಾಯನ?: ಕೊಲಂಬೊ ವಿಮಾನ ನಿಲ್ದಾಣದಲ್ಲಿ ತಪಾಸಣೆ

ನವದೆಹಲಿ, ಮೇ.3– ಪಹಲ್ಗಾಮ್‌ನಲ್ಲಿ ಹಿಂದೂಗಳ ಮಾರಣಹೋಮ ನಡೆಸಿದ್ದ ಉಗ್ರರು ಇದೀಗ ಚೆನ್ನೈ ಮೂಲಕ ಶ್ರೀಲಂಕಾಕ್ಕೆ ಪಲಾಯನ ಮಾಡಿದ್ದಾರೆ ಎಂದು ವರದಿಯಾಗಿದೆ.

ಮೇ 3ರಂದು ಚೆನ್ನೈನಿಂದ ಆಗಮಿಸಿದ ಶ್ರೀಲಂಕಾದ ಏರ್‌ಲೈನ್ಸ್ ವಿಮಾನವು ಬಂಡಾರನಾಯಕೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಬಿಐಎ) ವಿಶೇಷ ಭದ್ರತಾ ಕಾರ್ಯಾಚರಣೆಯನ್ನು ಎದುರಿಸಿತು. ಇತ್ತೀಚಿನ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಸಂಭಾವ್ಯ ಶಂಕಿತರ ಬಗ್ಗೆ ಭಾರತೀಯ ಅಧಿಕಾರಿಗಳು ಎಚ್ಚರಿಕೆ ನೀಡಿದ್ದರು. ಭಾರತದಿಂದ ಎಚ್ಚರಿಕೆ ಬಂದಿದೆ ಎಂದು ಪೊಲೀಸ್ ಮಾಧ್ಯಮ ವಕ್ತಾರರು ದೃಢಪಡಿಸಿದರು. ಅದರ ನಂತರ ಶ್ರೀಲಂಕಾದ ಭದ್ರತಾ ಪಡೆಗಳು ವಿಮಾನ ಇಳಿದ ತಕ್ಷಣ ಅದನ್ನು ಶೋಧಿಸಿದವು.

UL 122 ವಿಮಾನವು ಬೆಳಿಗ್ಗೆ 11.59ಕ್ಕೆ ಕೊಲಂಬೊದಲ್ಲಿ ಲ್ಯಾಂಡ್ ಆಯಿತು. ಸ್ಥಳೀಯ ಅಧಿಕಾರಿಗಳು ಸಮಗ್ರ ಪರಿಶೀಲನೆ ನಡೆಸಿದರು ಎಂದು ಶ್ರೀಲಂಕಾ ಏರ್‌ಲೈನ್ಸ್ ಹೇಳಿಕೆಯಲ್ಲಿ ತಿಳಿಸಿದೆ. ವಿಮಾನದಲ್ಲಿ ಶಂಕಿತ ವ್ಯಕ್ತಿ ಇರುವ ಸಾಧ್ಯತೆ ಇದೆ ಎಂದು ಚೆನ್ನೈ ಪ್ರದೇಶ ನಿಯಂತ್ರಣ ಕೇಂದ್ರವು ಎಚ್ಚರಿಕೆ ನೀಡಿತ್ತು. ತನಿಖೆಯ ನಂತರ ವಿಮಾನವನ್ನು ಪರಿಶೀಲಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ದೃಢಪಡಿಸಿತು. ಆದರೆ ಭದ್ರತಾ ಕಾರ್ಯವಿಧಾನಗಳಿಂದಾಗಿ ಸಿಂಗಾಪುರಕ್ಕೆ ಮುಂದಿನ ವಿಮಾನ UL 308 ವಿಳಂಬವಾಯಿತು. ಶ್ರೀಲಂಕನ್ ಏರ್‌ಲೈನ್ಸ್ ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸದಸ್ಯರ ಸುರಕ್ಷತೆಗೆ ಆದ್ಯತೆ ನೀಡುತ್ತದೆ. ಅತ್ಯುನ್ನತ ಸುರಕ್ಷತಾ ಮಾನದಂಡಗಳನ್ನು ಕಾಯ್ದುಕೊಳ್ಳಲು ಬದ್ಧವಾಗಿದೆ ಎಂದು ಹೇಳಿಕೆ ತಿಳಿಸಿದೆ.

ಇಂದು ಮೈಸೂರಿನ 19 ಕೇಂದ್ರಗಳಲ್ಲಿ ನೀಟ್



ಮೈಸೂರು, ಮೇ 3(ಆರ್‌ಕೆ)– ನಾಳೆ (ಮೇ 4) ಮೈಸೂರಿನ 19 ಕೇಂದ್ರಗಳಲ್ಲಿ ನೀಟ್ (ನ್ಯಾಷನಲ್ ಎಲಿಜಿಬಿಲಿಟಿ ಕಂ ಎಂಟ್ರೆನ್ಸ್ ಟೆಸ್ಟ್) ನಡೆಯಲಿದೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ಎನ್‌ಟಿಎ ನಡೆಸಲಿರುವ ಪರೀಕ್ಷೆಗಳು ಮೈಸೂರಿನ ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾನಸ ಗಂಗೋತ್ರಿಯ ಆಯಿಷ್ ಎದುರಿನ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಜಾಕಿ ಕ್ವಾರ್ಟರ್ಸ್‌ನ ಸರ್ಕಾರಿ ಆದರ್ಶ ವಿದ್ಯಾಲಯ, ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೆಎಲ್‌ಬಿ ರಸ್ತೆಯ ಮಹಿಳಾ ಕಲಾ ಕಾಲೇಜು, ನಾರಾಯಣಶಾಸ್ತ್ರಿ ರಸ್ತೆಯ ಮಹಾರಾಣಿ ಪದವಿ ಪೂರ್ವ ಕಾಲೇಜು, ಅಶೋಕ ರಸ್ತೆಯ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು, ಸಿದ್ಧಾರ್ಥನಗರದ ಕೇಂದ್ರೀಯ ವಿದ್ಯಾಲಯ, ದೇವರಾಜ ಬಾಲಕಿಯರ ಪದವಿ ಪೂರ್ವ ಕಾಲೇಜು, ಲಕ್ಷ್ಮೀಪುರಂನ ಮಹಾರಾಜ ಪಿಯು ಕಾಲೇಜು, ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮುಕ್ತ ವಿಶ್ವವಿದ್ಯಾನಿಲಯದ ಎ ಮತ್ತು ಬಿ ಬ್ಲಾಕ್, ಪಡುವಾರಹಳ್ಳಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು, ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜು ಕೇಂದ್ರಗಳಲ್ಲಿ ನಡೆಯಲಿವೆ.

ನೀಟ್‌ಗೆ ಕೇಂದ್ರೀಯ ವಿದ್ಯಾಲಯವು ಸಿದ್ಧತೆ ಮಾಡಿದ್ದು, ಇಂದು ಕೇಂದ್ರಗಳ ಕೊಠಡಿಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸಿ, ಸಮರ್ಪಕ ಆಸನ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಕೇಂದ್ರದ ಸುತ್ತಲಿನ 200 ಮೀ. ವ್ಯಾಪ್ತಿಯಲ್ಲಿ ಭಾನುವಾರ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 163 ರೀತ್ಯಾ ನಿಷೇಧಾಜ್ಞೆ ವಿಧಿಸಲಾಗಿದೆ.

ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಅಳವಡಿಸಿದ ರಸ್ತೆಯಲ್ಲಿ ಹಳ್ಳ; ಕಳಪೆ ತೇಪೆಯಿಂದ ಸರಣಿ ಅಪಘಾತ

ಮೈಸೂರು, ಮೇ 3(ಬಿಎಲ್‌ಯು)– ಮೈಸೂರು ನಗರದಲ್ಲಿ ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ರಸ್ತೆ ಅಗೆಯಲಾಗಿದ್ದು, ಅದನ್ನು ಸರಿಯಾಗಿ ಮುಚ್ಚದ ಹಿನ್ನೆಲೆಯಲ್ಲಿ ಪೈಪ್‌ಲೈನ್ ಮಾರ್ಗದಲ್ಲಿ ಹಳ್ಳ ಬಿದ್ದಿದೆ. ಬಾಯ್ತೆರೆದಿರುವ ಇಂತಹ ಹಳ್ಳಗಳಿಂದ ಸರಣಿ ಅಪಘಾತಗಳಾಗುತ್ತಿವೆ.

ಮೈಸೂರು ನಗರದ ಮಾನಂದವಾಡಿ ರಸ್ತೆ, ಜೆಎಲ್‌ಬಿ ರಸ್ತೆಯಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಿರುವ ಮಾರ್ಗದಲ್ಲಿ ಸಾಕಷ್ಟು ಹಳ್ಳಗಳಾಗಿವೆ. ಗ್ಯಾಸ್ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ಎಜಿ ಅಂಡ್ ಪ್ರಥಮ್ ಕಂಪನಿಗೆ ಅನುಮತಿ ನೀಡಿರುವ ನಗರಪಾಲಿಕೆ ಅಧಿಕಾರಿಗಳು ಇತ್ತ ತಿರುಗಿಯೂ ನೋಡಿಲ್ಲ.

ರಸ್ತೆಯಲ್ಲಿ 4 ಅಡಿ ಹಳ್ಳ ತೆಗೆದು ಗ್ಯಾಸ್ ಪೈಪ್‌ಲೈನ್ ಅಳವಡಿಸಲಾಗಿದೆ. ಆದರೆ ಹಳ್ಳ ಮುಚ್ಚಿ ಸರಿಯಾದ ರೀತಿಯಲ್ಲಿ ಡಾಂಬರ್ ಹಾಕದ ಕಾರಣ ರಸ್ತೆ ಉದ್ದಕ್ಕೂ ಅಲ್ಲಲ್ಲಿ ಹಳ್ಳ ಬಿದ್ದಿದೆ.



ಗ್ಯಾಸ್ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ರಸ್ತೆ ಅಗೆದು, ಮುಚ್ಚದಿರುವುದು.

ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಈ ಮೊದಲು ಪಾಲಿಕೆ ಒಂದು ಮೀಟರ್‌ಗೆ 1,957 ರೂಪಾಯಿ ನಿಗದಿ ಮಾಡಿತ್ತು. ಆದರೆ ತರುವಾಯ ಎಜಿ ಅಂಡ್ ಪ್ರಥಮ್ ಕಂಪನಿ ಹಾಗೂ ಪಾಲಿಕೆ ನಡುವೆ ಆದ ಮತ್ತೊಂದು ಒಪ್ಪಂದದಿಂದ ಒಂದು ಮೀಟರ್ ಕೇವಲ 1 ರೂಪಾಯಿ ನಿಗದಿ ಮಾಡಲಾಯಿತು. ಇದರಲ್ಲಿ ನೂರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಆರೋಪಿಸಿದ್ದರು.

ಒಂದು ಮೀಟರ್‌ಗೆ ಮೊದಲಿದ್ದ 1,957 ರೂಪಾಯಿ ಬದಲು ಈಗ 1 ರೂಪಾಯಿ ದರ ನಿಗದಿ ಮಾಡಿರುವುದರಿಂದ ಎಜೆ ಅಂಡ್ ಪ್ರಥಮ್ ಕಂಪನಿಗೆ ಭಾರಿ ಲಾಭವಾಗಿದೆ.

ಇಷ್ಟು ಲಾಭ ಪಡೆದರೂ ಕಂಪನಿ ಗ್ಯಾಸ್ ಪೈಪ್‌ಲೈನ್ ಅಳವಡಿಸಿದ ನಂತರ ಸರಿಯಾಗಿ ರಸ್ತೆ ಸರಿ ಮಾಡಿಲ್ಲ. ಹಳ್ಳಕ್ಕೆ ಸರಿಯಾಗಿ ಮಣ್ಣು ಸುರಿದು ಸಮತಟ್ಟು ಮಾಡಿದ ನಂತರ ಮತ್ತೊಮ್ಮೆ ದಪ್ಪ ಜಲ್ಲಿಕಲ್ಲು ಹಾಕಿ ಡಾಂಬರ್ ಹಾಕಬೇಕಿತ್ತು. ಆದರೆ ಹಳ್ಳಕ್ಕೆ ಸರಿಯಾಗಿ ಮಣ್ಣು ಸುರಿದು ಸಮತಟ್ಟುಗೊಳಿಸಿದ ನಂತರ ಡಾಂಬರೀಕರಣ ಮಾಡದ ಹಿನ್ನೆಲೆಯಲ್ಲಿ ಈಗ ಗ್ಯಾಸ್ ಪೈಪ್‌ಲೈನ್ ಮಾರ್ಗದಲ್ಲಿ ಹಳ್ಳ ಬಿದ್ದಿದೆ.

ಹಳ್ಳ ಬಿದ್ದ ರಸ್ತೆಯಲ್ಲಿ ಸರಣಿ ಅಪಘಾತಗಳಾಗಿ ಕೆಲವರು ಆಸ್ಪತ್ರೆ ಸೇರಿದ್ದಾರೆ. ಇಷ್ಟಾದರೂ ಪಾಲಿಕೆ ಅಧಿಕಾರಿಗಳು ಹಳ್ಳ ಬಿದ್ದ ರಸ್ತೆಗೆ ಮುಕ್ತಿ ಕಾಣಿಸಿಲ್ಲ. ಮತ್ತೊಮ್ಮೆ ಸರಿಯಾದ ರೀತಿಯಲ್ಲಿ ಹಳ್ಳ ಮುಚ್ಚುವಂತೆ ಕಂಪನಿಗೆ ಸೂಚನೆ ನೀಡಿಲ್ಲ.

ಗನ್ ತೋರಿಸಿ 60 ಲಕ್ಷ ರೂ. ದೋಚಿದ ಕಳ್ಳರು; 400 ಕಿ.ಮೀ. ಬೆನ್ನಟ್ಟಿ ಸೆರೆ

ನವದೆಹಲಿ: ಗನ್ ತೋರಿಸಿ 60 ಲಕ್ಷ ರೂ. ದೋಚಿದ ಆರೋಪದ ಮೇಲೆ ದೆಹಲಿ ವಿವಿಯ ಪದವೀಧರ ಸೇರಿದಂತೆ ಇಬ್ಬರನ್ನು ಹರಿಯಾಣದ ಪಾಣಿಪತ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯ ದೆಹಲಿಯ ಹೌಜ್ ಖಾಜಿ ಪ್ರದೇಶದಲ್ಲಿ ಗನ್ ತೋರಿಸಿ ಉದ್ಯೋಗಿಯಿಂದ 60 ಲಕ್ಷ ರೂ.ಗಳನ್ನು ದೋಚಿ ಪರಾರಿಯಾಗಿದ್ದ ದರೋಡೆಕೋರರನ್ನು ಪೊಲೀಸರು ಸುಮಾರು 400 ಕಿ.ಮೀ. ದೂರದವರೆಗೆ ಬೆನ್ನಟ್ಟಿ ಬಂಧಿಸಿದ್ದಾರೆ. ಬಂಧಿತರನ್ನು ಅಮಿತ್ (34) ಮತ್ತು ರವಿ ಗುಪ್ತಾ (40) ಎಂದು ಗುರುತಿಸಲಾಗಿದೆ. ಆರೋಪಿಗಳಲ್ಲಿ ಒಬ್ಬ ದೆಹಲಿ ವಿವಿ ವಿದ್ಯಾರ್ಥಿಯಾಗಿದ್ದು, ಮತ್ತೊಬ್ಬ ಬಹುರಾಷ್ಟ್ರೀಯ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಮಾಜಿ ಉದ್ಯೋಗಿ ಎಂದು ತಿಳಿಸಿದ್ದಾರೆ. ದೂರಿನ ಪ್ರಕಾರ, ಉದ್ಯಮಿ ಯೊಬ್ಬರ ಬಳಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಸೋಮವಾರ ತನ್ನ ಸ್ಕೂಟರ್‌ನಿಂದ ನಗದು ತುಂಬಿದ ಬ್ಯಾಗ್ ಅನ್ನು ಹೊರ ತೆಗೆಯುತ್ತಿದ್ದಾಗ ದರೋಡೆಕೋರರು ಆತನಿಗೆ ಗನ್ ತೋರಿಸಿ ಬ್ಯಾಗ್ ಕದ್ದಿದ್ದಾರೆ.

ಆಚಾರ್ಯತ್ರಯರ ಜಯಂತಿ ಆಚರಣೆ



ಮೈಸೂರಿನ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರದಲ್ಲಿ ಶಂಕರ ರಾಮಾನುಜರ ಜಯಂತಿ ಪ್ರಯುಕ್ತ ಆಚಾರ್ಯತ್ರಯರ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 3– ಮೈಸೂರಿನ ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರದಲ್ಲಿ ಶಂಕರ ರಾಮಾನುಜರ ಜಯಂತಿ ಪ್ರಯುಕ್ತ ಆಚಾರ್ಯತ್ರಯರ ಜಯಂತಿ ಆಚರಿಸಲಾಯಿತು.

ಆಚಾರ್ಯತ್ರಯರ ಭಾವಚಿತ್ರಕ್ಕೆ ಕರ್ನೂಲು ಜಿಲ್ಲೆಯ ಶ್ರೀ ಶಾರದ ದತ್ತ ಪೀಠ ಶ್ರೀ ಶಂಕರಾನಂದ ಮಹಾ ಸಂಸ್ಥಾನಂ ಪೀಠಾಧಿಪತಿಗಳಾದ ಶ್ರೀ ವಿದ್ಯಾಭಿನವ ಸುಬ್ರಹ್ಮಣ್ಯ ಭಾರತಿ ಸ್ವಾಮಿಗಳು ಪುಷ್ಪ ನಮನ ಸಲ್ಲಿಸಿ, ಚಾಲನೆ ನೀಡಿದರು

ಶ್ರೀ ವಿದ್ಯಾಭಿನವ ಸುಬ್ರಹ್ಮಣ್ಯ ಭಾರತಿ ಸ್ವಾಮಿಗಳು ಮಾತನಾಡಿ, ಬ್ರಹ್ಮತೇಜಸ್ಸು ಜ್ಞಾನವನ್ನು ಪಡೆಯಬೇಕಾದರೆ ವಿಪ್ರರು ಜನಿವಾರಧಾರಣೆ ಮಾಡಿ ಧರ್ಮ ಜಾಗೃತಿಗಾಗಿ ದ್ವಿಜರಾಗುತ್ತಾರೆ. ಉಪನಯನವಾದ ಬಳಿಕ ವೇದ ಉಪನಿಷತ್ ಶಾಸ್ತ್ರ ಧರ್ಮರಕ್ಷಣೆಗಾಗಿ ತ್ರಿಕಾಲ ಗಾಯತ್ರಿ ಜಪ ಅನುಷ್ಠಾನ ಮಾಡುವಲ್ಲಿ ಸಫಲರಾಗಬೇಕು. ತಪಸ್ಸು ಪ್ರಾರ್ಥನೆಯಾಗಿ ಸಂಕಲ್ಪವು ಧ್ಯಾನವಾದರೆ ಮನುಷ್ಯನ ಏಕಾಗ್ರತೆ ಮನಸ್ಸಿನ ನಿಯಂತ್ರಣವಾಗಿ ಸನ್ಮಾರ್ಗದ ಸಾಧನೆಯತ್ತ ಗುರಿ ಸಾಧಿಸಬಹುದು. ಶಾಲಾ ಕಾಲೇಜಿನಲ್ಲಿ ಉತ್ತೀರ್ಣರಾಗುವ ಹಾಗೇ ಯುವಪೀಳಿಗೆ ಸಮಾಜದಲ್ಲೂ ಉತ್ತಮ ನಡೆನುಡಿ ಸಂಸ್ಕಾರದಿಂದ ಸಮಾಜದ ಆಸ್ತಿಯಾಗಿ ನಿರ್ಮಾಣವಾಗಬೇಕು ಎಂದರು.

ಶ್ರೀರಾಮಮಂದಿರ ಕಾರ್ಯದರ್ಶಿ ಮಾಧುರಾವ್, ಶೇಷಾದ್ರಿ, ಶ್ರೀನಿವಾಸನ್, ಹರಿಹರಪುರ ಮಠದ ವ್ಯವಸ್ಥಾಪಕ ಶ್ರೀನಿವಾಸ್, ವೆಂಕಟೇಶಯ್ಯ, ಅರ್ಚಕ ಸಂತೋಷ್, ನಿರೂಪಕ ಅಜಯ್‌ಶಾಸ್ತ್ರಿ, ಅಗಸ್ತ್ಯ ಸೊಸೈಟಿ ನಿರ್ದೇಶಕ ವಿಕ್ರಂ ಅಯ್ಯಂಗಾರ್, ಬಿಜೆಪಿ ಮುಖಂಡ ಕೆ.ಎಂ.ನಿಶಾಂತ್, ಕೇಶವಪ್ರಸಾದ್, ಮಿರ್ಲೆ ಪಣೀಶ್ ಇನ್ನಿತರರು ಉಪಸ್ಥಿತರಿದ್ದರು.

ನಾನು ಯುದ್ಧಕ್ಕೆ ಸಿದ್ಧ!



ಬೆಂಗಳೂರು: ನಾವು ಭಾರತೀಯರು, ಹಿಂದೂಸ್ತಾನಿಗಳು. ಪಾಕಿಸ್ತಾನ ಎಂದಿಗೂ ನಮ್ಮ ಶತ್ರು. ಪ್ರಧಾನಮಂತ್ರಿ ನರೇಂದ್ರ, ಸಚಿವ ಅಮಿತ್ ಶಾ ಹಾಗೂ ಕೇಂದ್ರ ಸರ್ಕಾರ ಅವಕಾಶ ಕೊಟ್ಟಿದ್ದೇ ಆದರೆ, ಪಾಕಿಸ್ತಾನದ ವಿರುದ್ಧ ಯುದ್ಧಕ್ಕೆ ಹೋಗಲು ಸಿದ್ಧನಿದ್ದೇನೆಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಭಾರತೀಯರು, ನಾವು ಹಿಂದೂಸ್ತಾನಿಗಳು. ನಮಗೂ ಪಾಕಿಸ್ತಾನಕ್ಕೂ ಯಾವ ಸಂಬಂಧಾನೂ ಇಲ್ಲ. ಯುದ್ಧ ಮಾಡಬೇಕು ಎಂದರೆ ನಾನು ರೆಡಿ. ಮಂತ್ರಿಯಾಗಿ ನನ್ನನ್ನು ಕಳುಹಿಸುತ್ತಾರೆ ಎಂದರೆ ನಾನು ಸಿದ್ಧ. ಯುದ್ಧಕ್ಕೆ ನಾನು ಹೋಗುತ್ತೇನೆ. ದೇಶಕ್ಕಾಗಿ ಯುದ್ಧ ಮಾಡಲು ನಾನು ರೆಡಿ.. ನಡೀರಿ ಹೋಗಿ ಬಿಡೋಣ ಎಂದರು. ಈ ದೇಶಕ್ಕೋಸ್ಕರ ನಾನು ಯುದ್ಧಕ್ಕೆ ಹೋಗುತ್ತೇನೆ. ನಾನು ತಮಾಷೆಗೆ, ಜೋಶ್‌ನಲ್ಲಿ ಹೇಳುತ್ತಿಲ್ಲ. ಈ ದೇಶಕ್ಕೋಸ್ಕರ ಹೋಗುತ್ತೇನೆ. ನರೇಂದ್ರ ಮೋದಿ, ಅಮಿತ್ ಶಾ ಅವರು ಶಸ್ತ್ರಾಸ್ತ್ರವನ್ನು ನನ್ನ ಕೈಗೆ ಕೊಡಲಿ. ಅಲ್ಲಾ ಮೇಲೆ ಆಣೆ, ಶಸ್ತ್ರಾಸ್ತ್ರವನ್ನು ಬೆನ್ನಲ್ಲಿ ಕಟ್ಟಿಕೊಂಡು ಪಾಕಿಸ್ತಾನದ ವಿರುದ್ಧ ಯುದ್ಧ ಮಾಡಲು ಹೋಗುತ್ತೇನೆಂದು ಎದೆ ತಟ್ಟಿ ತಟ್ಟಿ ಹೇಳಿದರು. ಇದಕ್ಕೆ ವ್ಯಂಗ್ಯವಾಡಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಏನೂ ಮಾಡುವುದು ಬೇಡ. ಸದ್ಯಕ್ಕೆ ಸುಮ್ಮನಿದ್ದರೆ ಸಾಕು ಎಂದರೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಯಕ್ಷಗಾನದಲ್ಲಿ ಬರುವ ಹಾಸ್ಯಗಾರರಿಗಿಂತ ಇದು ಹಾಸ್ಯವಾಗಿದೆ ಎಂದು ಮೂದಲಿಸಿದ್ದಾರೆ.

ಸಂಚಾರ ನಿಯಮದ ಅರಿವಿನ ಕೊರತೆ

ಮೈಸೂರಿನ ಜೆಎಲ್‌ಬಿ ರಸ್ತೆ, ಮಾನಂದವಾಡಿ ರಸ್ತೆ ಜಂಕ್ಷನ್‌ನಲ್ಲಿ ಪ್ರತಿದಿನ ಟ್ರಾಫಿಕ್ ಜಾಮ್



ಮೈಸೂರಿನ ಜೆಎಲ್‌ಬಿ ರಸ್ತೆ ಹಾಗೂ ಮಾನಂದವಾಡಿ ರಸ್ತೆಯ ಜಂಕ್ಷನ್‌ನಲ್ಲಿ ಟ್ರಾಫಿಕ್ ಜಾಮ್ ಆಗಿರುವುದು.

ಮೈಸೂರು, ಮೇ.3(ಬಿಎಲ್‌ಯು)– ಸಂಚಾರ ನಿಯಮ ಪಾಲಿಸದೆ ನಾ ಮುಂದು ತಾ ಮುಂದು ಎಂದು ವಾಹನ ಸವಾರರು ಪೈಪೋಟಿ ನಡೆಸುವ ಕಾರಣ ಮೈಸೂರಿನ ಜೆಎಲ್‌ಬಿ ರಸ್ತೆ ಹಾಗೂ ಮಾನಂದವಾಡಿ ರಸ್ತೆಯ ಜಂಕ್ಷನ್‌ನಲ್ಲಿ ಪ್ರತಿ ದಿನ ಟ್ರಾಫಿಕ್ ಜಾಮ್ ಆಗುತ್ತಿದೆ.

ಜೆಎಲ್‌ಬಿ ರಸ್ತೆ ಹಾಗೂ ಮಾನಂದವಾಡಿ ರಸ್ತೆಯ ಜಂಕ್ಷನ್, ಐದು ರಸ್ತೆ ಕೂಡುವ ಫೈವ್‌ಲೈಟ್ ಸರ್ಕಲ್ ಹೆಸರಿನಿಂದ ಕೂಡ ಕರೆಯುತ್ತಾರೆ.

ನಂಜುಮಳಿಗೆ, ಲಕ್ಷ್ಮೀಪುರಂ, ಜೆಎಲ್‌ಬಿ ರಸ್ತೆ, ಮಾನಂದವಾಡಿ ರಸ್ತೆ, ಚಾಮುಂಡಿಪುರಂ, ಮೇದರ ಗೇರಿ ರಸ್ತೆಯಿಂದ ವಾಹನ ಸವಾರರು ಇಲ್ಲಿಂದ ಹಾದು ಹೋಗುತ್ತಾರೆ. ಐದು ರಸ್ತೆಯ ವಾಹನ ಸವಾರರು ಮುಂದೆ ಸಾಗಲು ಪೈಪೋಟಿ ನಡೆಸುತ್ತಾರೆ. ಇದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ.

ಸಂಚಾರ ನಿಯಮ ಪಾಲಿಸಿ ಒಬ್ಬರಾದ ಮೇಲೆ ಒಬ್ಬರು ಸಾಗಿದರೆ ಪ್ರಾಯಶಃ ಟ್ರಾಫಿಕ್ ಜಾಮ್ ಆಗುವುದಿಲ್ಲ. ಆದರೆ ಪ್ರತಿಯೊಬ್ಬ ಕಾರು, ಸ್ಕೂಟರ್, ಬೈಕ್ ಸವಾರರು ಮುಂದೆ ಹೋಗಲು ಪೈಪೋಟಿಗಿಳಿಯುತ್ತಾರೆ. ಇದರಿಂದ ಕೆಲವು ಕ್ಷಣದಲ್ಲಿ ಹೋಗಬೇಕಾದ ವಾಹನ ಸವಾರರು 15ರಿಂದ 20 ನಿಮಿಷ ನಿಂತಲ್ಲೇ ನಿಲ್ಲಬೇಕಾಗುತ್ತಿದೆ. ಟ್ರಾಫಿಕ್ ಜಾಮ್ ಆಗದಂತೆ ಪ್ರತಿ ಸರ್ಕಲ್‌ಗೂ ಪೊಲೀಸರು ಸಿಗ್ನಲ್ ಲೈಟ್ ಅಳವಡಿಸಲು ಸಾಧ್ಯವಿಲ್ಲ. ಆದರೆ ಸಂಚಾರ ನಿಯಮ ಪಾಲನೆ ಅರಿತರೆ ಸಂಚಾರ ದಟ್ಟಣೆಯಿಂದ ಮುಕ್ತರಾಗಬಹುದು. ಆದರೆ ಇದರ ಅರಿವು ಜನ ಸಾಮಾನ್ಯರಲ್ಲಿ ಇರಬೇಕಷ್ಟೆ.

ಮಹಿಳಾ ಪೌರಕಾರ್ಮಿಕರಿಗೆ ಅಭಿನಂದನೆ...



ಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ರಾಜೇಂದ್ರನಗರದ ಕಣಿಯರ ರಾಮಮಂದಿರದಲ್ಲಿ ಮಹಿಳಾ ಪೌರಕಾರ್ಮಿಕರಾದ ರಂಗಮ್ಮ, ಪಲ್ಲಮ್ಮ, ರಾಜಮ್ಮ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಮೋಹನ್‌ಕುಮಾರ್, ಕಾರ್ಯದರ್ಶಿ ಮುನ್ನಾ, ಸರ್ದಾರ್ ಮಹೇಶ್, ಭಾಸ್ಕರ್, ಸಹ ಕಾರ್ಯದರ್ಶಿ ಮೋಹನ್ ಸಿಂಗ್, ರಂಗಪ್ಪಗೌಡ, ನರಸಿಂಹ ಇನ್ನಿತರರಿದ್ದಾರೆ.

ಅಭಿನಂದನೆ...



ಎಸ್‌ಎಸ್‌ಎಲ್‌ಸಿ (ICSE) ಪರೀಕ್ಷೆಯಲ್ಲಿ ಶೇ.99.6% ಅಂಕಗಳನ್ನು ಪಡೆದ ಮೈಸೂರಿನ ಆಚಾರ್ಯ ವಿದ್ಯಾಕುಲದ ವಿದ್ಯಾರ್ಥಿನಿ ಹೇಮಾಮೃತ ಎಂ. ಅವರನ್ನು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅಭಿನಂದಿಸಿದರು. ಈಕೆ ಮೈಸೂರು ತಾಲೂಕಿನ ಇಲವಾಲದ ವಿನಾಯಕ ಗಾರ್ಡನ್ ಸಿಟಿ ನಿವಾಸಿ ಮಾದೇಗೌಡ, ಶ್ರೀಮತಿ ಉಮಾ ಮಾದೇಗೌಡರ ಪುತ್ರಿ.

ಮೈಸೂರು ವೈದ್ಯಕೀಯ ಕಾಲೇಜು ಹೊರಗುತ್ತಿಗೆ ನೌಕರರ ಪ್ರತಿಭಟನೆ ಅಂತ್ಯ



ಮೈಸೂರು,ಮೇ 3(ಪಿಎಂ)– ಗುತ್ತಿಗೆದಾರರು ವೇತನ ಬಾಕಿ ಉಳಿಸಿಕೊಂಡಿದ್ದಾರೆ ಎಂದು ಆರೋಪಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಆಸ್ಪತ್ರೆಗಳು, ಕಾಲೇಜು, ಹಾಸ್ಟೆಲ್‌ಗಳು ಹಾಗೂ ಸಂಸ್ಥೆ ವಿವಿಧ ವ್ಯವಸ್ಥೆಯಲ್ಲಿ ಹೊರಗುತ್ತಿಗೆಯಡಿ ಕೆಲಸ ಮಾಡುವ ಕಾರ್ಮಿಕರು, ಶುಕ್ರವಾರದಿಂದ ನಡೆಸುತ್ತಿದ್ದ ಮುಷ್ಕರ ಹಾಗೂ ಪ್ರತಿಭಟನೆಯನ್ನು ಶನಿವಾರ ಸಂಜೆ ಅಂತ್ಯಗೊಳಿಸಿದರು.

ಎಂಎಂಸಿ ಅಂಡ್ ಆರ್‌ಐ ಯುನೈಟೆಡ್ ಕಾಂಟ್ರಾಕ್ಟ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ನೌಕರರು ಶುಕ್ರವಾರ ಪ್ರತಿಭಟನೆ ಆರಂಭಿಸಿದ್ದರು.


ಕಾರ್ಮಿಕ ಇಲಾಖೆ ಅಧಿಕಾರಿಗಳು ಮತ್ತು ಎಂಎಂಸಿ ಅಂಡ್ ಆರ್‌ಐ ನಿರ್ದೇಶಕರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಇಂದು ನಡೆದ ಸಭೆಯಲ್ಲಿ ನೌಕರರ ಬೇಡಿಕೆಗಳನ್ನು ಈಡೇರಿಸುವುದಾಗಿ ಗುತ್ತಿಗೆದಾರರು ನೀಡಿದ ಭರವಸೆ ಮೇರೆಗೆ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ ಅವರ ಕಚೇರಿ ಎದುರು ನಡೆಸುತ್ತಿದ್ದ ಪ್ರತಿಭಟನೆಯನ್ನು ಕೈಬಿಡಲಾಯಿತು.

ಇದೇ ವೇಳೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಯೂನಿಯನ್ ಕಾರ್ಯದರ್ಶಿ ಎಸ್.ಹೆಚ್.ಹರೀಶ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಕೆಆರ್ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್, ಚೆಲುವಾಂಬ ಆಸ್ಪತ್ರೆ, ಡೀನ್ ಮತ್ತು ಆಡಳಿತ ಕಚೇರಿ ಸೇರಿದಂತೆ ಸುಮಾರು 800 ಮಂದಿ ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಸೆಕ್ಯೂರಿಟಿ ಗಾರ್ಡ್, ಆಯಾಗಳು, ನರ್ಸ್‌ಗಳು, ಡಿ ಗ್ರೂಪ್ ನೌಕರರು, ಸ್ವಚ್ಛತಾ ನೌಕರರು ಹಾಗೂ ಸಫಾಯಿ ಕರ್ಮಚಾರಿಗಳು ಸೇರಿದ್ದಾರೆ. ತುರ್ತು ವೈದ್ಯಕೀಯ ಸೇವೆಗಳಡಿ ಕೆಲಸ ಮಾಡುವ ಗುತ್ತಿಗೆ ನೌಕರರು ಹೊರತಾಗಿ ಉಳಿದೆಲ್ಲಾ ಗುತ್ತಿಗೆ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನಾಕಾರನ್ನುದ್ದೇಶಿಸಿ ಮಾತನಾಡಿದ ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಈ ಸಮಸ್ಯೆಗಳು ತಿಳಿಯುತ್ತಿಲ್ಲವೇ? ಇಲ್ಲಿಯ ವ್ಯವಸ್ಥೆಗಳು ಅವರಿಗೆ ತುಂಬ ಚೆನ್ನಾಗಿಯೇ ಗೊತ್ತಿದೆ. ಆದರೂ ಅವರು ಕ್ರಮ ವಹಿಸುತ್ತಿಲ್ಲ. ಈ ಸರ್ಕಾರ, ಈ ಮಂತ್ರಿ ಎಲ್ಲರೂ ಸಂವಿಧಾನ ಆಶಯವನ್ನು ಇಡೀ ರಾಜ್ಯಕ್ಕೆ ತಲುಪಿಸಲು ನೂರಾರು ಕೋಟಿ ವೆಚ್ಚ ಮಾಡುತ್ತಿದ್ದಾರೆ. ಆದರೆ ಅದೇ ಸಂವಿಧಾನದ ಆಶಯದಂತೆ ಕನಿಷ್ಠ ವೇತನವನ್ನೇ ಇಲ್ಲಿ ಕೊಡುತ್ತಿಲ್ಲ ಎಂಬುದು ಗಮನಕ್ಕೆ ಬಂದಿದ್ದರೂ ಕ್ರಮ ವಹಿಸಿಲ್ಲ. ಇದು ಅವರ ಸ್ಥಾನಕ್ಕೆ ಶೋಭೆಯಲ್ಲ. ಡೀನ್, ಸಚಿವರು ಸೇರಿದಂತೆ ಸಂಬಂಧಿಸಿದವರು ಜಬಾಬ್ದಾರಿಯಿಂದ ಈ ಬಗ್ಗೆ ಗಮನಹರಿಸಿ ನೌಕರರ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಶನಿವಾರ ಸಂಜೆ ವೇಳೆಗೆ ಕಾರ್ಮಿಕ ಇಲಾಖೆ ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್, ಹಿರಿಯ ಕಾರ್ಮಿಕ ನಿರೀಕ್ಷಕ ಮಾದಪ್ಪ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದರು. ಬಳಿಕ ಎಂಎಂಸಿ ಅಂಡ್ ಆರ್‌ಐ ನಿರ್ದೇಶಕರು ಮತ್ತು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ, ಸಮಸ್ಯೆ ಕುರಿತಂತೆ ಚರ್ಚೆ ನಡೆಸಿದರು. ಇದೇ ವೇಳೆ ಸ್ಥಳದಲ್ಲಿ ಹಾಜರಿದ್ದ ಗುತ್ತಿಗೆದಾರರಿಗೆ ಕಾನೂನಿನಂತೆ ನೌಕರರಿಗೆ ವೇತನ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸುವಂತೆ ಕಾರ್ಮಿಕ ಇಲಾಖಾಧಿಕಾರಿಗಳು ತಾಕೀತು ಮಾಡಿದರು. ಪ್ರತಿಭಟನೆ ಬೆಂಬಲಿಸಿ ಪ್ರಗತಿಪರ ಹೋರಾಟಗಾರ ರಾಜಣ್ಣ ಇಂದಿನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಯೂನಿಯನ್‌ನ ಸಿ.ಅರವಿಂದ್, ಅಕ್ಕಮಹಾದೇವಿ, ರಾಜಮ್ಮ, ಭಾಗ್ಯಮ್ಮ, ಮಲ್ಲಿಗೆ, ಎಸ್.ಎಂ. ಪವಿತ್ರಾ ಇತರರು ಉಪಸ್ಥಿತರಿದ್ದರು.

ನಾಳೆ, ನಾಡಿದ್ದು ವಿದ್ಯುತ್ ವ್ಯತ್ಯಯ



ಮೈಸೂರು,ಮೇ 3–ಮೇ 5ಮತ್ತು 6ರಂದು ಕಬಿನಿ ನೀರು ಸರಬರಾಜು ಯೋಜನೆ ಭಾಗವಾದ ಕೆಂಬಾಳು ಜಲ ಶುದ್ಧೀಕರಣ ಘಟಕದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಮುರುಡಗಳ್ಳಿ, ತಳೂರು, ದೊಡ್ಡಕಾಟೂರು, ದೂರ ಹಳ್ಳಿಕೆರೆ ಹುಂಡಿ ಗ್ರಾಮಗಳು, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬ್ರಾಹ್ಮಣ ಮಹಾಸಭಾಗೆ ನೇಮಕ



ಮೈಸೂರು, ಮೇ 3–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ರಾಜ್ಯ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ದೇಶ – ವಿದೇಶ

ಭಾರತದಿಂದ ಪ್ರತೀಕಾರದ ದಾಳಿ ಭೀತಿ: ಪಾಕ್‌ನಲ್ಲಿ 1000ಕ್ಕೂ ಹೆಚ್ಚು ಮದರಸಾಗಳು ಬಂದ್



ಇಸ್ಲಾಮಾಬಾದ್: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ನಂತರ ಪಾಕಿಸ್ತಾನ ಸರ್ಕಾರ ಮತ್ತು ಅದರ ಸೇನೆಯು ಭಯದ ನೆರಳಿನಲ್ಲಿ ಬದುಕುತ್ತಿವೆ. ಭಾರತದ ಪ್ರತೀಕಾರದ ಭಯದಲ್ಲಿದ್ದಾರೆ. ಇದಕ್ಕಾಗಿಯೇ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಮುಂದಿನ 10 ದಿನಗಳವರೆಗೆ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ನಿಷೇಧಿಸಿದೆ. ಇಷ್ಟು ಮಾತ್ರವಲ್ಲದೆ ಪಿಒಕೆಯಲ್ಲಿರುವ 1000ಕ್ಕೂ ಹೆಚ್ಚು ಮದರಸಾಗಳನ್ನು ತಾತ್ಕಾಲಿಕವಾಗಿ ಮುಚ್ಚಿದೆ. ಭಾರತವು ಈ ಮದರಸಾಗಳನ್ನು ಭಯೋತ್ಪಾದಕ ತರಬೇತಿ ಕೇಂದ್ರಗಳೆಂದು ಪರಿಗಣಿಸಿ ಗುರಿಯಾಗಿಸಬಹುದು ಎಂಬ ಭಯ ಪಾಕಿಸ್ತಾನಿ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಿದ್ದಾರೆ. ಈ ಮದರಸಾಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು ನಮ್ಮ ರಕ್ಷಣಾತ್ಮಕ ಕ್ರಮವಾಗಿದೆ ಎಂದು ಪಾಕಿಸ್ತಾನಿ ಅಧಿಕಾರಿ ಹಫೀಜ್ ನಜೀರ್ ಅಹ್ಮದ್ ಸುದ್ದಿ ಸಂಸ್ಥೆ ರಾಯಿಟರ್ಸ್‌ಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದಾಗ್ಯೂ, ಉದ್ವಿಗ್ನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಮದುವೆಗೆ ಸಿದ್ಧವಾಗಿದ್ದ ಯುವತಿ ಮೇಲೆ ಆಸಿಡ್ ಎರಚಿದ ಭಗ್ನಪ್ರೇಮಿ



ಅಜಮ್‌ಗಢ: ಉತ್ತರಪ್ರದೇಶದಲ್ಲಿ ಭಗ್ನಪ್ರೇಮಿಯೋರ್ವ ತಾನು ಪ್ರೀತಿಸಿದ ಯುವತಿ ಮೇಲೆಯೇ ಆಸಿಡ್ ಎರಚಿದ್ದಾನೆ. ಮೌ ಜಿಲ್ಲೆಯಲ್ಲಿ ಈ ಘಟನೆ ನಡೆದಿದ್ದು, ಇನ್ನು ಕೆಲವೇ ದಿನಗಳಲ್ಲಿ ಮದುವೆಯಾಗಬೇಕಿದ್ದ 25 ವರ್ಷದ ರೀಮಾ (ಹೆಸರು ಬದಲಾಯಿಸಲಾಗಿದೆ) ಎಂಬಾಕೆಯ ಮೇಲೆ ದುಷ್ಕರ್ಮಿ ಆಸಿಡ್ ದಾಳಿ ನಡೆಸಿದ್ದಾನೆ.

ಮೂಲಗಳ ಪ್ರಕಾರ ಬ್ಯಾಂಕಿನಿಂದ ಮನೆಗೆ ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಆಕೆಯನ್ನು ತಡೆದಿದ್ದಾರೆ. ಈ ವೇಳೆ ಆರೋಪಿ ರಾಮ್ ಜನಮ್ ಸಿಂಗ್ ಪಟೇಲ್, 'ನನಗೆ ಸಿಗದ ನೀನು ಇನ್ಯಾರಿಗೂ ಸಿಗಬಾರದು' ಎಂದು ಹೇಳಿ ಆಕೆಯ ಮೇಲೆ ಆಸಿಡ್ ಎರಚಿ ಪರಾರಿಯಾಗಿದ್ದಾನೆ. ಇದರಿಂದ ಯುವತಿಯ ಮುಖ, ಭುಜ, ಕುತ್ತಿಗೆ ಮತ್ತು ದೇಹದ ಮೇಲ್ಭಾಗ ತೀವ್ರವಾಗಿ ಸುಟ್ಟ ಗಾಯಗಳಾಗಿವೆ. ಶೇ. 60ರಷ್ಟು ಸುಟ್ಟಗಾಯಗಳಿಗೆ ಒಳಗಾಗಿರುವ ಆಕೆ ಅಜಮ್‌ಗಢದ ಗ್ಲೋಬಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಪಟೇಲ್ ಮತ್ತು ಇತರ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಘಟನೆಯಲ್ಲಿ ಬಳಸಲಾದ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಸಂತ್ರಸ್ತ ಯುವತಿಗೆ ಈಗಾಗಲೇ ಮದುವೆ ನಿಶ್ಚಯವಾಗಿತ್ತು. ಇನ್ನು ಕೆಲವೇ ದಿನಗಳಲ್ಲಿ ಆಕೆಯ ಮದುವೆ ನಡೆಯಬೇಕಿತ್ತು.

9ನೇ ದಿನವೂ ಗಡಿಯಲ್ಲಿ ಕದನ ವಿರಾಮ ಉಲ್ಲಂಘಿಸಿದ ಪಾಕ್



ಜಮ್ಮು ಕಾಶ್ಮೀರ: ಪಹಲ್ಗಾಮ್‌ನಲ್ಲಿ ಇಸ್ಲಾಮಿಕ್ ಭಯೋತ್ಪಾದಕರು ನಡೆಸಿದ ಭೀಕರ ಭಯೋತ್ಪಾದಕ ದಾಳಿಯ ನಂತರ ನಿರಂತರವಾಗಿ ಪಾಕಿಸ್ತಾನ ಗಡಿಯಲ್ಲಿ ಕದನ ವಿರಾಮ ಉಲ್ಲಂಘನೆ ಮಾಡುತ್ತಿದ್ದು, ಇಂದಿಗೆ ಸತತ 9ನೇ ದಿನವೂ ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ. ನಿನ್ನೆ ರಾತ್ರಿ, ಪಾಕಿಸ್ತಾನ ಸೇನೆಯು ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಕುಪ್ವಾರಾ, ಉರಿ ಮತ್ತು ಅಖ್ನೂರ್ ವಲಯಗಳ ಎದುರು ನಿಯಂತ್ರಣ ರೇಖೆಯ ಉದ್ದಕ್ಕೂ ಸಣ್ಣ ಶಸ್ತ್ರಾಸ್ತ್ರಗಳಿಂದ ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ. ಇದಕ್ಕೆ ಭಾರತ ಕೂಡ ತಕ್ಕ ಉತ್ತರ ನೀಡಿದೆ. ಭಾರತವು ಪಾಕಿಸ್ತಾನದೊಂದಿಗೆ 3,323 ಕಿಮೀ ಉದ್ದದ ಗಡಿಯನ್ನು ಹಂಚಿಕೊಂಡಿದೆ. ಇದರಲ್ಲಿ ಗುಜರಾತ್‌ನಿಂದ ಜಮ್ಮುವಿನ ಅಖ್ನೂರ್‌ವರೆಗಿನ ಸುಮಾರು 2,400 ಕಿಮೀ ಉದ್ದದ ಅಂತರರಾಷ್ಟ್ರೀಯ ಗಡಿ (ಐಬಿ), ಜಮ್ಮುವಿನಿಂದ ಲೇಹ್ ವರೆಗಿನ 740 ಕಿಮೀ ಉದ್ದದ ನಿಯಂತ್ರಣ ರೇಖೆ ಮತ್ತು ಸಿಯಾಚಿನ್ ವಲಯದಲ್ಲಿ 110 ಕಿಮೀ ಉದ್ದದ ವಾಸ್ತವಿಕ ನೆಲದ ಸ್ಥಾನ ರೇಖೆ (ಎಜಿಪಿಎಲ್) ಸೇರಿವೆ.

ಪ್ರೇಯಸಿ ಜೊತೆ ನೂಡಲ್ಸ್ ತಿನ್ನುತ್ತಿದ್ದ ಪ್ರೇಮಿಗೆ ಪೋಷಕರಿಂದಲೇ ಧರ್ಮದೇಟು



ಕಾನ್ಪುರ: ತುಂಬಿದ ಮಾರುಕಟ್ಟೆಯಲ್ಲಿ ಪ್ರೇಯಸಿ ಜೊತೆ ನೂಡಲ್ಸ್ ತಿನ್ನುತ್ತಿದ್ದ ಪುತ್ರನಿಗೆ ಆತನ ಪೋಷಕರೇ ಧರ್ಮದೇಟು ನೀಡುತ್ತಿರುವ ವಿಡಿಯೊವೊಂದು ವ್ಯಾಪಕ ವೈರಲ್ ಆಗುತ್ತಿದೆ. ಉತ್ತರ ಪ್ರದೇಶದ ಕಾನ್ಪುರದಲ್ಲಿ ಈ ಘಟನೆ ನಡೆದಿದ್ದು, 21 ವರ್ಷದ ಯುವಕ ರೋಹಿತ್ ಮತ್ತು ಆತನ 19 ವರ್ಷದ ಪ್ರೇಯಸಿಯನ್ನು ಶುಕ್ರವಾರ ಪೋಷಕರು ಸಾರ್ವಜನಿಕವಾಗಿ ಥಳಿಸಿದ ಘಟನೆ ನಡೆದಿದೆ. ಇಲ್ಲಿನ ಗುಜೈನಿ ಪೊಲೀಸ್ ಠಾಣೆ ವ್ಯಾಪ್ತಿಯ ರಾಮ್‌ಗೋಪಾಲ್ ಜಂಕ್ಷನ್‌ನಲ್ಲಿ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ ರೋಹಿತ್ ಎಂಬ ವ್ಯಕ್ತಿ ತನ್ನ ಗೆಳತಿಯೊಂದಿಗೆ ನೂಡಲ್ಸ್ ತಿನ್ನುತ್ತಿದ್ದಾಗ ಆತನ ಹೆತ್ತವರಾದ ಶಿವಕರನ್ ಮತ್ತು ಸುಶೀಲಾ ಸ್ಥಳಕ್ಕೆ ಬಂದರು. ಈ ವೇಳೆ ರೋಹಿತ್‌ನೊಂದಿಗೆ ಅವರು ಜಗಳ ಮಾಡಿದ್ದು, ನೋಡನೋಡುತ್ತಲೇ ಆತನ ಮೇಲೆ ಹಲ್ಲೆ ನಡೆಸಿದ್ದಾರೆ. ಅಲ್ಲದೆ ಇದನ್ನು ತಡೆಯಲು ಬಂದ ಆತನ ಪ್ರೇಯಸಿ ಮೇಲೂ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಪ್ರಸ್ತುತ ವೈರಲ್ ಆಗುತ್ತಿರುವ ವಿಡಿಯೋದಲ್ಲಿ ರೋಹಿತ್ ಮತ್ತು ಆಕೆಯ ಪ್ರೇಯಸಿ ದ್ವಿಚಕ್ರವಾಹನದಲ್ಲಿ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾಗ ರೋಹಿತ್ ತಾಯಿ ರೆಡ್‌ಹ್ಯಾಂಡ್ ಆಗಿ ಹಿಡಿದಿದ್ದಾರೆ.

ಪಹಲ್ಗಾಮ್ ದಾಳಿಯಲ್ಲಿ ಪಾಕ್ ಕೈವಾಡ ತಳ್ಳಿ ಹಾಕುವಂತಿಲ್ಲ



ವಾಷಿಂಗ್ಟನ್ ಡಿಸಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನೆರೆ ರಾಷ್ಟ್ರ ಪಾಕಿಸ್ತಾನದ ಕೈವಾಡದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಗಂಭೀರ ಆರೋಪ ಮಾಡಿದ್ದಾರೆ. ಫಾಕ್ಸ್ ನ್ಯೂಸ್‌ನೊಂದಿಗೆ ಮಾತನಾಡಿರುವ ಜೆಡಿ ವ್ಯಾನ್ಸ್, ಪಹಲ್ಗಾಮ್ ದಾಳಿಯಲ್ಲಿ ಒಂದು ಹಂತದವರೆಗೆ ಪಾಕಿಸ್ತಾನದ ಕೈವಾಡ ಇದೆ ಎಂಬುದು ಸಾಬೀತಾಗಿದೆ. ಪಾಕಿಸ್ತಾನವು ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾದ ಭಯೋತ್ಪಾದಕರನ್ನು ಬೇಟೆ ಯಾಡಲು ಭಾರತಕ್ಕೆ ನೆರವು ನೀಡಬೇಕು. ಆಗ ಮಾತ್ರ ಅದು ದಾಳಿಯ ಹೊಣೆಯಿಂದ ಮುಕ್ತವಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಪಹಲ್ಗಾಮ್ ದಾಳಿಯಿಂದ ಭಾರತ– ಪಾಕಿಸ್ತಾನ ನಡುವೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಉಭಯ ದೇಶಗಳು ಪ್ರಾದೇಶಿಕ ಸಂಘರ್ಷವನ್ನು ತಪ್ಪಿಸುವ ಬಗ್ಗೆ ಗಮನಹರಿಸಬೇಕು. ಇದು ದೊಡ್ಡ ಸಂಘರ್ಷಕ್ಕೆ ತಿರುಗದಂತೆ ನೋಡಿಕೊಳ್ಳುವ ಜವಾಬ್ದಾರಿ ಭಾರತ ಮತ್ತು ಪಾಕಿಸ್ತಾನದ ಮೇಲೆ ಇದೆ. ಪಾಕಿಸ್ತಾನವು ತನ್ನ ನೆಲದಲ್ಲಿರುವ ಭಯೋತ್ಪಾದಕರನ್ನು ಮಟ್ಟಹಾಕಲು ಭಾರತಕ್ಕೆ ಸಹಾಯ ಮಾಡಬೇಕು ಎಂದು ಜೆಡಿ ವ್ಯಾನ್ಸ್ ಹೇಳಿದರು.

ಮೈಸೂರು ಮಿತ್ರ

ಗುಂಡತ್‌ಕೊಲ್ಲಿಯಲ್ಲಿ ಕಾಡಾನೆ ನಿಯಂತ್ರಣಕ್ಕೆ ಆಗ್ರಹ



ಕಾಡಾನೆ ತುಳಿದು ಪೈಪ್ ನಾಶವಾಗಿರುವುದು

ಗೋಣಿಕೊಪ್ಪ,ಮೇ 3– ಮತ್ತೂರು ಗ್ರಾಮದ ಗುಂಡತ್‌ಕೊಲ್ಲಿ ಎಂಬಲ್ಲಿ ಕಾಡಾನೆ ಹಾವಳಿಯಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿದೆ.

ಮನೆಯಪಂಡ ದತ್ತಾ ಕರುಂಬಯ್ಯ ಅವರಿಗೆ ಸೇರಿದ ಕಾಫಿ ತೋಟಕ್ಕೆ ಕಾಡಾನೆಗಳು ನಿರಂತರ ದಾಳಿ ನಡೆಸುತ್ತಿವೆ. ತೋಟಕ್ಕೆ ನೀರು ಹಾಯಿಸಲು ಅಳವಡಿಸಿದ್ದ ಅಲ್ಯೂಮಿನಿಯಂ ಪೈಪ್‌ಗಳನ್ನು ತುಳಿದು ನಾಶಪಡಿಸಿವೆ.

ಕೂಡಲೇ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆಯನ್ನು ನಡೆಸಬೇಕೆಂದು ಗ್ರಾಮಸ್ಥರಾದ ಮನೆಯಪಂಡ ರಾಜ ತಿಮ್ಮಯ್ಯ, ಪಿ.ಎ.ಅಸೀಸ್, ಪಿ.ಕೆ.ವಿಶ್ವನಾಥ್, ಹರೀಶ್ ಆಗ್ರಹಿಸಿದ್ದಾರೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 3– ಸೋಮವಾರಪೇಟೆ ಕೇಂದ್ರದಿಂದ ಹೊರಹೊಮ್ಮುವ ಎಫ್2 ಶಾಂತಳ್ಳಿ ಫೀಡರ್ ಮಾರ್ಗದಲ್ಲಿ ಮೇ 5 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಯಡೂರು, ತಲ್ತಾರೆಶೆಟ್ಟಳ್ಳಿ, ಕಿರಗಂದೂರು, ತಾಕೇರಿ, ಗಿಜಗನಮನೆ, ತೋಳೂರುಶೆಟ್ಟಳ್ಳಿ, ಕೂತಿ, ಹೊಸಬೀಡು, ಕಲ್ಕಂದೂರು, ಬಸವನಕಟ್ಟೆ, ನಗರಳ್ಳಿ, ಹೆಮನಗದ್ದೆ, ಶಾಂತಳ್ಳಿ, ಬೆಟ್ಟದಳ್ಳಿ, ಬೀದಳ್ಳಿ, ಕುಂದಳ್ಳಿ, ಹೆಗ್ಗಡಮನೆ, ಹರಗ, ಕುಂಬಾರಗಡಿಗೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಹಾಲಗುಂದ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿ

ಶಾಸಕ ಪೊನ್ನಣ್ಣರ ಅಭಿವೃದ್ಧಿ ಕಾರ್ಯಕ್ಕೆ ಗ್ರಾಮಸ್ಥರ ಮೆಚ್ಚುಗೆ



ಹಾಲುಗುಂದ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ, ಕಾಮಗಾರಿಯನ್ನು ಶಾಸಕ ಪೊನ್ನಣ್ಣ ಉದ್ಘಾಟಿಸಿದರು.

ಸಿದ್ದಾಪುರ, ಮೇ 3– ಶಾಸಕ ಎ.ಎಸ್. ಪೊನ್ನಣ್ಣ ಕೋಟಿ ರೂ. ಅನುದಾನ ನೀಡುವುದರ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದ್ದಾರೆ ಎಂದು ಸ್ಥಳೀಯ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಪ್ರದೇಶವಾಗಿರುವ ಹಾಲುಗುಂದ ಪಂಚಾಯಿತಿ ವ್ಯಾಪ್ತಿ ಕೊಂಡಂಗೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ಸಮಸ್ಯೆ ರಸ್ತೆ ಅಭಿವೃದ್ಧಿ, ಸೇತುವೆ, ತಡೆಗೋಡೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಬಗ್ಗೆ ಗ್ರಾಮಸ್ಥರು ಮನವಿ ಮಾಡಿಕೊಂಡಿದ್ದರು.

ಇದೀಗ ಗ್ರಾಮದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿದ್ದು ಮತ್ತಷ್ಟು ಕಾಮಗಾರಿಗಳು ಸದ್ಯದಲ್ಲೇ ಪೂರ್ಣಗೊಳ್ಳಲಿದೆ ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಶಾಸಕ ಪೊನ್ನಣ್ಣ ನುಡಿದಂತೆ ನಡೆದುಕೊಂಡು ಮಾದರಿಯಾಗಿದ್ದಾರೆ ಎಂದು ಗ್ರಾಪಂ ಸದಸ್ಯ ಅಬ್ದುಲ್ ರೆಹಮಾನ್ ಅಂದಾಯಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೊಂಡಂಗೇರಿ ಸುನ್ನಿ ಮುಸ್ಲಿಂ ಜಮಾಅತ್ ಅಧ್ಯಕ್ಷ ಕುಪ್ಪಂದರ ಕೆ ಯೂಸುಫ್ ಹಾಜಿ ಮಾತನಾಡಿ ಹಲವು ವರ್ಷಗಳಿಂದಲೂ ಅಭಿವೃದ್ಧಿ ಕಾಣದೆ ರಸ್ತೆ ಸೇರಿದಂತೆ ಹಲವು ಸಮಸ್ಯೆಗಳು ಈ ಭಾಗದಲ್ಲಿತ್ತು ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಹೆಚ್ಚು ಅನುದಾನಗಳನ್ನು ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿ ಮಾದರಿಯಾಗಿದ್ದಾರೆ ಎಂದು ಅಭಿನಂದಿಸಿದರು.

ಮುಸ್ಲಿಂ ಜಮಾಅತ್ ಪ್ರಧಾನ ಕಾರ್ಯದರ್ಶಿ ಪುಡಿಯಂಡ ಇ ಶಾದುಲಿ ಮಾತನಾಡಿ ಜಾತಿ ಮತ ಭೇದವಿಲ್ಲದೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಹೆಚ್ಚು ಅನುದಾನಗಳನ್ನು ನೀಡಿ ಅಭಿವೃದ್ಧಿಗೆ ಮುಂದಾಗಿದ್ದಾರೆ. ಮತ್ತಷ್ಟು ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ಮನವಿ ಮಾಡಿದರು. ವಲಯ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ಲಾ ಸೇರಿದಂತೆ ಸ್ಥಳೀಯ ನಿವಾಸಿಗಳು ಹಾಜರಿದ್ದರು

ರೋಚಕ ಅನುಭವದ ಕೂರ್ಗ್ ಚ್ಯಾಲೆಂಜ್ ಆಫ್ ರೋಡ್ ರ್‍ಯಾಲಿ



ಗೋಣಿಕೊಪ್ಪ ಮೇ 3–ಕುಂದ ಗ್ರಾಮದ ರತನ್ ಎಸ್ಟೇಟ್‌ನ ಭತ್ತದ ಗದ್ದೆಯಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ಕೂರ್ಗ್ ಚ್ಯಾಲೆಂಜ್ ಆಫ್ ರೋಡ್ ರ್‍ಯಾಲಿ ರೋಮಾಂಚನ ಮೂಡಿಸಿತು.

ಎಕ್ಸ್ಟ್ರೀಮ್ ಡೀಸೆಲ್ ಕ್ಲಾಸ್, ಎಕ್ಸ್ಟ್ರೀಮ್ ಪೆಟ್ರೋಲ್ ಕ್ಲಾಸ್, ಎಸ್‌ಯುವಿ ಕ್ಲಾಸ್, ಜಿಮ್ನಿ ಕ್ಲಾಸ್, ಥಾರ್ ಕ್ಲಾಸ್, ಲೇಡೀಸ್ ಕ್ಲಾಸ್ ವಿಭಾಗದಲ್ಲಿ ರ್‍ಯಾಲಿ ನಡೆಯಿತು.

ಗದ್ದೆಯಲ್ಲಿ ಗುಂಡಿ, ಏರಿ ಮೇಲೆ ವಾಹನ ಚಲಾಯಿಸಿ ಎದೆ ಜಲ್ಲೆನಿಸುವಂತೆ ಮಾಡಿತು. ಕೆರೆಯನ್ನೇ ರ್‍ಯಾಲಿ ಟ್ರ್ಯಾಕ್ ಆಗಿ ಪರಿವರ್ತಿಸಿರುವುದು ವಿಶೇಷವಾಗಿತ್ತು. ಟ್ರ್ಯಾಕ್‌ನಲ್ಲಿ ಜೀಪ್ ಹಿಂಬದಿ ಚಲಾಯಿಸಿ ಏರಿ ಹತ್ತುವ ಪ್ರಯತ್ನ ರ್‍ಯಾಲಿ ಅಭಿಮಾನಿಗಳಿಗೆ ಮನರಂಜನೆ ನೀಡಿತು. ವಾಹನ ಏರಿ ಮೇಲೇರಿ ಹೋಗುವುದು, ತೋಡಿರುವ ಬೃಹತ್ ಗುಂಡಿಗಳಲ್ಲಿ ವಾಹನ ಇಳಿದು ಹತ್ತಿಸುವ ಹೋರಾಟ ಮೈ ಜುಂ ಎನಿಸುವಂತಿತ್ತು. ವಾಹನದ ಒಂದು ಬದಿಯ ಎರಡು ಚಕ್ರಗಳು ಸಿಲುಕಿ ವಾಹನ ಮಗುಚಿಕೊಳ್ಳುವ ರೀತಿಯಲ್ಲಿ ಮುಂದೆ ಸಾಗುವ ಹಂತ ರೋಮಾಂಚನವಾಗಿತ್ತು.

ಹಿರಿಯ ರ್‍ಯಾಲಿಪಟು ಮಾಳೇಟಿರ ಜಗತ್ ನಂಜಪ್ಪ, ರ್‍ಯಾಲಿಪಟು ಉದ್ದಪಂಡ ಚೇತನ್ ಚೆಂಗಪ್ಪ, ಅಂತಾರಾಷ್ಟ್ರೀಯ ಹಾಕಿ ಆಟಗಾರ ಚೇಂದಂಡ ನಿಖಿನ್ ತಿಮ್ಮಯ್ಯ ಗಾಳಿಯಲ್ಲಿ ಗುಂಡು ಹೊಡೆಯುವ ಮೂಲಕ ರ್‍ಯಾಲಿಗೆ ಚಾಲನೆ ನೀಡಿದರು.

ಉದ್ಯಮಿ ಗುಮ್ಮಟ್ಟೀರ ಕಿಲನ್ ಗಣಪತಿ ಮಾತನಾಡಿ, ರಾಷ್ಟ್ರಮಟ್ಟದ ರ್‍ಯಾಲಿಪಟುಗಳ ಸಮಾಗಮಗೊಂಡಿರುವುದರಿಂದ ಕಿರಿಯ ರ್‍ಯಾಲಿ ಪಟುಗಳಿಗೆ ಉತ್ತೇಜನ ದೊರೆಕಿದಂತಾಗುತ್ತಿದೆ. ಉತ್ತಮ ಜಾಗದಲ್ಲಿ ರ್‍ಯಾಲಿ ಆಯೋಜನೆಯಿಂದ ಕೊಡಗು ರಾಷ್ಟ್ರದಲ್ಲಿಯೂ ಗಮನ ಸೆಳೆಯುವಂತಾಗಿದೆ ಎಂದರು.

ರ್‍ಯಾಲಿಪಟುಗಳಾದ ಉದ್ದಪಂಡ ತಿಮ್ಮಣ್ಣ, ಸಿಬಿಪೌಲ್, ಕಾಫಿ ಬೆಳೆಗಾರರಾದ ಪಟ್ರಂಗಡ ಧನಿ ರತನ್, ಪಟ್ರಂಗಡ ಸೋಮಣ್ಣ, ಆಯೋಜಕರಾದ ಪಟ್ರಂಗಡ ಶ್ರೀಮಂತ್ ಮುತ್ತಣ್ಣ ಇದ್ದರು.

ರ್‍ಯಾಲಿ ಮುಂದುವರಿಕೆ : ರತನ್ ಎಸ್ಟೇಟ್ ಕಾಫಿ ತೋಟ, ತೋಡುಗಳ ಮಧ್ಯೆ ಭಾನುವಾರ ಸ್ಪರ್ಧೆ ನಡೆಯಲಿದೆ. ಎನ್‌ಡಿಎಂಎಸ್ ಕ್ಲಾಸ್, ಮೋಡಿಫೈಡ್ ಡೀಸೆಲ್ ಕ್ಲಾಸ್, ಮೋಡಿಫೈಡ್ ಪೆಟ್ರೋಲ್, ಮೋಡಿಫೈಡ್ ಓಪನ್ ಕ್ಲಾಸ್ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ.

ಕೂಡಿಗೆ : ಅಪಘಾತದ ಗಾಯಾಳು ಸಾವು

ಕುಶಾಲನಗರ, ಮೇ 3– ಸಮೀಪದ ಕೂಡಿಗೆ ಮುಖ್ಯ ರಸ್ತೆಯಲ್ಲಿ ಆಟೋ ಡಿಕ್ಕಿಯಾಗಿ ಗಾಯಗೊಂಡಿದ್ದ ವ್ಯಕ್ತಿ ಮೃತಪಟ್ಟ ಘಟನೆ ನಡೆದಿದೆ.

ಕೂಡಿಗೆ ಗ್ರಾಪಂ ವ್ಯಾಪ್ತಿಯ ಭುವನಗಿರಿ ಗ್ರಾಮದ ಗಂಗಯ್ಯ ಎಂಬವರ ಪುತ್ರ ಸತೀಶ್ (40) ಮೃತ ದುರ್ದೈವಿ.

ಕೂಡಿಗೆಯಲ್ಲಿ ರಸ್ತೆ ದಾಟುತ್ತಿದ್ದಾಗ ಆಟೋ ಡಿಕ್ಕಿಯಾಗಿ ತಲೆಗೆ ತೀವ್ರ ಪೆಟ್ಟಾಗಿತ್ತು. ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ರವಾನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದ ಹಿನ್ನೆಲೆಯಲ್ಲಿ ಸತೀಶ್ ಮೃತಪಟ್ಟಿದ್ದಾರೆ. ಮೃತನು ಪತ್ನಿ ಮತ್ತು ಮೂವರು ಮಕ್ಕಳನ್ನು ಅಗಲಿದ್ದಾರೆ, ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 8, ದಿಶಾ ಸಭೆ

ಮಡಿಕೇರಿ: ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯು ಸಂಸದ ಯದುವೀರ್ ಅಧ್ಯಕ್ಷತೆಯಲ್ಲಿ ಮೇ8 ರಂದು ಬೆಳಗ್ಗೆ 10.30ಕ್ಕೆ ಜಿಪಂ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಸಮಿತಿ ಸದಸ್ಯ ಕಾರ್ಯದರ್ಶಿ ಆನಂದ್ ಪ್ರಕಾಶ್ ಮೀನಾ ತಿಳಿಸಿದ್ದಾರೆ.

ಶ್ರೀ ಇಗ್ಗುತ್ತಪ್ಪ ಭಕ್ತ ಜನಸಂಘವನ್ನು ಟ್ರಸ್ಟ್ ಆಗಿ ಬದಲಾಯಿಸಲು ನಿರ್ಣಯ

ನಾಪೋಕ್ಲು,ಮೇ 3– ಪಾಡಿ ಇಗ್ಗುತ್ತಪ್ಪ ದೇವಾಲಯದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಭಕ್ತ ಜನಸಂಘವನ್ನು ಟ್ರಸ್ಟ್ ಆಗಿ ಬದಲಾಯಿಸುವಂತೆ ವಾರ್ಷಿಕ ಮಹಾಸಭೆಯಲ್ಲಿ ನಿರ್ಣಯಿಸಲಾಯಿತು.

ಸಂಘದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ವಾಸಕ್ಕೆ ಕಟ್ಟಡ ನಿರ್ಮಿಸುವ ಬಗ್ಗೆ ಹಾಗೂ ಇಗ್ಗುತಪ್ಪ ದೇವರ ಮೂಲಸ್ಥಾನವಾದ ಮಲ್ಮ ಬೆಟ್ಟದಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸಿ ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸೋಲಾರ್ ತಂತಿ ಬೇಲಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು. ಉಪಾಧ್ಯಕ್ಷ ಕಲ್ಯಾಟಂಡ ಟಿ. ಅಪ್ಪಣ್ಣ ವಂದಿಸಿದರು. ಭಕ್ತಾದಿಗಳು, ಸದಸ್ಯರು ಹಾಜರಿದ್ದರು.



ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಭಕ್ತ ಜನ ಸಂಘದ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.

ವೇದಿಕೆಯಲ್ಲಿ ಆಡಳಿತ ಮಂಡಳಿ ಪದಾಧಿಕಾರಿಗಳಾದ, ಕಲ್ಯಾಣಂಡ ಟಿ ಅಪ್ಪಣ್ಣ, ಬಟ್ಟೀರ ಚೋದಮ್ಮಮೇದಪ್ಪ, ಅಂಜಪರವಂಡ ಎ.ಕುಶಾಲಪ್ಪ, ಪರದಂಡ ಕೆ. ನಾಣಯ್ಯ, ಅನ್ನಾಡಿಯಂಡ ಪಿ. ದಿಲೀಪ್, ಅಲ್ಲಾರಂಡ ಎಸ್.ಅಯ್ಯಪ್ಪ, ಕುಲ್ಲೇಟಿರ ಅರುಣ್ ಬೇಬ, ಕುಟ್ಟಂಜೆಟ್ಟಿರ ಶ್ಯಾಮ್ ಬೋಪಣ್ಣ, ಕಾಂಡಂಡ ಎಂ.ಪೂವಯ್ಯ, ಕೇಲೇಟಿರ, ರಂಜನ್, ಕಲಿಯಂಡ ಎಸ್. ಗಣೇಶ್, ಅಪ್ಪಾರಂಡ ಪಿ.ಮಂದಣ್ಣ ಹಾಗೂ ಮಾಜಿ ಅಧ್ಯಕ್ಷ ಕಾಂಡಂಡ ಜೋಯಪ್ಪ, ಪ್ರಮುಖರಾದ ಬಾಚಮಂಡ ರಾಜಪೂವಣ್ಣ, ಉದಿಯಂಡ ಮೋಹನ್, ಕಲಿಯಂಡ ಹ್ಯಾರಿ ಮಂದಣ್ಣ, ಮೇಚಂಡ ಚೇತನ್, ಮುಕ್ಕಾಟಿರ ಚೋಟು ಅಪ್ಪಯ್ಯ, ಬಾಚಮಂಡ ಲವ ಚಿಣ್ಣಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಆನೆಕೆರೆ ಗೋಡೆ ದುರಸ್ತಿಗೆ ಆಗ್ರಹ

ಮಡಿಕೇರಿ: ಐತಿಹಾಸಿಕ ಹಿನ್ನೆಲೆ ಹೊಂದಿರುವ ಸೋಮವಾರಪೇಟೆ ಆನೆಕೆರೆ ಆವರಣ ಗೋಡೆ ಕುಸಿದು ಬಿದ್ದಿದೆ. ಧಾರಾಕಾರ ಮಳೆಗೆ ಆವರಣ ಗೋಡೆ ಬಿದ್ದಿದ್ದು, ರಾಜ್ಯ ಹೆದ್ದಾರಿಯ ಬದಿಯಲ್ಲೇ ಕೆರೆ ಇರುವುದರಿಂದ ಅಪಾಯದ ಮುನ್ಸೂಚನೆ ಎದುರಾಗಿದೆ. ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಮಾರ್ಗದಲ್ಲಿ ಸಂಚರಿಸುವುದರಿಂದ ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಮತ್ತು ಲೋಕೋಪಯೋಗಿ ಇಲಾಖೆ ತಕ್ಷಣ ದುರಸ್ತಿ ಕಾರ್ಯ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಆನೆಕೆರೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಮತ್ತು ಶುಚಿತ್ವಕ್ಕೆ ಆದ್ಯತೆ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.



ಅಕ್ರಮ ಅಕ್ಕಿ ಸಾಗಿಸುತ್ತಿದ್ದ ಲಾರಿ ಜಪ್ತಿ



ಪಟ್ಟಣ ಪೊಲೀಸರು ವಶಕ್ಕೆ ಪಡೆಯಲಾದ ಐನೂರು ಮೂಟೆ ಪಡಿತರ ತುಂಬಿದ ಲಾರಿ

ಕೊಳ್ಳೇಗಾಲ. ಮೇ 3– ನೆರೆ ರಾಜ್ಯಕ್ಕೆ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ವಿಷಯ ತಿಳಿದ ಆಹಾರ ಇಲಾಖೆ ಹಾಗೂ ಪಟ್ಟಣ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಲಾರಿ ಸಮೇತ ವಶಕ್ಕೆ ಪಡೆದಿರುವ ಪ್ರಕರಣ ನಡೆದಿದೆ

ಪಟ್ಟಣದ ಪೊಲೀಸ್ ಕ್ವಾರ್ಟರ್ಸ್ ಮುಂಭಾಗದಲ್ಲಿ ನಿಲ್ಲಿಸಿದ್ದ ಲಾರಿ (ಕೆ.ಎ.10 ಎ.2082) ಯಲ್ಲಿ ತುಂಬಿದ್ದ ತಲಾ ಸುಮಾರು 50 ಕೆಜಿ ತೂಕದ ಅಂದಾಜು ಐನೂರಕ್ಕೂ ಅಧಿಕ ಮೂಟೆಯಷ್ಟು ಅಕ್ಕಿಯನ್ನು ಜಪ್ತಿ ಮಾಡಿದ್ದಾರೆ.

ಆಹಾರ ನಿರೀಕ್ಷಕ ಪ್ರಸಾದ್, ಟೌನ್ ಪೊಲೀಸ್ ಠಾಣಾ ಪ್ರಭಾರ ಪಿಎಸ್‌ಐ ಸುಪ್ರೀತ್, ಎಎಸ್‌ಐ ಮಧು, ಹೆಚ್.ಸಿ ಸೂರ್ಯ ಪ್ರಕಾಶ್, ಪೇದೆ ಅನಿಲ್ ಇನ್ನಿತರರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ವಶಪಡಿಸಿಕೊಳ್ಳಲಾದ ಲಾರಿ ರಾಮಾಪುರ, ನಾಲಾರೋಡ್ ಮಾರ್ಗವಾಗಿ ತಮಿಳುನಾಡಿಗೆ ಪಡಿತರ ಸಮೇತ ತೆರಳುತ್ತಿತ್ತು ಎಂದು ಹೇಳಲಾಗಿದೆ.

ಹಿರೀಕೆರೆ ಸಮೀಪ ಗಂಡಾನೆ ಕಳೇಬರ ಪತ್ತೆ




ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಗಂಡಾನೆಯ ಮೃತದೇಹವನ್ನು ಅಧಿಕಾರಿಗಳು ಪರಿಶೀಲಿಸಿದರು.

ಗುಂಡ್ಲುಪೇಟೆ: ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸುಮಾರು 30 ರಿಂದ 40 ವರ್ಷ ವಯಸ್ಸಿನ ಗಂಡಾನೆಯ ಮೃತದೇಹ ಪತ್ತೆಯಾಗಿದೆ.

ಹಿಮವದ್ ಗೋಪಾಲಸ್ವಾಮಿಬೆಟ್ಟ ವಲಯ ವ್ಯಾಪ್ತಿಯ ಹಿರೀಕೆರೆ ಸಮೀಪ ಶನಿವಾರ ಗಸ್ತು ಸಿಬ್ಬಂದಿಗೆ ಕೊಳೆತ ಸ್ಥಿತಿಯಲ್ಲಿ ಆನೆಯ ಕಳೇಬರ ಕಂಡುಬಂದಿದೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಹುಲಿ ಯೋಜನೆಯ ನಿರ್ದೇಶಕ ಎಸ್.ಪ್ರಭಾಕರನ್, ಉಪ ಸಂರಕ್ಷಣಾಧಿಕಾರಿ ಎನ್.ಪಿ. ನವೀನ್ ಕುಮಾರ್, ವಲಯಾರಣ್ಯಾಧಿಕಾರಿ ಬಿ.ಎಂ.ಮಲ್ಲೇಶ್ ಭೇಟಿ ನೀಡಿ ಪರಿಶೀಲಿಸಿದರು.

ಅರಣ್ಯ ಇಲಾಖೆ ಪಶುವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದಂತಗಳನ್ನು ಬೇರ್ಪಡಿಸಿ ಕಳೇಬರವನ್ನು ವಿಲೇವಾರಿ ಮಾಡಲಾಯಿತು.

ನಿವೃತ್ತ ಸಬ್ ಇನ್ಸ್‌ಪೆಕ್ಟರ್‌ಗೆ ಬೀಳ್ಕೊಡುಗೆ



ಗುಂಡ್ಲುಪೇಟೆ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಅಪರಾಧ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಆರ್.ಚಂದ್ರಪ್ಪ ಅವರನ್ನು ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿವರ್ಗ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಟ್ಟರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಚಂದ್ರಪ್ಪ, ತಮ್ಮ ಕರ್ತವ್ಯದ ಅವಧಿಯಲ್ಲಿ ಸೂಕ್ತ ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಎಲ್ಲಾ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಕಾನೂನು ಸುವ್ಯವಸ್ಥೆ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ, ಜಯರಾಂ, ಸಿಬ್ಬಂದಿವರ್ಗದವರಾದ ಗಂಗಾಧರ, ಎ.ಮಹೇಶ್, ಮಂಜುನಾಥ್, ನಾಗೇಶ್, ಬಂಟಪ್ಪ, ನಟೇಶ್, ಮಹೇಶ್ ಹಾಗೂ ಪ್ರಭಾಚಂದ್ರಪ್ಪ ಸಮಾರಂಭದಲ್ಲಿ ಇದ್ದರು.

ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ 10 ಕೋಟಿ ಅನುದಾನ

ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಘೋಷಣೆ



ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಪತ್ರಿಕಾಗೋಷ್ಠಿ ನಡೆಸಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮೊದಲಾದ ಅಧಿಕಾರಿಗಳಿದ್ದರು.

ಚಾಮರಾಜನಗರ, ಮೇ 3 – ರಾಜ್ಯದಲ್ಲಿ ಅವಕಾಶ ವಂಚಿತ, ಶೋಷಿತ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರ 10 ಕೋಟಿ ರೂ. ಅನುದಾನ ಮೀಸಲಿಟ್ಟಿದೆ ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಜಿ. ಪಲ್ಲವಿ ಅವರು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಆದಿವಾಸಿ ಅಲೆಮಾರಿ ಮತ್ತು ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಮುಖ್ಯಮಂತ್ರಿಗಳ ಕನಸಿನ ಕೂಸು. ಈ ನಿಟ್ಟಿನಲ್ಲಿ ಎಲ್ಲಾ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗಾಗಿ 10 ಕೋಟಿ ರೂ. ಗಳನ್ನು ಸರ್ಕಾರ ಮೀಸಲಿಟ್ಟಿದೆ ಎಂದರು.

ಜಿಲ್ಲೆಯ ಅಲೆಮಾರಿ ಸಮುದಾಯಗಳಿಗೆ 1.49 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಆದರೆ ಜಿಲ್ಲೆಯಿಂದ ಯಾವುದೇ ಯೋಜನೆ, ಕಾರ್ಯಕ್ರಮಗಳಿಗೆ ಪ್ರಸ್ತಾವನೆ ಸಲ್ಲಿಕೆಯಾಗದಿರುವುದು ವಿಷಾದನೀಯ ಸಂಗತಿ. ಅಲೆಮಾರಿ, ಅರೆ ಅಲೆಮಾರಿಗಳಿಗೆ ಮೈಕ್ರೋ ಕ್ರೆಡಿಟ್ ಪ್ರೇರಣಾ ಸಾಲ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ಉದ್ಯಮಶೀಲತಾ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ಬ್ಯಾಂಕ್‌ಗಳಲ್ಲಿ ಅಲೆಮಾರಿ ಜನರಿಗೆ ಸಾಲ ಸೌಲಭ್ಯ ನೀಡಲು ಜಾತಿ ಪ್ರಮಾಣಪತ್ರ ಹಾಗೂ ಆಧಾರ್ ಕಾರ್ಡ್ ಹೊರತುಪಡಿಸಿ ಉಳಿದ ಯಾವುದೇ ದಾಖಲೆಗಳಿಂದ ವಿನಾಯಿತಿ ನೀಡಲಾಗಿದೆ. ಶಿಕ್ಷಣ ಪ್ರತಿಯೊಬ್ಬರ ಹಕ್ಕು ಆಗಿದ್ದು, ಶೇ. 10ರಷ್ಟು ಮೀಸಲಾತಿ ಕಲ್ಪಿಸಿದೆ. ಅಲೆಮಾರಿ ಜನರ ಮಕ್ಕಳಿಗೆ ವಸತಿ ಶಾಲೆಗಳು, ಕ್ರೈಸ್ ಶಾಲೆಗಳಿಗೆ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೆ ಉಚಿತವಾಗಿ ಸೇರಿಸಲು ಅವಕಾಶವಿದೆ ಎಂದು ಪಲ್ಲವಿ ಹೇಳಿದರು.

ಅಲೆಮಾರಿ ಪೋಷಕರು ಮಕ್ಕಳನ್ನು ವಸತಿ ಶಾಲೆಗಳಿಗೆ ದಾಖಲಿಸಲು ಆಸಕ್ತಿ ತೋರದಿರುವುದು ಕಂಡುಬಂದಿದೆ. ಪೋಷಕರನ್ನು ಗುರುತಿಸಿ, ಅಧಿಕಾರಿಗಳು ತಿಳಿಹೇಳಬೇಕು. ಅಂತಹ ಪೋಷಕರನ್ನು ವಿದ್ಯಾರ್ಥಿನಿಲಯಗಳಿಗೆ ಭೇಟಿ ಮಾಡಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ನಿಗಮದ ಅಧ್ಯಕ್ಷರಾದ ಜಿ. ಪಲ್ಲವಿ ತಿಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಲೆಮಾರಿ ಅರಣ್ಯವಾಸಿಗಳಿಗೆ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಮೂಲ ಸೌಲಭ್ಯಗಳನ್ನು ನೀಡುವ ಸಲುವಾಗಿ ಅರಣ್ಯ ಇಲಾಖೆ ಸಹಕಾರ ದೊಂದಿಗೆ ಹಂತ ಹಂತವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನನ್ನ ಗುರುತು–ನನ್ನ ಅಭಿಯಾನದಡಿ ಆಧಾರ್ ಕಾರ್ಡ್ ಇಲ್ಲದವರಿಗೂ ಆದ್ಯತೆ ಮೇರೆಗೆ ಅವರ ಮನೆ ಬಾಗಿಲಿಗೆ ಆಧಾರ್ ಕಾರ್ಡ್ ತಲುಪಿಸಲಾಗುತ್ತಿದೆ. ಆದಿವಾಸಿ ಅಲೆಮಾರಿ ಜನರು ಸಮಾಜದಲ್ಲಿ ಗೌರವಯುತ ಬದುಕು ಕಟ್ಟಿಕೊಳ್ಳಲು ಸೌಲಭ್ಯಗಳನ್ನು ಒದಗಿಸುವುದು ಜಿಲ್ಲಾಡಳಿತದ ಕರ್ತವ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮುನಿರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ನಿಗಮದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅನಂದ್ ಕುಮಾರ್, ಗ್ರಾಪಂ ಸದಸ್ಯ ಜಿ.ಶಿವಕುಮಾರ್, ತಹಸೀಲ್ದಾರರು, ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬ್ರಹ್ಮ ರಥೋತ್ಸವ : ಅಗತ್ಯ ಸಿದ್ಧತೆಗೆ ಎಆರ್‌ಕೆ ಸೂಚನೆ



ಬ್ರಹ್ಮರಥೋತ್ಸವ ಸಂಬಂಧ ಪೂರ್ವಭಾವಿ ಸಭೆಯನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಅಧಿಕಾರಿಗಳೊಂದಿಗೆ ನಡೆಸಿದರು.

ಚಾಮರಾಜನಗರ, ಮೇ 3–ಯಳಂದೂರು ತಾಲೂಕಿನ ಪ್ರಸಿದ್ದ ಯಾತ್ರಾಕ್ಷೇತ್ರ ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿ ರಂಗನಾಥ ಸ್ವಾಮಿಯ ಬ್ರಹ್ಮರಥೋತ್ಸವ (ದೊಡ್ಡ ಜಾತ್ರೆ) ಇದೇ ಮೇ 10 ರಂದು ನಡೆಯಲಿದ್ದು ಇದಕ್ಕಾಗಿ ಬರುವ ಭಕ್ತಾದಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಸಕಲ ಸಿದ್ಧತೆ ಕೈಗೊಳ್ಳುವಂತೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅಧಿಕಾರಿಗಳಿಗೆ ಸೂಚಿಸಿದರು.

ಬೆಟ್ಟದ ಪ್ರವಾಸಿಮಂದಿರದಲ್ಲಿಂದು ಬ್ರಹ್ಮರಥೋತ್ಸವ ಸಂಬಂಧ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಥೋತ್ಸವಕ್ಕೆ ಹೆಚ್ಚು ಭಕ್ತಾದಿಗಳು ಆಗಮಿಸುವ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಬಸ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ಕಲ್ಪಿಸಬೇಕು. ಗುಡ್ಡಗಾಡು ಅರಣ್ಯ ಪ್ರದೇಶವಾಗಿರುವುದರಿಂದ ಸುಸಜ್ಜಿತವಾದ ಬಸ್‌ಗಳನ್ನು, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬರಲು ಅನುಕೂಲವಾಗುವಂತೆ ಎಲ್ಲ ಮಾರ್ಗಗಳಿಂದಲೂ ಬಸ್ಸುಗಳ ವ್ಯವಸ್ಥೆಯಾಗಬೇಕು ಎಂದು ತಿಳಿಸಿದರು.

ಯಳಂದೂರು ಹಾಗೂ ಚಾಮರಾಜನಗರ ತಾಲೂಕು ಕಡೆಯಿಂದ ಬರುವ ದ್ವಿಚಕ್ರ ವಾಹನಗಳಿಗೆ ಚೆಕ್‌ಪೋಸ್ಟ್ ಬಳಿ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಿ, ಅಲ್ಲಿಂದ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಬಿಳಿಗಿರಿರಂಗನಬೆಟ್ಟಕ್ಕೆ ಬರಲು ಅವಕಾಶ ಮಾಡಿಕೊಡಲು ತೀರ್ಮಾನಿಸಲಾಯಿತು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ತಹಶೀಲ್ದಾರ್ ಐ.ಈ. ಬಸವರಾಜು, ಡಿವೈಎಸ್‌ಪಿ ಧರ್ಮೇಂದ್ರ, ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಶ್ರೀನಿವಾಸ್, ಗ್ರಾಪಂ ಅಧ್ಯಕ್ಷ ಮಾದೇವ, ಅರ್ಚಕ ಎ.ಎಸ್. ರವಿಕುಮಾರ್, ದೇವಾಲಯದ ಕಾರ್ಯನಿರ್ವಾಹಕಾಧಿಕಾರಿ ವೈ.ಎನ್.ಮೋಹನ್ ಕುಮಾರ್, ವ್ಯವಸ್ಥಾಪನಾ ಸಮಿತಿಯ ಸದಸ್ಯ ಕೇತಮ್ಮ, ರಾಜಣ್ಣ, ವೆಂಕಟರಾಮು, ಗ್ರಾಪಂ ಸದಸ್ಯ ಪ್ರತೀಪ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಮಹೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಚಿದಂಬರ, ಯಳಂದೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮುನಿರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ನಿಗಮದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅನಂದ್‌ಕುಮಾರ್, ತಹಶೀಲ್ದಾರರು, ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಾದಿಗರಿಗೆ ನಂಬರ್‌ಒನ್ ಕೊಡಲು ಸರ್ಕಾರ ಸಿದ್ದವಿಲ್ಲ : ಅರುಣ್‌ಕುಮಾರ್



ವಕೀಲ ಎಸ್.ಅರುಣ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ: ರಾಜ್ಯದಲ್ಲಿ ನಡೆಯುವ ಪರಿಶಿಷ್ಟ ಜಾತಿ ಗಣತಿ ಸಮೀಕ್ಷೆಯ ಮೂಲ ಉದ್ದೇಶವೇ ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡುವ ಹುನ್ನಾರವಾಗಿದ್ದು, ರಾಜ್ಯ ಸರ್ಕಾರ ಮಾದಿಗರ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್. ಅರುಣ್‌ಕುಮಾರ್ ಆರೋಪಿಸಿದರು.

ರಾಜ್ಯದಲ್ಲಿ ಮಾದಿಗರೇ ಜನಸಂಖ್ಯೆಯಲ್ಲಿ ಹೆಚ್ಚು ಇದ್ದಾರೆ ಎಂದು ನ್ಯಾಯಮೂರ್ತಿ ಸದಾಶಿವ ಆಯೋಗ, ಎ.ಜೆ.ಮಾಧುಸ್ವಾಮಿ ಸಮಿತಿ ಹಾಗೂ ಕಾಂತರಾಜು ವರದಿಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಆದರೂ ಕೂಡ ಸರ್ಕಾರ ಮಾದಿಗರಿಗೆ ಹೆಚ್ಚಿನ ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನ ಕೊಡಲು ಸಿದ್ಧವಿಲ್ಲದೆ ಹೇಗಾದರೂ ಕುತಂತ್ರ ಮಾಡಿ ಮಾದಿಗರಿಗೆ ಅನ್ಯಾಯ ಮಾಡಬೇಕೆಂದು ಪರಿಶಿಷ್ಟ ಜಾತಿ ಗಣತಿ ಸಮೀಕ್ಷೆ ಮಾಡುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರ ಏನೇ ಹುನ್ನಾರ ಮಾಡಿದರು ಅದಕ್ಕೆ ಜೀವ ಇರುವುದು ಮುಂದಿನ ರಾಷ್ಟ್ರೀಯ ಸಮೀಕ್ಷೆ ತನಕ ನೀವು ಏನೇ ಕುತಂತ್ರ ಮಾಡಿದರು 6 ತಿಂಗಳಲ್ಲೇ ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲಾಗುತ್ತದೆ ಪರಿಶಿಷ್ಟ ಜಾತಿ ಗಣತಿ ಸಮೀಕ್ಷೆಯಲ್ಲಿ ಸಮುದಾಯದವರು ಕಡ್ಡಾಯವಾಗಿ ಮಾದಿಗ ಎಂದು ಸಮೂದಿಸಬೇಕು ಎಂದರು.

ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು, ರಾಜೇಂದ್ರ ಮಾತನಾಡಿ, ಜಿಲ್ಲೆಯ ಕಾಡಂಚಿನ ಪ್ರದೇಶದಲ್ಲಿರುವ ಮಾದಿಗ ಸಮುದಾಯದ ಗ್ರಾಮಗಳನ್ನು ಗುರುತಿಸಿ ಮನೆಮನೆಗೂ ಸಮೀಕ್ಷೆ ಒಳಪಡಿಸಬೇಕು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಉಪಾಧ್ಯಕ್ಷ ಎಂ.ಶಿವಕುಮಾರ್ ಬೆಳತ್ತೂರು, ಎಂ.ದಾಸಯ್ಯ ಹಾಜರಿದ್ದರು.

'ಮೈಸೂರು ಮಿತ್ರ' 46ನೇ ವಾರ್ಷಿಕೋತ್ಸವ ಕಥಾಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನಿತ ಕಥೆ



ಯಶಸ್ವಿನಿ.ಎಂ.ಎನ್

ಮೊ: 9513881195

ನವಿಲುಗರಿ



> ವಸ್ತುಗಳ ಮೇಲಿನ ವ್ಯಾಮೋಹವೇ ಹಾಗೆ. ನೆಚ್ಚಿನ ಕೈ ಚೀಲ ತಾನು ಖರೀದಿಸಿದರೆ ಸ್ನೇಹಿತರಿಗೆಲ್ಲ ತಿಳಿಸಬಹುದು, ಸಾಮಾಜಿಕ ಜಾಲತಾಣದಲ್ಲಿ ಹಾಕಿ ಹೆಚ್ಚು ಲೈಕ್ಸ್ ಪಡೆಯಬಹುದು, ಪ್ರಸಿದ್ಧ ನಟಿಯರ "ವಾಟ್ಸ್ ಇನ್ ಮೈ ಬ್ಯಾಗ್" ಸರಣಿ ನೋಡಿ ಆಕರ್ಷಿತಳಾಗಿದ್ದಳು. ಎಲ್ಲಕ್ಕಿಂತ ಮುಖ್ಯವಾಗಿ ತನಗೋಸ್ಕರ ತಾನು ದುಡಿದ ದುಡ್ಡಿನಿಂದಲೇ ಖರೀದಿಸಬೇಕು ಎಂಬ ತುಡಿತ. ಎರಡು ವರ್ಷ ನೆತ್ತರ ಸುರಿಸಿ ಬ್ಯಾಂಕ್ ಖಾತೆಗೆ ಬಂದು ಉಳಿದುಕೊಂಡಿದ್ದ ಹಣದಲ್ಲಿದ್ದದ್ದೇ ಮೂವತ್ತು ಸಾವಿರ! ಈ ಹ್ಯಾಂಡ್ ಬ್ಯಾಗ್ ಅನ್ನು ಈಗ ಖರೀದಿಸದಿದ್ದರೆ ಮತ್ತೆ ಆಗುವುದಿಲ್ಲವೆಂದು ನಿರ್ಧರಿಸಿದ ಸೂರ್ಯಕಾಂತಿ ತನ್ನ ಬಳಿಯಿದ್ದ ಚಿನ್ನ ದುಂಗರವ ಅಡವಿಟ್ಟು ದುಡ್ಡು ಹೊಂದಿಸಿಕೊಳ್ಳತೊಡಗಿದಳು. ಈ ಐಲು ಆಸೆಯನ್ನು ಗೆಳೆಯ ಮಧು ಬಳಿ ಹೇಳಿಕೊಂಡಿದ್ದಳು. ಮೊದಲಾತ ಬೈದು ಸುಮ್ಮನಾಗಿದ್ದರೂ ನಂತರ ಆತ ಖರೀದಿಸಿದ ಎಂಬತ್ತು ಸಾವಿರ ಬೆಲೆಯ ಐ ಫೋನ್ ಕಂಡು ಬೆರಗಾಗಿದ್ದ ಸೂರ್ಯ ಕಾಂತಿ ಕೈಚೀಲದ ಆಸೆ ಕೈಬಿಟ್ಟಂತೆ ಕಾಣಲಿಲ್ಲ.

ಗಾಢ ನೀಲಿ ಬಣ್ಣದಲ್ಲಿರುವ ವಿವಿಧ ವೃತ್ತಾಕಾರದ ಚಿತ್ತಾರದ ವೃತ್ತದ ಸುತ್ತಲೂ ಗುಲಾಬಿ ಬಣ್ಣದ ದಳ, ದಳದ ಇಕ್ಕೆಲಗಳಲ್ಲೂ ಹಸಿರು ರಂಗಿನ ಗೀಟು. ದೂರದಿಂದ ನೋಡಿದರೆ ನವಿಲುಗರಿಯಂತೇ ಕಂಗೊಳಿಸುವ ದಾರಗಳ ವಿನ್ಯಾಸ. ಈ ವಿನ್ಯಾಸವಿರುವ ಶ್ರೇಷ್ಠಮಟ್ಟದ ಕೈಚೀಲವನ್ನು (ಹ್ಯಾಂಡ್ ಬ್ಯಾಗ್) ಸೂರ್ಯಕಾಂತಿಯ ನೆಚ್ಚಿನ ನಟಿ ಹೋಟೆಲ್‌ನಿಂದ ಹೊರಬರುವಾಗ ಹಿಡಿದಿದ್ದರು. ಆಕೆಯೊಂದಿಗೆ ಸೆಲ್ಫಿ ತೆಗೆಸಿಕೊಳ್ಳಲು ಹಪಹಪಿಸುತ್ತಿದ್ದ ಪುಟ್ಟ ಮಕ್ಕಳ ಹಿಂಡು. ಕೈಗಳಲ್ಲಿ ತರಾವರಿ ಲೇಖನಿಗಳ ಹಿಡಿದು ಕಂಗಳಲ್ಲೇ ದಾರಿಹೋಕರನ್ನು ಅಡ್ಡಗಟ್ಟಿ ಪರಿಪರಿಯಾಗಿ ಬೇಡುತ್ತಿದ್ದ ಮಕ್ಕಳ ಹಿಂಡು. ಅವರಿಂದಾಚೆಗೆ ನಟಿಯ ಫೋಟೋಗಳ ಕ್ಲಿಕ್ಕಿಸುವಲ್ಲಿ ನಿರತರಾಗಿದ್ದ ಅಭಿಮಾನಿಗಳು. ಸೂರ್ಯಕಾಂತಿಗೆ ಈ ನಟಿಯೆಂದರೆ ಅಚ್ಚುಮೆಚ್ಚು.

ಮರುದಿನ ರೀಲ್ಸ್ ನಲ್ಲಿ ಪೂರ್ತಿ ಆಕೆಯದ್ದೇ ಸುದ್ದಿ. ಆಕೆಯೊಂದಿಗೆ ಇದ್ದವರಾರು? ಆಕೆ ಎಷ್ಟು ದುಡ್ಡಿನ ಬಟ್ಟೆ? ಬ್ಯಾಗು? ಚಪ್ಪಲಿ ಧರಿಸಿದ್ದಳು ಎಂಬ ವಿಚಾರಗಳ ಕುರಿತ ಚರ್ಚೆ. ನಟಿಯ ಕೈಯಲ್ಲಿರುವ ಕೈಚೀಲವನ್ನೇ ಖರೀದಿಸಬೇಕೆಂಬ ಹುಚ್ಚು ಹಂಬಲ ಸೂರ್ಯಕಾಂತಿಯದ್ದು. ನಲವತ್ತು ಸಾವಿರ ಬೆಲೆಯ ಪ್ರತಿಷ್ಠಿತ ಕಂಪನಿಯ ಕೈಚೀಲವದು.

ಸಾಮಾಜಿಕ ಜಾಲತಾಣದಲ್ಲಿ ಕಂಟೆಂಟ್ ಕ್ರಿಯೇಟರ್ ಆಗಿರುವ ಯುವತಿ ಸೂರ್ಯಕಾಂತಿ ಗಟ್ಟಿಗಿತ್ತಿ. ಮೊದಲು ಪುಟ್ಟ ಕಂಪನಿಯಲ್ಲಿ ಕಂಪ್ಯೂಟರ್ ಜೊತೆಗಿನ ಕೆಲಸವನ್ನು ಗಿಟ್ಟಿಸಿಕೊಂಡಿದ್ದಾಕೆ. ನಂತರ ತಾನೇ ಹೊಸದಾಗಿ ಸ್ವತಂತ್ರವಾಗಿ ಏನಾದರೂ ಸಾಧಿಸಬೇಕೆಂದುಕೊಂಡವಳು. ಹೊಸ, ಹೊಸ ಜಾಗಗಳಿಗೆ ಭೇಟಿಯಿತ್ತು, ಟ್ರಾವೆಲ್ ವೀಡಿಯೊಗಳನ್ನು ಅಂತರ್ಜಾಲದಲ್ಲಿ ಹಂಚಿಕೊಳ್ಳುತ್ತಾ ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿಸಿಕೊಳ್ಳುತ್ತಾ ಬಂದಷ್ಟು ಹಣ ಕೂಡಿಡುತ್ತ ದೊಡ್ಡ ಕನಸುಗಳ ಹೊತ್ತು ಸ್ನೇಹಿತರೊಂದಿಗೆ ಸಂಚರಿಸುತ್ತಾ ಜೀವಿಸುವ ಸೂರ್ಯಕಾಂತಿಗೆ ಆ ಕೈ ಚೀಲ ವಿಪರೀತವೇ ಆಕರ್ಷಿಸಿತ್ತು. ನವಿಲುಗರಿಯನ್ನು ಪುಸ್ತಕದಲ್ಲಿಟ್ಟರೆ ಓದು ತಲೆಗಿಳಿಯುತ್ತದೆ. ಹಾಗೆಯೇ ಧನವನ್ನು ದುಪ್ಪಟ್ಟಾಗಿಸುತ್ತದೆಂಬ ಆಕೆಯ ಅಜ್ಜಿಯ ನಂಬಿಕೆ, ಸೂರ್ಯಕಾಂತಿಯ ಮನದಲ್ಲಿ ಅಚ್ಚಳಿದಿತ್ತು. ಆ ಕೈಚೀಲ ನವಿಲುಗರಿಯ ಹೋಲುತ್ತದೆ ಎಂಬ ಅನಿಸಿಕೆ ಆಕೆಯದ್ದು.

ಚಿಕ್ಕವಯಸಿನಲ್ಲಿ ತಂದೆ-ತಾಯಿ ವಿದ್ಯುತ್ ಪ್ರವಹಿಸಿ ತೀರಿಕೊಂಡಿದ್ದರೆ, ಸೂರ್ಯಕಾಂತಿಯ ಅಣ್ಣ ಕುಡಿತಕ್ಕೆ ದಾಸನಾಗಿ ಊರಿನ ಕಾಲೇಜು ಒಂದರಲ್ಲಿಯೇ ಓದುತ್ತಿದ್ದ ಯುವತಿಯ ಹಿಂದೆ ಬಿದ್ದು ಲವ್ವು-ಗಿವ್ವು ಎಂಬ ವ್ಯೂಹದಲ್ಲಿ ಒದ್ದಾಡುತ್ತ ಕುಡಿದ ಮತ್ತಿನಲ್ಲಿ ಒಮ್ಮೆ ಡ್ರೈವಿಂಗ್ ಮಾಡಿ ಒಬ್ಬ ಬಾಲಕನ ದಾರುಣ ಸಾವಿಗೆ ಕಾರಣನಾಗಿ, ತಾನು ಪ್ರೀತಿಸುತ್ತಿದ್ದ ಯುವತಿ ಯಿಂದ ದೂರನಾದ. ಇಪ್ಪತ್ತರ ಹರೆಯದ ತಂಗಿ ಸೂರ್ಯಕಾಂತಿಯನ್ನು ಒಬ್ಬಂಟಿಯಾಗಿ ಬಿಟ್ಟು ಜೈಲು ಸೇರಿದ.

ಕೀಚಕರ ಬಿಸಿ ಕಂಗಳು ಯುವತಿ ಸೂರ್ಯಕಾಂತಿಯ ಹಸಿ ಮೈ ಮೇಲೆ ಹರಿದಾಡತೊಡಗಲು ಹೆಚ್ಚು ದಿನ ಬೇಕಾಗಲಿಲ್ಲ. ದೂರದ ಸಂಬಂಧಿಯಾಗಿದ್ದ ಅಜ್ಜಿ ಸಾಕವ್ವ ನಗರಕ್ಕೆ ಅವಳನ್ನು ಕರೆದೊಯ್ದು ತನ್ನ ಮನೆಯವರ ಕಾಡಿ ಬೇಡಿ ಸೂರ್ಯಕಾಂತಿಯ ಶಿಕ್ಷಣದ ದಿಕ್ಕನ್ನು ಬದಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸರ್ಕಾರಿ ಕಾಲೇಜಿನಲ್ಲಿ ಬಿ.ಎಸ್ಸಿ ಮುಗಿಸಿದ ಸೂರ್ಯಕಾಂತಿ ಪುಟ್ಟ ಕಂಪೆನಿಯಲ್ಲಿ ನೌಕರಿ ಗಿಟ್ಟಿಸುವ ಮೊದಲೇ ಕಾಯಿಲೆ ಬಿದ್ದ ಸಾಕವ್ವ ತೀರಿಕೊಂಡಳು. ಅವಳು ಪಿಜಿಯಲ್ಲೇ ಇರಲು ಪ್ರಾರಂಭಿಸಿದಳು.

ಅಲ್ಲಿ-ಇಲ್ಲಿ ಇದ್ದ ಪುಟ್ಟ ಚಿನ್ನದೊಡವೆ ಅಡವಿಟ್ಟು ಅಂತರ್ಜಾಲಕ್ಕೆ ಮುಖಾಮುಖಿಯಾಗುತ್ತಾ ಪಿಜಿಯಲ್ಲೇ ಉಳಿದುಕೊಂಡು, ಕೈಲಾದಷ್ಟು ಕಾಸು ಸಂಪಾದಿಸುತ್ತಿದ್ದಳು. ಕೆಲವೊಮ್ಮೆ ಕೀಳು ಮಟ್ಟದ ಕಮೆಂಟುಗಳು ಸೂರ್ಯಕಾಂತಿಯ ಮನಸ್ಸನ್ನು ಇರಿದಾಗಲು ಜೊತೆಯಾಗುತ್ತಿದ್ದ ಪ್ರೀತಿಯ ಎಮೋಜಿಗಳು ಜೀವ ನೀಡುತ್ತಿದ್ದವು. "ಈಗಿನ ಅಂತರ್ಜಾಲದ ತರಂಗಗಳೇ ಹಾಗೆ, ದೈತ್ಯ ಬಲೆ ಪುಟ್ಟ ಮೀನುಗಳ ಮಾನ ಕಸಿಯುತ್ತದೆ. ಸದಾ ಕಾಂಚಾಣದ ಮುತ್ತುಗಳನ್ನು ಅರಸುವ ಕಾಯಕ ಕೆಲವು ಮೀನುಗಳದ್ದು . ಕೆಲವು ನಕಲಿ, ಕೆಲವು ಅಸಲಿ! ಸಮುದ್ರದಲ್ಲಿ ಕಿಕ್ಕಿರಿದು ತುಂಬುವ ಪ್ಲಾಸ್ಟಿಕ್ ತ್ಯಾಜ್ಯದೊಂದಿಗೆ ಮಾಯಾ ಡಬ್ಬಿಯೊಳಗಿನ ಸಾಮಾಜಿಕ ಅಭಿಪ್ರಾಯಗಳು ನಾರುವ ಸರದಿ. ಸೆಟೆದುಕೊಂಡು ತೇಲುವ ಅಮಾಯಕ ಶವಗಳಂತೆ ವಿನಿಮಯವಾಗದ ವಿನಿಮಯವಾಗಬೇಕಾದ ವಿಚಾರ. ಖಾತೆಗಳ ತಂತು ಹಿಡಿದು ರೀಲ್ಸ್‌ನಲ್ಲಿ ನೇತಾಡುವ ಆಧುನಿಕ ಜಲಚರಗಳು ನಾವೆಲ್ಲ" ಎಂದೊಮ್ಮೆ ತನ್ನ ದಿನಚರಿಯ ಪುಸ್ತಕದ ಹಾಳೆಯಲ್ಲಿ ದಾಖಲಿಸಿದ್ದಳು ಸೂರ್ಯಕಾಂತಿ. ಆ ಸಾಲುಗಳಲ್ಲಿ ವ್ಯಂಗ್ಯವಿತ್ತೋ ಅಥವಾ ತಾನು ಸಹ ಅದೇ ಸಮುದ್ರದಲ್ಲಿ ಈಜಿ ಜಯಿಸಬೇಕೆಂಬ ಹಠವಿತ್ತೋ? ಯಾರಿಗೆ ಗೊತ್ತು? ಒಳಿತು ಕೆಡಕು ಎರಡರ ಬಗೆಗೂ ಅರಿವಿತ್ತೆ?

ವಸ್ತುಗಳ ಮೇಲಿನ ವ್ಯಾಮೋಹವೇ ಹಾಗೆ. ನೆಚ್ಚಿನ ಕೈ ಚೀಲ ತಾನು ಖರೀದಿಸಿದರೆ ಸ್ನೇಹಿತರಿಗೆಲ್ಲ ತಿಳಿಸಬಹುದು, ಸಾಮಾಜಿಕ ಜಾಲತಾಣದಲ್ಲಿ ಹಾಕಿ ಹೆಚ್ಚು ಲೈಕ್ಸ್ ಪಡೆಯಬಹುದು, ಪ್ರಸಿದ್ಧ ನಟಿಯರ "ವಾಟ್ಸ್ ಇನ್ ಮೈ ಬ್ಯಾಗ್" ಸರಣಿ ನೋಡಿ ಆಕರ್ಷಿತಳಾಗಿದ್ದಳು. ಎಲ್ಲಕ್ಕಿಂತ ಮುಖ್ಯವಾಗಿ ತನಗೋಸ್ಕರ ತಾನು ದುಡಿದ ದುಡ್ಡಿನಿಂದಲೇ ಖರೀದಿಸಬೇಕು ಎಂಬ ತುಡಿತ. ಎರಡು ವರ್ಷ ನೆತ್ತರ ಸುರಿಸಿ ಬ್ಯಾಂಕ್ ಖಾತೆಗೆ ಬಂದು ಉಳಿದುಕೊಂಡಿದ್ದ ಹಣದಲ್ಲಿದ್ದದ್ದೇ ಮೂವತ್ತು ಸಾವಿರ! ಈ ಹ್ಯಾಂಡ್ ಬ್ಯಾಗ್ ಅನ್ನು ಈಗ ಖರೀದಿಸದಿದ್ದರೆ ಮತ್ತೆ ಆಗುವುದಿಲ್ಲವೆಂದ ನಿರ್ಧರಿಸಿದ ಸೂರ್ಯಕಾಂತಿ ತನ್ನ ಬಳಿಯಿದ್ದ ಚಿನ್ನ ದುಂಗರವ ಅಡವಿಟ್ಟು ದುಡ್ಡು ಹೊಂದಿಸಿಕೊಳ್ಳತೊಡಗಿದಳು. ಈ ಐಲು ಆಸೆಯನ್ನು ಗೆಳೆಯ ಮಧು ಬಳಿ ಹೇಳಿಕೊಂಡಿದ್ದಳು. ಮೊದಲಾತ ಬೈದು ಸುಮ್ಮನಾಗಿದ್ದರೂ ನಂತರ ಆತ ಖರೀದಿಸಿದ ಎಂಬತ್ತು ಸಾವಿರ ಬೆಲೆಯ ಐ ಫೋನ್ ಕಂಡು ಬೆರಗಾಗಿದ್ದ ಸೂರ್ಯಕಾಂತಿ ಕೈಚೀಲದ ಆಸೆ ಕೈಬಿಟ್ಟಂತೆ ಕಾಣಲಿಲ್ಲ.

ಸೂರ್ಯಕಾಂತಿ ನಡೆದು ಬಂದ ಹಾದಿ ಸಮಾಜದ ಹೀಯಾಳಿಕೆ, ಒಮ್ಮೆ ನದಿಗೆ ಜಿಗಿದು ಜೀವ ಬಿಡುವ ಯೋಚನೆ ಆಲಸ್ಯ, ಅವಮಾನಿಸುತ್ತಿದ್ದ ಸ್ನೇಹಿತರ ಸಂಘ, ಮುಟ್ಟಾದ ದಿನಗಳಲ್ಲಿ ಅಂಗಲಾಚಿ ದೊರಕಿಸಿಕೊಳ್ಳುತ್ತಿದ್ದ ನ್ಯಾಪ್ ಕಿನ್, ಸಾಕವ್ವ ತೀರಿಕೊಂಡಾಗ ಆದ ಆಘಾತ ಒಂದೆಡೆ. ಸ್ನೇಹಿತರೊಂದಿಗೆ ಟ್ರಿಪ್‌ನಲ್ಲಿದ್ದಾಗ ರೆಸಾರ್ಟ್ ಒಂದರಲ್ಲಿ ಸಿಕ್ಕ ವ್ಯಕ್ತಿ ಮಧು. ಸ್ವಂತ ಪೀಠೋಪಕರಣಗಳ ಅಂಗಡಿ ಇದೆ ಅಂತ ಹೇಳಿಕೊಂಡಿದ್ದ ಆತನೊಂದಿಗಿನ ಸ್ನೇಹ, ಯೂಟ್ಯೂಬ್‌ನಿಂದ ಬರುತ್ತಿದ್ದ ಹಣ, ಹೊಸ ಸ್ನೇಹಿತರ ಬಳಗ, ಹೊಸ ಜೀವನ ಮತ್ತೊಂದೆಡೆ.

ಎಲ್ಲವೂ ನಾವು ಅಂದುಕೊಂಡಂತೆ ಆಗಿದ್ದರೆ ವಿಧಿ, ವಂಚನೆ, ದುರದೃಷ್ಟ ಎಂಬ ಪದಗಳಿಗೆ ಅರ್ಥವೇ ಇರುತ್ತಿರಲಿಲ್ಲ. ಸೂರ್ಯಕಾಂತಿಯಿಂದಾದ ಆ ಒಂದು ತಪ್ಪು ಆಕೆಯ ಲೆಕ್ಕಾಚಾರವನ್ನೆಲ್ಲಾ ತಲೆಕೆಳಗಾಗಿಸಿತ್ತು. ಸಮಸ್ಯೆಗಳ ದ್ವೀಪದೊಳಗಡಿಯಿಡಲು ದೊರೆತ ಅಪರಿಚಿತ ಆಹ್ವಾನದಂತೆ ಕಂಡಿತು. ಹೀಗೆ ಒಮ್ಮೆ ಸ್ನೇಹಿತೆ ಸಿಂಚನಾಳ ಲ್ಯಾಪ್‌ಟಾಪ್ ಪರದೆಯ ಕಣ್ಣಾಡಿಸುವಾಗ ಪ್ರತಿಷ್ಠಿತ ಕಂಪನಿಯ ಕೈಚೀಲ ಪುನಃ ಸ್ಟಾಕ್‌ನಲ್ಲಿರುವ ಅದೇ ವಿನ್ಯಾಸದ ಅದೇ ಬಣ್ಣದ ಬ್ಯಾಗು ಮೀನುಗಳ ಹಿಡಿಯಲು ಸಮುದ್ರಕ್ಕೆ ಬಲೆ ಎಸೆದ ಮೀನುಗಾರನಂತೆಯೇ ಸೂರ್ಯಕಾಂತಿಯ ಗಮನವನ್ನೆಲ್ಲ ಸೆರೆಹಿಡಿಯಿತು.

ಒಂದು ನಿಮಿಷವು ವ್ಯರ್ಥ ಮಾಡದ ಸೂರ್ಯಕಾಂತಿ ಪಟಪಟನೇ ವೆಬ್‌ಸೈಟ್ ತೆರೆದು ಹ್ಯಾಂಡ್‌ಬ್ಯಾಗ್ ವಿವರಗಳನ್ನೆಲ್ಲ ಸೋಸಿ ತನ್ನ ಹೆಸರು ವಿಳಾಸಗಳನ್ನೆಲ್ಲ ಅಪ್ಲೋಡ್ ಮಾಡತೊಡಗಿದಳು. ಆ ಜಾಲತಾಣ ಅಸಲಿಯೋ, ನಕಲಿಯೋ ತಿಳಿದುಕೊಳ್ಳುವ ಗೋಜಿಗೆ ಹೋಗದೇ ಕಂಗಳಿಗೆ ರಾಚುತ್ತಿದ್ದ ನೋಟಿಫಿಕೇಶನ್‌ಗಳ ಬದಿಗೆ ಸರಿಸಿ ತನ್ನ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನೊಮ್ಮೆ ಪರಿಶೀಲಿಸಿ ವಿವರಗಳನ್ನು ತುಂಬತೊಡಗಿದಳು. ತನ್ನ ಪಿಜಿ ವಿಳಾಸ, ಸ್ನೇಹಿತರ ಮಧು ಮನೆಯ ವಿಳಾಸ, ಇ ಮೇಲ್ ನಮೂದಿಸಿ ಹಣ ಪೇ ಮಾಡಬೇಕೆನ್ನುವ ಮೊದಲು ಆಕೆಯ ಚರವಾಣಿಗೆ ಬಂತೊಂದು ಕರೆ. ಅತ್ತಲಿಂದ ಕರೆ ಮಾಡಿದಾತ ಆಂಗ್ಲ ಭಾಷೆಯಲ್ಲಿ ಮಾತನಾಡಿದ. ಜಾಲತಾಣದಲ್ಲಾಗಿರುವ ತಾಂತ್ರಿಕ ಸಮಸ್ಯೆಯ ಬಗ್ಗೆ ತಿಳಿಸಿದ. ಅಪರಿಚಿತ ಕಳುಹಿಸುವ ಲಿಂಕ್ ನಲ್ಲಿಯೇ ಹಣ ವರ್ಗಾವಣೆ ಮಾಡಬೇಕೆಂಬುದನ್ನು ತೃಪ್ತಿಕರವಾದ ರೀತಿಯಲ್ಲಿಯೇ ಹೇಳಿ ಆ ಅಪರಿಚಿತ ಸೂರ್ಯಕಾಂತಿಯ ನಂಬಿಕೆಯನ್ನು ಗಳಿಸಿದ. ಈ ಸಮಯದಲ್ಲಿ ಸೂರ್ಯಕಾಂತಿಯ ಬಳಿ ಬಂದ ಸ್ನೇಹಿತೆ ಸಿಂಚನ ಮೇಜಿನ ಮೇಲೆ ಸೇಬಿನ ಜ್ಯೂಸ್ ಇಟ್ಟು ಪಕ್ಕದಲ್ಲಿ ಆರು ಕ್ರೀಂ ಬಿಸ್ಕತ್ತುಗಳನ್ನಿಟ್ಟು ಅಡುಗೆ ಕೋಣೆಗೆ ಹೋದಳಾದರೂ ಮುಂದೆ ಜರುಗುವ ಅನಾಹುತದ ಸುಳಿವು ಆಕೆಗೆ ಕಿಂಚಿತ್ತೂ ಇರಲಿಲ್ಲ. ಬಂದ ಕ್ಯೂ.ಆರ್ ಕೋಡ್‌ನಿಂದ ಹಣ ವರ್ಗಾಯಿಸದ ಸೂರ್ಯಕಾಂತಿ ಬಂದ ಓಟಿಪಿ ಸಹ ಸರಿಯಾಗಿ ನೋಡಿ ಹೇಳಿದ ನಂತರ ಕಂಪನಿಯ ಜಾಲತಾಣದಿಂದ ಯಾವುದೇ ಸಂದೇಶ ರವಾನೆಯಾಗಲಿಲ್ಲ. ತಾನು ಮೋಸ ಹೋದ ವಿಚಾರ ತಿಳಿಯಲು ಸೂರ್ಯಕಾಂತಿಗೆ ಒಂದು ತಿಂಗಳು ಬೇಕಾಯಿತು.

ದಿನಕರನಂತೆಯೇ ಸೆಳದಿದ್ದ ಕೈಚೀಲದತ್ತಲೇ ಅಲ್ಲವೇ ಸೂರ್ಯಕಾಂತಿ ಅರಳಿದ್ದು! ಇತ್ತ ಹ್ಯಾಂಡ್‌ಬ್ಯಾಗ್ ಕೂಡ ಕೈಸೇರಲಿಲ್ಲ, ಅತ್ತ ಕಷ್ಟಪಟ್ಟು ಗಳಿಸಿದ ಹಣವೆಲ್ಲವೂ ವಂಚಕರ ಪಾಲಾಯಿತು. ಸೂರ್ಯಕಾಂತಿಯ ಸ್ಥಿತಿ ಕಂಡು ಮರುಗಿದ ಸಿಂಚನ ಸ್ನೇಹಿತೆ ಹಾಗೂ ಸ್ನೇಹಿತ ಮಧು ಆಕೆಗೆ ಸಮಾಧಾನಪಡಿಸುವ ಕೆಲಸಕ್ಕಿಳಿದರು.


ಮಾನಸಿಕವಾಗಿ ಕುಗ್ಗಿದ್ದ ಸ್ನೇಹಿತೆಯನ್ನು ಮೊದಲಿನ ಹಾಗೆ ಮಾಡಬೇಕೆಂಬ ಕಾಳಜಿಯನ್ನು ತೋರುವಲ್ಲಿ ಮಧು ಯಶಸ್ವಿಯಾಗ ತೊಡಗಿದ. ಆಕೆಯ ನಂಬಿಕೆಯ ಗಳಿಸಿದ. ಕೈಚೀಲ ವಂಚನೆಯ ಸುದ್ದಿ ದಿನಪತ್ರಿಕೆಗಳಲ್ಲಿ ಪ್ರಕಟವಾಯಿತು. ಸೈಬರ್ ಅಪರಾಧದ ಫೈಲ್‌ನಲ್ಲಿ ದಾಖಲಾಯಿತು. ಇದಾದ ವಾರದ ಬಳಿಕವೇ ಸೂರ್ಯಕಾಂತಿಗೆ ಮತ್ತೊಂದು ಆಘಾತ ಕಾದಿತ್ತು!

ಹುಟ್ಟಿಲ್ಲದ ತೆಪ್ಪದಲ್ಲಿ ಅಲೆಯುತ್ತಿದ್ದ ಸೂರ್ಯಕಾಂತಿಯ ತನ್ನ ದೋಣಿಯಲ್ಲಿ ಕೂರಿಸಿಕೊಂಡ ಸ್ನೇಹಿತಾ ಮಧು ಹೊರಟಿದ್ದಂತೂ ಸಾಗರದಾಚೆಗಿನ ಹೊಸ ಮಣ್ಣಿನತ್ತ ತನ್ನೂರಿನತ್ತ. ಮಾಂಸ ಮಾರಾಟದ ವ್ಯವಹಾರದಲ್ಲಿ ಪಳಗಿದ್ದ ಈತ ಸಮುದ್ರಕನ್ಯೆಯ ಸೆರೆ ಹಿಡಿಯುವಂತೆ ಸೂರ್ಯಕಾಂತಿಯ ತನ್ನತ್ತ ಸೆಳೆದು ದೈತ್ಯ ಹಡಗಿನಲ್ಲಿ ಬಿಟ್ಟು, ಆಕೆಯನ್ನು ಮಾರಿ ಸಹಜ ಬದುಕಿನತ್ತ ಹೊರಳಿದ. ಉಪ್ಪುಪ್ಪು ಅಲೆಗಳ ಗಮನ ಬೆರಗಾಗಿ ತೇಲುತ್ತಿದ್ದ ನವಿಲುಗರಿಯತ್ತ ಹೊರಳಿತು.


ಮಕ್ಕಳ ಚಿತ್ರಕಥೆ
ಹೀಗೊಂದು ರೋಚಕ ನೈಜ ಘಟನೆ...!

■ಹೆಚ್.ಜಿ.ಎನ್.ಪ್ರಸಾದ್


ಮೊ. 98453 76199




ಒಬ್ಬ ಹುಡುಗ ನೀರಿನಲ್ಲಿ ಮುಳುಗಿ ಒದ್ದಾಡುತ್ತಿದ್ದ. ಆತನ ಕಾಪಾಡಿ...ಕಾಪಾಡಿ ಎನ್ನುತ್ತಿದ್ದ ಕೂಗು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಬಡ ರೈತನ ಕಿವಿಗೆ ಕೇಳಿಸುತ್ತದೆ. ಒಂದು ದೊಡ್ಡ ಮರದ ದಿಮ್ಮಿ ಹಿಡಿದು ಅಲ್ಲಿಗೆ ಓಡೋಡಿ ಬರುತ್ತಾನೆ. ತನ್ನ ಪ್ರಾಣವನ್ನೂ ಲೆಕ್ಕಿಸದೇ ಆ ಬಾಲಕನಿಗೆ ಸಹಾಯ ಮಾಡುತ್ತಾನೆ. ಮುಳುಗುತ್ತಿದ್ದವನನ್ನ ಮೇಲೆತ್ತುತ್ತಾನೆ.




ಮರುದಿನ "ಫ್ಲೆಮಿಂಗ್" ಹೆಸರಿನ ಬಡ ರೈತನ ಮುಂದೆ ಐಷಾರಾಮಿ ಕಾರೊಂದು ನಿಲ್ಲುತ್ತದೆ. ಅದರಿಂದ ಒಬ್ಬ ಶ್ರೀಮಂತ ವ್ಯಕ್ತಿ ಕೆಳಗಿಳಿಯುತ್ತಾನೆ. ಆ ರೈತನಿಗೆ ಹೇಳುತ್ತಾನೆ "ನೀನು ನಿನ್ನೆ ಒಬ್ಬ ಹುಡುಗನನ್ನ ಕಾಪಾಡಿದೆ ಅಲ್ಲವಾ ...ಆ ಹುಡುಗನ ತಂದೆ ನಾನು, ನನ್ನ ಹೆಸರು ರ‍್ಯಾಂಡೋಲ್ಫ್ ಚರ್ಚಿಲ್" ಎಂದು ಹೇಳುತ್ತಾನೆ.




ನನ್ನ ಮಗನ ಪ್ರಾಣ ಉಳಿಸಿದ್ದಕ್ಕಾಗಿ ನಿಮಗೆ ಸಹಾಯ ಮಾಡಲು ಇಷ್ಟಪಡುತ್ತೇನೆ ಎಂದು ಹೇಳುತ್ತಾನೆ ಅದಕ್ಕೊಪ್ಪದ ರೈತ ನಾನು ಮಾಡಿದ ಸಹಾಯಕ್ಕೆ ಹಣವನ್ನು ಮಾತ್ರ ಪಡೆಯುವುದಿಲ್ಲಾ ಎನ್ನುತ್ತಾನೆ ಅದೇ ಸಮಯಕ್ಕೆ ಜೋಪಡಿಯಿಂದ ಬಂದ ರೈತನ ಮಗನತ್ತ ಆ ಶ್ರೀಮಂತನ ಕಣ್ಣು ಹೋಗುತ್ತದೆ.



ಕೂಡಲೇ ಅವನಿಗೆ ಒಂದು ಐಡಿಯಾ ಹೊಳೆಯುತ್ತದೆ. ಆಗಲಿ, ನಿನಗೆ ಹಣದ ಸಹಾಯ ಬೇಡವೆಂದರೂ ಪರವಾಗಿಲ್ಲ. ಆದರೆ ನಿನ್ನ ಮಗನ ವಿದ್ಯಾಭ್ಯಾಸದ ಖರ್ಚು-ವೆಚ್ಚವನ್ನು ನಾನೇ ಭರಿಸುತ್ತೇನೆ. ಅವನ ಭವಿಷ್ಯಕ್ಕೆ ಸಹಾಯವಾಗುತ್ತದೆ ಎಂದು ಹೇಳುತ್ತಾನೆ. ಅದಕ್ಕೆ ರೈತ ಸಮ್ಮತಿಸುತ್ತಾನೆ.




ಹೀಗಾಗಿ ಆ ಬಡ ರೈತನ ಮಗನಿಗೆ ಪ್ರಪಂಚದ ಹೆಸರಾಂತ ಶಾಲೆಗಳಲ್ಲಿ ಕಲಿಯುವ ಅವಕಾಶ ಸಿಗುತ್ತದೆ. ಮುಂದೆ ರೈತನ ಮಗ "ಪೆನ್ಸಿಲಿನ್" ಆವಿಷ್ಕಾರ ಮಾಡಿ, "ಸರ್ ಅಲೆಕ್ಸಾಂಡರ್ ಫ್ಲೆಮಿಂಗ್" ಹೆಸರಿನಲ್ಲಿ ಜಗತ್ ಪ್ರಸಿದ್ಧನಾಗುತ್ತಾನೆ. ಆದರೆ ಈ ಕಥೆ ಇಲ್ಲಿಗೇ ಮುಗಿಯುವುದಿಲ್ಲ.



ಸ್ವಲ್ಪ ವರ್ಷಗಳ ನಂತರ ಆ ಶ್ರೀಮಂತ ವ್ಯಕ್ತಿಯ ಮಗನಿಗೇ "ನ್ಯುಮೋನಿಯ" ಬರುತ್ತದೆ ಆತನ ಜೀವ ಅಲೆಕ್ಸಾಂಡರ್ ಫ್ಲೆಮಿಂಗ್ ಆವಿಷ್ಕರಿಸಿದ "ಪೆನ್ಸಿಲಿನ್" ನಿಂದ ಉಳಿಯುತ್ತದೆ. ಆ ಶ್ರೀಮಂತ ವ್ಯಕ್ತಿಯ ಮಗನ ಹೆಸರು "ವಿನ್‌ಸ್ಟನ್ ಚರ್ಚಿಲ್". ಇವರು ಎರಡು ಬಾರಿ ಬ್ರಿಟನ್‌ನ ಪ್ರಸಿದ್ಧ ಪ್ರಧಾನಿಯಾಗಿದ್ದರು.

ನೀತಿ:- ಅದಕ್ಕೆ ಹೇಳುವುದು, "ಕರ್ಮ" ಎನ್ನುವುದು ತಿರುಗಿ ಬಂದೇ ಬರುತ್ತದೆ ಎಂದು. "ಒಳಿತು-ಕೆಡುಕು" ಮಾಡುವ ಲೆಕ್ಕಾಚಾರ ನಿಮಗೆ ಬಿಟ್ಟಿದ್ದು.

ವಾರಭವಿಷ್ಯ



4.05.2025 ರಿಂದ 10.05.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಕಟಕ, ಸಿಂಹ, ಕನ್ಯಾ, ಕುಜ-ಕಟಕ, ಬುಧ - ಮೀನ, ಮೇಷ, ಗುರು-ವೃಷಭ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.

ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ವ್ಯಾಪಾರ, ವ್ಯವಹಾರಗಳು ನಿಧಾನಗತಿಯಲ್ಲಿ ಸಾಗುವುದು. ಕೆಲಸಗಾರರು ಮೋಸ ಮಾಡಬಹುದು. ದುಡುಕು ಮನೋವೃತ್ತಿಯಿಂದ ಅನವಶ್ಯಕ ತಪ್ಪುಗಳು ನಡೆದು ಹೋಗುವುದು. ವಾರದ ಉತ್ತರಾರ್ಧದಲ್ಲಿ ಬೃಹಸ್ಪತಿಯ ಶ್ರೀರಕ್ಷೆಯಿಂದ ಸೂರ್ಯನೆದುರಲಿ ಮಂಜು ಕರಗಿದಂತೆ ಎದುರಾಗುವ ಕಠಿಣ ಸಮಯ ನಿವಾರಣೆ ಆಗುವುದು. ಆರೋಗ್ಯ ಮರು ಕಳಿಸುವುದು.

ಶ್ರೀ ಗಣಪತಿ ಉಪಾಸನೆ, ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಿದ್ಯಾ, ವ್ಯಾಸಂಗಗಳಲ್ಲಿ ಗೌರವ ಪ್ರಶಸ್ತಿ ಪ್ರಾಪ್ತಿ.. ಹಲವು ಮೂಲಗಳಿಂದ ಹಣ ಗಳಿಕೆ. ನ್ಯಾಯವಾದಿಗಳಿಗೆ ದೊಡ್ಡ ಕಕ್ಷಿಗಾರರ ಸಂಪರ್ಕ. ಆಫೀಸ್‌ನಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯುವುದು. ಬ್ಯೂಟಿ ಪಾರ್ಲರ್‌ನವರಿಗೆ ಬೇಡಿಕೆ ಹೆಚ್ಚಾಗುವುದು. ಅಪರಿಚಿತರೊಡನೆ ಹಣಕಾಸಿನ ವ್ಯವಹಾರದಿಂದ ನಷ್ಟ ಉಂಟಾಗುವುದು. ವಿದ್ಯುತ್ ಮಿಷನರಿಗಳ ಮೇಲೆ ಕೆಲಸ ಮಾಡುವಾಗ ಜಾಗೃತರಾಗಿರಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಸಪ್ತಾಹದ ಆದಿಗೆ ದುಡುಕು ಮಾತಿನಿಂದ ಸಮಸ್ಯೆಗೆ ಸಿಲುಕುವಿರಿ. ವ್ಯಾಪಾರ ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು. ಶಾರೀರಿಕ ಬಲಹೀನತೆ. ದುರ್ಮಾರ್ಗಿಗಳ ಸಹವಾಸ ಕಳಂಕ ತರುವುದು. ವಾರದ ಕಡೆಗೆ ನಿರಾಯಾಸವಾಗಿ ಧನಲಾಭ, ವಸ್ತ್ರ ಲಾಭ, ಸ್ವಬುದ್ಧಿಯಿಂದ ಕೆಲಸ ಪ್ರಾರಂಭಿಸಿ ಯಶಸ್ಸು ಸಾಧಿಸುವಿರಿ. ಮಾನಸಿಕ ಕ್ಲೇಶ ನಿವಾರಣೆಗೆ ಮನೆ ದೇವರ ದರ್ಶನ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-3

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಉತ್ಸಾಹಭರಿತರಾಗಿ, ಲವಲವಿಕೆಯಿಂದ ಕೆಲಸಗಳನ್ನು ನಿರ್ವಹಿಸುವಿರಿ. ತೇಜೋಭಿವೃದ್ಧಿ, ಇಷ್ಟ ಕಾರ್ಯಸಿದ್ಧಿ. ಸ್ವಧರ್ಮಾಚರಣೆ ಹಾಗೂ ಗುರುಭಕ್ತಿಯಿಂದ ಆತ್ಮವಿಶ್ವಾಸದಲ್ಲಿ ವೃದ್ಧಿ. ಕ್ಷೀರೋತ್ಪನ್ನ ವ್ಯವಹಾರಿಗಳಿಗೆ ಉತ್ತಮ ಧನಾದಾಯ. ರಾಶಿಸ್ಥಿತ ಕುಜನಿಂದ ಶಸ್ತ್ರಭಯ, ಕೃಷಿಯಲ್ಲಿ ನಷ್ಟ, ಕರುಳು ಸಂಬಂಧಿ ಕಾಯಿಲೆ.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದ ಆದಿಭಾಗಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಶುಭ ಫಲವನ್ನು ತರುವುದರ ಜೊತೆಗೆ ಶುಭ ವಾರ್ತೆಯನ್ನೂ ತರಲಿದ್ದಾನೆ. ಕಲಾವಿದರಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆಯಲಿದೆ. ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನೋಲ್ಲಾಸ. ವಾರದ ಮಧ್ಯಂತರದ ನಂತರ ಆಸ್ತಿ ಹಂಚಿಕೆ ವಿಷಯದಲ್ಲಿ ಭಿನ್ನಮತದಿಂದ ಅಸಮಾಧಾನ ಉಂಟಾಗುವುದು. ವಾಯುಪ್ರಕೋಪಕ್ಕೆ ಗುರಿಯಾಗುವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)
ಶ್ರೀಗುರುವಿನ ಕರುಣೆಯಿಂದ ನಿಮ್ಮ ಮನೋವಾಂಛಿತ ಆಸೆಗಳು ಈಡೇರುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ಕೆಲವರಿಗೆ ಕನ್ಯಾಸೆರೆಯಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ. ಪಾಲುದಾರಿಕೆ ವ್ಯವಹಾರಗಳನ್ನು ಸಮಾಧಾನದಿಂದಲೂ, ಎಚ್ಚರಿಕೆಯಿಂದಲೂ ಮಾಡಬೇಕಾಗುತ್ತದೆ. ವಾರದ ಕಡೆಗೆ ಪುಣ್ಯ ಕೆಲಸಗಳನ್ನು ಮಾಡುವುದರಿಂದ ಪ್ರಸಿದ್ಧಿಗೆ ಬರುವಿರಿ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಎಲ್ಲವೂ ಕಾಲಾಧೀನ. ಕಾಲಕ್ಕೆ ತಕ್ಕಂತೆ ನಾವು ಬದಲಾಗಬೇಕು. ಕೇಟರಿಂಗ್, ಹೋಟೆಲ್ ವ್ಯವಹಾರಗಳಿಗೆ ಬೇಡಿಕೆ ಹೆಚ್ಚಾಗುವುದು ಹಾಗೂ ವರಮಾನವೂ ಹೆಚ್ಚಾಗುವುದು. ನೂತನ ವಸ್ತ್ರಾಭರಣ ಕೊಳ್ಳುವಿರಿ. ಕೈಗೊಂಡ ಕಾರ್ಯಕಲಾಪಗಳು ಸುಸೂತ್ರವಾಗಿ ಸಾಗಲು ಅನುಭವಿಗಳ ಮಾರ್ಗದರ್ಶನದ ಅಗತ್ಯವಿದೆ. ಕಾರಣ ಕೇತುಗ್ರಹದ ಪ್ರಭಾವದಿಂದ ಯೋಜಿತ ಕೆಲಸಗಳು ಅರ್ಧಕ್ಕೆ ನಿಲ್ಲುತ್ತವೆ.

ಶ್ರೀ ಚಾಮುಂಡೇಶ್ವರಿ ಆರಾಧನೆ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಸಪ್ತಾಹದ ಆದಿಗೆ ಸ್ಥಾನ ಲಾಭ, ಪಶು ಸಂಪತ್ತಿನ ವೃದ್ಧಿ, ಗೌರವಾನ್ವಿತ ವ್ಯಕ್ತಿಗಳ ಭೇಟಿ ಹಾಗೂ ಮಾರ್ಗದರ್ಶನ ಪ್ರಾಪ್ತಿ. ಹಲವು ಮೂಲಗಳಿಂದ ಧನ ಸಂಪಾದನೆಯಾದರೂ ಸುಖವನ್ನು ಅನುಭವಿಸಲಾರಿರಿ. ನೆರೆಹೊರೆಯಲ್ಲಿ ಉತ್ತಮ ಬಾಂಧವ್ಯವಿರಲಿ. ಹತ್ತಿ, ಎಣ್ಣೆ ಕಾಳು ವ್ಯಾಪಾರಗಳಿಗೆ ಲಾಭ ಉದ್ಯೋಗ ಸ್ಥಳದಲ್ಲಿ ಬದಲಾವಣೆ ಇತರರ ಮನಸ್ಸು ಘಾಸಿಯಾಗದಂತೆ ನಡೆದುಕೊಳ್ಳಿ. ಕಫ ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ನೃಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಷೇರು ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ. ಶುಭ ಬುಧನಿಂದ ಸಮಯೋಚಿತ ಮಾತಿನಿಂದ ಕಾರ್ಯ ಸಾಧನೆ. ಸರಾಫ್ ವ್ಯಾಪಾರಗಳು ಹೆಚ್ಚಾಗುವುದು. ನಂಬಿಕಸ್ಥ ಜನರು ನಿಮ್ಮ ಸಹಾಯಕ್ಕೆ ಬರುವರು. ವಾರದ ಉತ್ತರಾರ್ಧದಲ್ಲಿ ಆತ್ಮೀಯರ ಮಿಲನದಿಂದ ಮೈ ಮನಗಳಲ್ಲಿ ಹರುಷ. ಮುಖ್ಯ ವಿಷಯಗಳಲ್ಲಿ ಹಿರಿಯರೊಡನೆ ಸಮಾಲೋಚನೆ. ರಾಜಕಾರಿಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ-4

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಈ ವಾರದಲ್ಲಿ ನಿಮ್ಮ ಅಭಿಲಾಷೆಗಳು ಪೂರ್ಣವಾಗುವುದು. ಐಟಿ-ಬಿಟಿ ಅಭ್ಯರ್ಥಿಗಳಿಗೆ ವಿದೇಶಿ ಉದ್ಯೋಗದ ಸಂದರ್ಶನಕ್ಕೆ ಕರೆ ಬರುವ ಸಾಧ್ಯತೆ ತುಂಬಾ ಇದೆ. ಪ್ರಭಾವಶಾಲಿಗಳೆನಿಸಿ ಎದುರಾಳಿಗಳ ಮೇಲೆ ವಿಜಯವನ್ನು ಸಾಧಿಸುವಿರಿ. ನೂತನ ವಾಹನ ಹೊಂದುವ ಕನಸು ನನಸಾಗಲಿದೆ. ವಿದ್ಯಾ ಪ್ರಸಂಗಗಳಲ್ಲಿ ಉನ್ನತ ಸಾಧನೆಯನ್ನು ಮಾಡುವಿರಿ, ಆರೋಗ್ಯ ಅಷ್ಟಕ್ಕಷ್ಟೆ

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-2

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರದಲ್ಲಿ ನಿಮ್ಮ ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಉಂಟಾದರೂ ಧೃತಿಗೆಡದೆ ಮುಂದುವರೆಯಿರಿ. ಪ್ರಯತ್ನವಿಲ್ಲದೆ ದೈವ ಸಹಾಯ ದೊರೆಯದು. ಕಬ್ಬಿಣ, ಸಿಮೆಂಟ್, ಆಟೋ ಮೊಬೈಲ್ ವ್ಯಾಪಾರಗಳು ಮಂದಗತಿಯಲ್ಲಿ ಸಾಗುವುದು. ರಾಜಕಾರಣಿಗಳಿಗೆ ಹಲವು ರೀತಿಯ ಅಗ್ನಿ ಪರೀಕ್ಷೆ ಎದುರಾಗುವುದು. ನಿಮ್ಮ ಅನಿರೀಕ್ಷಿತ ನಡವಳಿಕೆಗೆ ರಾಹುಗ್ರಹ ಕಾರಣವಾಗುವುದು. ವಾರಾಂತ್ಯಕ್ಕೆ ಸಜ್ಜನರ ಸಹವಾಸದಿಂದ ಮನೋವ್ಯಾಕುಲ ನಿವಾರಣೆ.

ಶ್ರೀ ದತ್ತರಾಜ ದರ್ಶನ. ಶುಭ ಸಂಖ್ಯೆ-3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸುಂದರ ಬದುಕು ತನ್ನಿಂದ ತಾನೇ ಸೃಷ್ಟಿಯಾಗುವುದಿಲ್ಲ. ಅದಕ್ಕೆ ಸ್ವಪ್ರಯತ್ನ, ದೈವಕೃಪೆ ಎರಡೂ ಬೇಕು. ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲವಿಲ್ಲದ ಕಾರಣ ಪ್ರತಿ ಹೆಜ್ಜೆಯನ್ನೂ ಯೋಚಿಸಿ ಮುಂದಿಡಿ. ವಾರ ಸಾಗಿದಂತೆ ಜೀವಕ್ಕೆ ಹುರುಪು ನೀಡುವ ಸನ್ನಿವೇಶಗಳು ಘಟಿಸುವುದು. ಅದೃಷ್ಟವಶಾತ್ ಬಹುದೊಡ್ಡ ಅಪಾಯದಿಂದ ಪಾರಾಗುವಿರಿ. ಕುಟುಂಬ ಸಮೇತ ಮನೆದೇವರ ದರ್ಶನದೊಂದಿಗೆ ವಾರಕ್ಕೆ ವಿದಾಯ.

ಶ್ರೀ ಮಂತ್ರಾಲಯ ಪ್ರಭುಗಳ ದರ್ಶನ. ಶುಭ ಸಂಖ್ಯೆ-1

ಹುಣಸೂರು ಪುರಸಭೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಧಿಕಾರಕ್ಕೆ

ಗಣೇಶ್‌ಕುಮಾರ್ ಸ್ವಾಮಿ ಅಧ್ಯಕ್ಷರಾಗಿ ಆಯ್ಕೆ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿಗೆ ಹಣಕಾಸಿನ ಕೊರತೆ ಎದುರಾಗಿದೆ. ನಗರೋತ್ಥಾನ 15ನೇ ಹಣಕಾಸು ಯೋಜನೆ ಬಿಟ್ಟರೆ ಯಾವುದೆ ಅನುದಾನಗಳಿಲ್ಲ. ಒಂದು ನಯಾಪೈಸೆ ಬಂದಿಲ್ಲ. ನಗರಸಭೆಯ ಸ್ವಂತ ನಿಧಿಯಿಂದ ಅದಷ್ಟು ಕೆಲಸಗಳನ್ನು ಮಾಡಲಾಗುತ್ತಿದೆ. ನಾನು ಮತ್ತು ಸಂಸದರು ಸೇರಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ನಗರದಲ್ಲಿ ಯುಜಿಡಿ ವ್ಯವಸ್ಥೆ ಸರಿಯಿಲ್ಲ. ಕುಡಿಯುವ ನೀರು, ಚರಂಡಿ, ರಸ್ತೆಗಳ ವ್ಯವಸ್ಥೆ ಹದಗೆಟ್ಟಿದ್ದು ಸರಿಪಡಿಸಲು ಮತ್ತು ಅಭಿವೃದ್ಧಿಪಡಿಸಲು ಅನುದಾನ ನೀಡಿ ಎಂದು ಮನವಿ ಮಾಡಿದ್ದೀವಿ. – ಜಿ.ಡಿ.ಹರೀಶ್ ಗೌಡ, ಶಾಸಕರು.

ಹುಣಸೂರು, ಮೇ.3(ಕೆಕೆ)– ನಗರಸಭಾ ಅಧ್ಯಕ್ಷ ಶರವಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಕೂಟ ಅಧಿಕಾರದ ಚುಕ್ಕಾಣಿ ಹಿಡಿದಿದ್ದು, ಮೈತ್ರಿಕೂಟದ ಅಭ್ಯರ್ಥಿ ಗಣೇಶ್‌ಕುಮಾರ್ ಸ್ವಾಮಿ ಅಧ್ಯಕ್ಷರಾಗಿ ಅಯ್ಕೆಯಾಗಿದ್ದಾರೆ.

ಉಪವಿಭಾಗಾಧಿಕಾರಿ ಬಿ.ಆರ್.ವಿಜಯ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ನಾಲ್ಕನೇ ವಾರ್ಡಿನ ಸದಸ್ಯೆ ಭವ್ಯ ಚಂದ್ರಶೇಖರ್ ನಾಮಪತ್ರ ಸಲ್ಲಿಸಿದರೆ ಮೈತ್ರಿಕೂಟದಿಂದ ಬಿಜೆಪಿಯ 26ನೇ ವಾರ್ಡಿನ ಗಣೇಶ್ ಕುಮಾರ್ ಸ್ವಾಮಿ ನಾಮಪತ್ರ ಸಲ್ಲಿಸಿದರು.

ಚುನಾವಣೆಯಲ್ಲಿ ಗಣೇಶ್ ಕುಮಾರ್ ಸ್ವಾಮಿಗೆ ಶಾಸಕರು ಮತ್ತು ಸಂಸದರು ಸೇರಿದಂತೆ ಜೆಡಿಎಸ್‌ನ ಏಳು, ಬಿಜೆಪಿಯ ಮೂರು, ನಾಲ್ವರು ಸ್ವತಂತ್ರ ಸದಸ್ಯರು, ಕಾಂಗ್ರೆಸ್‌ನ ಇಬ್ಬರು ಸದಸ್ಯರು ಸೇರಿ ಒಟ್ಟು ಹದಿನೆಂಟು ಸದಸ್ಯರು ಮತ ಚಲಾಯಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಭವ್ಯ ಚಂದ್ರಶೇಖರ್‌ಗೆ ಕಾಂಗ್ರೆಸ್, ಎಸ್‌ಡಿಪಿಐನ ಇಬ್ಬರು ಹಾಗೂ ಒಬ್ಬ ಸ್ವತಂತ್ರ ಸದಸ್ಯ ಸೇರಿ ಒಟ್ಟು ಹದಿನೈದು ಸದಸ್ಯರು ಮತ ಚಲಾಯಿಸಿದರು. ಹದಿನೆಂಟು ಮತ ಪಡೆದ ಗಣೇಶ್‌ಕುಮಾರ್ ಸ್ವಾಮಿ ಬಹುಮತದಿಂದ ಅಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾದ ಉಪವಿಭಾಗಾಧಿಕಾರಿ ಬಿ.ಅರ್.ವಿಜಯಕುಮಾರ್ ಘೋಷಿಸಿದರು.



ಹುಣಸೂರು ನಗರಸಭೆಯ ನೂತನ ಅಧ್ಯಕ್ಷ ಗಣೇಶ್ ಕುಮಾರ್ ಸ್ವಾಮಿ ಅವರನ್ನು ಸಂಸದ ಯದುವೀರ್ ಒಡೆಯರ್ ಹಾಗೂ ಶಾಸಕ ಜಿ.ಡಿ.ಹರೀಶ್ ಗೌಡ ಅಭಿನಂದಿಸಿದರು.

ಚುನಾವಣೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಯದುವೀರ್ ಒಡೆಯರ್ ಜೆಡಿಎಸ್‌ನೊಂದಿಗೆ ಸೇರಿ ನಾವು ಸಾಕಷ್ಟು ಕೆಲಸ ಮಾಡಿದ್ದೇವೆ. ಈ ನಿಟ್ಟಿನಲ್ಲಿ ನಮ್ಮ ಮೈತ್ರಿಪಕ್ಷದ ಅಭ್ಯರ್ಥಿಯನ್ನು ಈ ಬಾರಿ ನಗರಸಭೆಯಲ್ಲಿ ಅಯ್ಕೆ ಮಾಡಲಾಗಿದೆ. ಜೊತೆಗೆ ಸ್ವತಂತ್ರವಾಗಿ ಗೆದ್ದಿರುವ ನಾಲ್ವರು ಸದಸ್ಯರು ಸಹ ನಮ್ಮ ಮೈತ್ರಿ ಕೂಟವನ್ನು ಬೆಂಬಲಿಸಿದ್ದಾರೆ ಎಂದರು.

ಇದೇ ವೇಳೆ ಚುನಾವಣೆಯಲ್ಲಿ ಭಾಗವಹಿಸಿದ್ದ ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ ನಗರಸಭೆಯಲ್ಲಿ ಎಲ್ಲಾ ಸದಸ್ಯರನ್ನು ಗುರುತಿಸಿ ಪಕ್ಷತೀತವಾಗಿ ಕೆಲಸ ಮಾಡುತ್ತಿದ್ದೇವೆ. ಇದರಿಂದ ಮೈತ್ರಿಕೂಟವಿದ್ದರೂ ಕಾಂಗ್ರೆಸ್ ಮತ್ತು ಪಕ್ಷೇತರ ಸದಸ್ಯರು ಸಹ ನಮ್ಮೊಂದಿಗೆ ಕೈಜೋಡಿಸಿ ಅಭಿವೃದ್ಧಿಯಲ್ಲಿ ಸಹಕರಿಸಿದ್ದಾರೆ ಎಂದರು.

ನಂತರ ಡೊಳ್ಳು ನಗಾರಿ ವಾದ್ಯಗಳೊಂದಿಗೆ ನಗರಸಭೆಯಿಂದ ಜೆಡಿಎಸ್ ಕಚೇರಿ, ಕೋಟೆ ಸರ್ಕಲ್, ಜೆಎಲ್‌ಬಿ ರಸ್ತೆ ಮೂಲಕ ಶಾಸಕರ ನಿವಾಸದವರೆಗೂ ಎತ್ತಿನಗಾಡಿಯಲ್ಲಿ ನೂತನ ಅಧ್ಯಕ್ಷರನ್ನು ಮೆರವಣಿಗೆ ಮಾಡಲಾಯಿತು ದಾರಿಯುದ್ದಕ್ಕೂ ಪಟಾಕಿಗಳನ್ನು ಸಿಡಿಸಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ನಾಳೆಯಿಂದ ಒಳ ಮೀಸಲಾತಿ ಜಾತಿ ಸಮೀಕ್ಷೆ

ಪರಿಶಿಷ್ಟ ಬಲಗೈ ಸಮುದಾಯ 'ಹೊಲೆಯ' ಎಂದು ಬರೆಸಲು ಮನವಿ

ತಿ.ನರಸೀಪುರ, ಮೇ 3–ಒಳ ಮೀಸಲಾತಿಗಾಗಿ ಮೇ 5 ರಿಂದ ಪರಿಶಿಷ್ಟ ಜಾತಿಯ ಎಲ್ಲಾ ಉಪಜಾತಿಗಳ ಸಮೀಕ್ಷೆ ಕಾರ್ಯ ನಡೆಯಲಿದ್ದು, ಪರಿಶಿಷ್ಟ ಜಾತಿಯ ಬಲಗೈ ಸಮುದಾಯ ಆದಿ ಕರ್ನಾಟಕರ ಉಪ ಜಾತಿ ಕಾಲಂನಲ್ಲಿ 'ಹೊಲೆಯ' ಎಂದು ಕಡ್ಡಾಯವಾಗಿ ಬರೆಸಬೇಕು ಎಂದು ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮನವಿ ಮಾಡಿದ್ದಾರೆ.



ತಿ.ನರಸೀಪುರ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ಪ.ಜಾತಿ ಬಲಗೈ ಜನಾಂಗದ ಮುಖಂಡರ ಸಭೆಯಲ್ಲಿ ಭಾಗವಹಿಸಿರುವ ಮುಖಂಡರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ಮೇ 5ರಿಂದ ನಡೆಯಲಿರುವ ಪರಿಶಿಷ್ಟ ಜಾತಿಯಲ್ಲಿನ ಉಪಜಾತಿಗಳ ಸಮೀಕ್ಷೆಯ ಬಗ್ಗೆ ನಮ್ಮ ಜನಾಂಗ ವಿಸ್ತತವಾಗಿ ಚರ್ಚಿಸಿ ಉತ್ತಮ ನಿರ್ಧಾರಕ್ಕೆ ಬಂದಿದ್ದು, ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನರು ಸಮೀಕ್ಷೆ ಸಮಯದಲ್ಲಿ ಅದಿಕರ್ನಾಟಕ ಜತೆ ಉಪ ಜಾತಿಯಾಗಿ 'ಹೊಲೆಯ' ಎಂದು ಬರೆಸಬೇಕು ಎಂದರು.

ನ್ಯಾಯ ಮೂರ್ತಿ ನಾಗಮೋಹನ್ ದಾಸ್ ನೀಡಿರುವ ವರದಿಯಲ್ಲಿ ಪ.ಜಾತಿಯ 101 ಜಾತಿಗಳ ಪೈಕಿ ಹೊಲೆಯ ಕೂಡ ಸೇರ್ಪಡೆಯಾಗಿದ್ದು,ಜನಗಣತಿ ಸಮೀಕ್ಷೆ ವೇಳೆ ಸಮುದಾಯದವರು ಎಚ್ಚರಿಕೆಯಿಂದ ತಮ್ಮ ಜಾತಿಯನ್ನು ಆದಿಕರ್ನಾಟಕ ಜೊತೆಗೆ ಹೊಲೆಯ ಎಂದು ಸೇರ್ಪಡೆ ಮಾಡಿಸಬೇಕು, ಉಪ ಜಾತಿಗಳ ಸಮ್ಮಿಶ್ರಣದಿಂದ ಒಂದೆಡೆ ಮಾದಿಗರು ನೀಡುತ್ತಿರುವ ಹೇಳಿಕೆಯ ನಡುವೆಯೇ ಬಾಸ್ಕರ್ ಪ್ರಸಾದ್ ಎಂಬಾತ ಉದ್ದಟತನದಿಂದ ಸಚಿವ ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೇಳಿಕೆ ನೀಡಿರುವುದನ್ನು ಸಂಘವು ಖಂಡಿಸುತ್ತದೆ ಎಂದರು.

ವಿಚಾರವಾದಿ ಕೆಎನ್.ಪ್ರಭುಸ್ವಾಮಿ ಮಾತನಾಡಿ, ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ನ್ಯಾ. ನಾಗಮೋಹನ್ ದಾಸ್ ಆಯೋಗ ಪರಿಶಿಷ್ಟ ಜಾತಿಯ ಒಳ ಪಂಗಡಗಳ ಸಮೀಕ್ಷೆ ಅದೇಶಿಸಿದ್ದು, ಇದೇ. 5ರಿಂದ ರಾಜ್ಯದ ಎಲ್ಲೆಡೆ ಏಕಕಾಲದಲ್ಲಿ ಸಮೀಕ್ಷೆ ಆರಂಭಗೊಳ್ಳಲಿದೆ. ಹಾಗಾಗಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯ ಜನರು ಸಮೀಕ್ಷೆ ವೇಳೆ ಉಪ ಜಾತಿ ಕಾಲಂನಲ್ಲಿ ಹೊಲೆಯ ಎಂದು ನಮೂದಿಸಬೇಕು. ಪ್ರತಿ ಹೋಬಳಿಗಳಲ್ಲಿ ತಂಡ ರಚಿಸಿ ನಮ್ಮ ಸಮುದಾಯ ಜನರಲ್ಲಿ ಜಾತಿ ನಮೂದು ಮಾಡುವ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಜಿಪಂ ಮಾಜಿ ಅಧ್ಯಕ್ಷಎಸ್.ಎನ್. ಸಿದ್ದಾರ್ಥ, ಮಾಜಿ ತಾ.ಪಂ.ಅಧ್ಯಕ್ಷ ಅಂದಾನಿ, ಸದಸ್ಯರಾದ ಪ್ರಸನ್ನ,ನಿಲಸೋಗೆ ಬಸವರಾಜು, ಪುರಸಭೆ ಮಾಜಿ ಸದಸ್ಯ ಪ್ರೊಫೆಸರ್ ಬಿ.ಕೆ. ಜ್ಞಾನಪ್ರಕಾಶ್, ನ್ಯಾಯ ಬೆಲೆ ಅಂಗಡಿ ಮಾಲೀಕ ಮೂಗೂರು ಎಂ.ಕೆ.ಸಿದ್ದರಾಜು, ಎಸ್ಸಿ ಎಸ್ಟಿ ಹಿತರಕ್ಷಣ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಲಿಂಗಪ್ಪಾಜಿ, ಬಿ.ಆರ್.ಪುಟ್ಟಸ್ವಾಮಿ, ಬನ್ನಳ್ಳಿ ಹುಂಡಿ ಸೋಮಣ್ಣ, ಉಮಾಪತಿ, ಎಂ.ಮಿಥುನ್,, ತುಂಬ್ಲ ಮಂಜುನಾಥ್, ನಾಗರಾಜಮೂರ್ತಿ, ಸೋಮನಾಥಪುರ ಗಣೇಶ್, ಉಕ್ಕಲಗೆರೆ ರಾಜು, ದಿಲೀಪ್, ಗಣೇಶ್, ಆಲಗೂಡು ಶಿವಣ್ಣ, ಅರ್ಜುನ್ ಇತರರು ಹಾಜರಿದ್ದರು.

ಹುರ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ ಶೇ.100 ರಷ್ಟು ಫಲಿತಾಂಶ

ಮಲ್ಲುಂಡಿ: ಸಮೀಪದ ಹುರ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100 ರಷ್ಟು ಫಲಿತಾಂಶ ಬಂದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವರ್ಷತ 615 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ ಎಂದು ಪ್ರಾಂಶುಪಾಲ ಮಂಜುನಾಥ್ ತಿಳಿಸಿದ್ದಾರೆ.



ತಿ.ನರಸೀಪುರ ಪುರಸಭೆಗೆ ನಾಮ ನಿರ್ದೇಶನ

ತಿ.ನರಸೀಪುರ ಮೇ 3– ತಿ. ನರಸೀಪುರ ಪುರಸಭೆಗೆ ಪರಿಶಿಷ್ಟ ಜಾತಿ ವಿಭಾಗದಿಂದ ಗಣೇಶ್, ಒಕ್ಕಲಿಗ ಸಮಾಜದಿಂದ ಆರ್ ಚೇತನ್, ಕುರುಬ ಸಮುದಾಯದ ಹಿರಿಯ ಮುಖಂಡ ಮುದ್ದಬಿರನಹುಂಡಿ ಗುರುಸ್ವಾಮಿ ಅವರನ್ನು ಸದಸ್ಯರಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ಟಿ.ಮಂಜುನಾಥ್ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಆರ್ ಚೇತನ್



ಗುರುಸ್ವಾಮಿ



ಗಣೇಶ್

ನ್ಯಾಯಧೀಶೆ ಶಶಿಕಲಾ ಅವರಿಗೆ ಆತ್ಮೀಯ ಬಿಳ್ಕೊಡುಗೆ

ನಂಜನಗೂಡು: ನ್ಯಾಯಧೀಶರಾದ ಶಶಿಕಲಾ ನ್ಯಾಯಾಂಗದ ಕಲಾಪದಲ್ಲಿ ಹೆಚ್ಚಿನ ಸಮಯ ಕಳೆದು, ಇಲ್ಲಿನ ಸಾರ್ವಜನಿಕರು ಸೇರಿದಂತೆ ವಕೀಲರುಗಳ ಮೆಚ್ಚುಗೆ ಗಳಿಸಿ, ತಮ್ಮ ಯಶಸ್ವಿ 3 ವರ್ಷಗಳ ಸೇವೆಯ ನಂತರ ಮುಂಬಡ್ತಿ ಹೊಂದಿ ಮಂಗಳೂರಿಗೆ ವರ್ಗಾವಣೆಯಾಗಿದ್ದಾರೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಕಮಲಾಕ್ಷ ಹೇಳಿದರು.

ನಗರದ ನ್ಯಾಯಾಲಯದ ಸಭಾಂಗಣದಲ್ಲಿ ಶನಿವಾರ ಎರಡನೇ ಹೆಚ್ಚುವರಿ ನ್ಯಾಯಾಧೀಶೆ ಶಶಿಕಲಾ ಅವರಿಗೆ ಏರ್ಪಡಿಸಲಾಗಿದ್ದ ಆತ್ಮೀಯ ಬಿಳ್ಕೊಡುಗೆ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶ್ರೀಮತಿ ಶಶಿಕಲಾ ಜನ ಸಾಮಾನ್ಯರಿಗೂ ಕಾನೂನಿನ ನೆರವು ಸಿಗಬೇಕೆಂಬ ಆಶಯ ಹೊಂದಿದ್ದು, ಹೆಚ್ಚಿನ ಸಮಯ ನ್ಯಾಯಾಲಯದ ಕಲಾಪಗಳಲ್ಲಿ ಕಳೆಯುತ್ತಾರೆ, ಸಮಯದ ಪರಿವೆಯಿಲ್ಲದೆ ಅರ್ಪಣಾ ಮನೋಭಾವದಿಂದ ಕೆಲಸ ಮಾಡುವ ಶಶಿಕಲಾ ಅಂತಹವರು ಅಪರೂಪ, ಕೆಲಸದ ಜೊತೆಗೆ ಆರೋಗ್ಯದ ಕಡೆಗೂ ಗಮನಹರಿಸಿ, ಇನ್ನೂ ಉತ್ತಮ ಕೀರ್ತಿ ಸಂಪಾದಿಸುವಂತಾಗಲಿ ಎಂದು ಅವರು ಹೇಳಿದರು.



ನಂಜನಗೂಡಿನ ನ್ಯಾಯಾಲಯದ ಸಭಾಂಗಣದಲ್ಲಿ ಶನಿವಾರ ನಡೆದ ಎರಡನೆ ಹೆಚ್ಚುವರಿ ನ್ಯಾಯಧೀಶೆ ಶಶಿಕಲಾ ಅವರ ಬಿಳ್ಕೊಡುಗೆ ಕಾರ್ಯಕ್ರಮದಲ್ಲಿ ವಕೀಲರ ಸಂಘದಿಂದ ಶಶಿಕಲಾ ಅವರಿಗೆ ಫಲ ತಾಂಬೂಲ ನೀಡಿ ಗೌರವಿಸಲಾಯಿತು.

ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ ನ್ಯಾಯಧೀಶೆ ಶಶಿಕಲಾ ಅವರಂತಹ ಕರ್ತವ್ಯ ನಿಷ್ಠರು ಅಪರೂಪ, ಬಡವರ ಪರವಾಗಿ ಅತ್ಯಂತ ಹೆಚ್ಚಿನ ಪ್ರೀತಿ ಹೊಂದಿರುವ ಅವರು ಸಾಧ್ಯವಾದಷ್ಟು ಶೀಘ್ರವಾಗಿ ತೊಂದರೆಗೆ ಒಳಗಾದವರಿಗೆ ನ್ಯಾಯಾಲಯಕ್ಕೆ ಅಲೆಯುವಂತಾಗದೆ ನ್ಯಾಯ ದೊರೆಯಬೇಕು ಎಂಬ ಅಭಿಲಾಸೆ ಉಳ್ಳವರು, ಅಲ್ಲದೆ ಸಾಮಾಜಿಕ ಕಳಕಳಿಯಿಂದ ಕಕ್ಷಿದಾರರಿಗೆ ನ್ಯಾಯ ಒದಗಿಸುತ್ತಿದ್ದರು. 3 ವರ್ಷಗಳ ಅವರೊಂದಿಗಿನ ನ್ಯಾಯಾಲಯದ ಕಲಾಪ ಬದುಕಿನಲ್ಲಿ ಅಚ್ಚಳಿಯದೆ ಉಳಿಯಲಿದೆ ಎಂದು ಭಾವುಕರಾಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನ್ಯಾಯಾಧೀಶೆ ಶಶಿಕಲಾ ಅವರು, ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರಕಿದ್ದು ನನ್ನ ಪುಣ್ಯ, ಇಲ್ಲಿನ ನ್ಯಾಯಾಲಯದ ಸಿಬ್ಬಂದಿಗಳು ಮತ್ತು ವಕೀಲರು ನನ್ನ ಕುಟುಂಬದ ಒಂದು ಭಾಗ ಎಂದು ಭಾವಿಸುವಂತಾಗಿತ್ತು ಇಲ್ಲಿಂದ ಸಿಹಿ ನೆನಪುಗಳನ್ನು ಹೊತ್ತು ಸಾಗುತ್ತಿದ್ದೇನೆ ಎಂದರು.

ಕಾರ್ಪೆಂಟರ್ ಮಗ ತಾಲೂಕಿಗೆ ಪ್ರಥಮ

ಬೈಲಕುಪ್ಪೆ: ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಹಳೆಯೂರು ಗ್ರಾಮದ ನಿವಾಸಿ ಕಾರ್ಪೆಂಟರ್ ಮಂಜುನಾಥ್ ಮತ್ತು ಸುಧಾ ದಂಪತಿಯ ಪುತ್ರ ಪ್ರಜ್ವಲ್.ಎಂ. ಎಸ್‌ಎಸ್‌ಎಲ್‌ಸಿ, ಪರೀಕ್ಷೆಯಲ್ಲಿ ಶೇ 99.4 ಅಂಕ ಪಡೆದು ತಾಲೂಕಿಗೆ ಟಾಪ್ ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದಾನೆ.



ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಸಮೀಪದ ಮರಡಿಯೂರು ಆಕ್ಸಿಲಿಯಮ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು, 625ಕ್ಕೆ 619 ಅಂಕಗಳನ್ನು ಪಡೆದು, ತಾಲೂಕಿಗೆ ಮತ್ತು ಶಾಲೆಗೆ ಕೀರ್ತಿ ತಂದಿದ್ದಾನೆ.

ಕನ್ನಡದಲ್ಲಿ 125ಕ್ಕೆ 100, ಇಂಗ್ಲಿಷ್ 96, ಹಿಂದಿ 100, ಗಣಿತ 99, ವಿಜ್ಞಾನ 100, ಸಮಾಜ ವಿಜ್ಞಾನದಲ್ಲಿ 100, ಅಂಕ ಪಡೆದಿದ್ದಾನೆ.

ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ನೀಡುವುದರೊಂದಿಗೆ ಸಮಯಕ್ಕೆ ಸರಿಯಾಗಿ ಸತತ ಒಂದು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದೆ ಈ ಫಲಿತಾಂಶ ಬರಲು ಸಾಧ್ಯವಾಯಿತು ಎಂದರು.

ಕಾರು ಡಿಕ್ಕಿ: ಮೊಪೆಡ್ ಸವಾರ ಸಾವು, ಹಿಂಬದಿ ಸವಾರನಿಗೆ ಗಾಯ

ನಂಜನಗೂಡು: ಮೊಪೆಡ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೊಪೆಡ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕಳಲೆ ಗೇಟ್ ಬಳಿ ಜರುಗಿದೆ.



ತಾಲೂಕಿನ ಹೆಮ್ಮರಗಾಲ ಗ್ರಾಮದ ಚಿನ್ನಸ್ವಾಮಪ್ಪ (53) ಮೃತ ದುರ್ದೈವಿ. ಹಿಂಬದಿ ಸವಾರ ರಾಮೇಗೌಡ ತೀವ್ರವಾಗಿ ಗಾಯಗೊಂಡಿದ್ದು, ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿನ್ನಸ್ವಾಮಪ್ಪ ಮತ್ತು ರಾಮೇಗೌಡ ತಮ್ಮ ಟಿವಿಎಸ್ ಮೊಪೆಡ್‌ನಲ್ಲಿ ಹೆಮ್ಮರಗಾಲದಿಂದ ಕಾರ್ಯ ನಿಮಿತ್ತವಾಗಿ ನಂಜನಗೂಡಿಗೆ ಆಗಮಿಸುತ್ತಿದ್ದ ಸಂದರ್ಭದಲ್ಲಿ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಲಗಡೆಗೆ ತಿರುವು ಪಡೆಯುತ್ತಿದ್ದ ವೇಳೆ ಗುಂಡ್ಲುಪೇಟೆ ಕಡೆಯಿಂದ ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಚಿನ್ನಸ್ವಾಮಪ್ಪ ತಲೆಗೆ ತೀವ್ರ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ರಾಮೇಗೌಡ ಗಂಭೀರವಾಗಿ ಗಾಯಗೊಂಡು ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಸಿದ್ದರಾಜು ಭೇಟಿ ನೀಡಿ ಶವ ಮಹಜರು ನಡೆಸಿ ಕಾರು ಮತ್ತು ಚಾಲಕರನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೀನುಗಾರರ ಬಲೆಗೆ ಬಿದ್ದ ಹೆಬ್ಬಾವು



ಉರಗ ತಜ್ಞ ಸ್ನೇಕ್ ಹಾಲಿ ಅವರು ಮೀನುಗಾರರ ಬಲೆಗೆ ಸಿಲುಕಿ ಒದ್ದಾಡುತ್ತಿದ್ದ ಹೆಬ್ಬಾವನ್ನು ರಕ್ಷಿಸಿರುವುದು.

ಹೆಚ್.ಡಿ.ಕೋಟೆ: ತಾಲೂಕಿನ ಹೆಗ್ಗಡಪುರ ಗ್ರಾಮದ ಬಳಿ ಇರುವ ಕೆರೆಯಲ್ಲಿ ಶನಿವಾರ ಬೆಳಗ್ಗೆ ಮೀನುಗಾರರು ಮೀನು ಹಿಡಿಯುವ ಸಂದರ್ಭದಲ್ಲಿ ಮೀನುಗಾರರ ಬಲೆಗೆ 8 ಅಡಿ ಉದ್ದದ ಹೆಬ್ಬಾವು ಬಲಗೆ ಸಿಲುಕಿಕೊಂಡಿದ್ದು, ಅದನ್ನು ರಕ್ಷಣೆ ಮಾಡಲಾಗಿದೆ.

ತಕ್ಷಣ ಮೀನುಗಾರರು ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ನೇಕ್ ಹಾಲಿ ಅವರಿಗೆ ದೂರವಾಣಿ ಕರೆ ಮಾಡಿದ ಸಂದರ್ಭ ಸ್ನೇಕ್ ಹಾಲಿ ಸ್ಥಳಕ್ಕೆ ತೆರಳಿ ಬಲೆಯಲ್ಲಿ ಸಿಲುಕಿಕೊಂಡಿದ್ದ ಹೆಬ್ಬಾವನ್ನು ಯಾವುದೇ ತೊಂದರೆಯಾಗದ ರೀತಿಯಲ್ಲಿ ಬಲೆಯಿಂದ ಬಿಡಿಸಿ ಬಳ್ಳೆ ಅಭಯ ಅರಣ್ಯಕ್ಕೆ ಬಿಟ್ಟಿದ್ದಾರೆ.

ಇದೇ ಸಂದರ್ಭದಲ್ಲಿ ಡಿಆರ್‌ಎಫ್‌ಓಗಳಾದ ನಿತಿನ್, ಪರಮೇಶ್, ಸಿಬ್ಬಂದಿಗಳಾದ ಸುರೇಂದ್ರ, ದನುಶ್, ದೀಪಕ್, ಸೋಮೇಶ್, ಇದ್ದರು.

ಬ್ಯಾಂಕಿನಿಂದ ಡ್ರಾ ಮಾಡಿ ಹೋಂಡಾ ಆಕ್ಟಿವಾ ಡಿಕ್ಕಿಯಲ್ಲಿಟ್ಟಿದ್ದ 5 ಲಕ್ಷ ರೂ. ಎಗರಿಸಿದ ಖದೀಮರು

ತಿ.ನರಸೀಪುರ, ಮೇ 3– ಬ್ಯಾಂಕಿನಿಂದ ಹಣ ಡ್ರಾ ಮಾಡಿ ಹೋಂಡಾ ಆಕ್ಟಿವಾ ಸ್ಕೂಟರ್ ಡಿಕ್ಕಿಯಲ್ಲಿ ಇಟ್ಟಿದ್ದ 5.20 ಲಕ್ಷ ರೂ ರೂ.ಗಳನ್ನು ಖದೀಮರು ಎಗರಿಸಿರುವ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇಂದು ಸಂಭವಿಸಿದೆ.

ಪಟ್ಟಣದ ಹಳೇ ಕುರುಬಗೇರಿ ನಿವಾಸಿ ನ್ಯಾಯಬೆಲೆ ಅಂಗಡಿ ಮಾಲೀಕ ಕೃಷ್ಣ ಮೂರ್ತಿ ಎಂಬುವರೇ ಹಣ ಕಳೆದುಕೊಂಡವರಾಗಿದ್ದಾರೆ. ಕೃಷ್ಣಮೂರ್ತಿ ಇಂದು ಮಧ್ಯಾಹ್ನ ಕೆನರಾ ಬ್ಯಾಂಕಿನಿಂದ 5.20 ಲಕ್ಷ ರೂ.ಗಳ ಹಣ ಡ್ರಾ ಮಾಡಿ ಹೋಂಡಾ ಆಕ್ಟಿವಾ ಸ್ಕೂಟರ್‌ನ ಡಿಕ್ಕಿಯಲ್ಲಿ ಹಣ ಇಟ್ಟು ಮೈಸೂರಿನಿಂದ ಬರುತ್ತಿದ್ದ ಮಗಳನ್ನು ಮನೆಗೆ ಕರೆ ತರಲು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲೇ ಪಕ್ಕದಲ್ಲೇ ಬೈಕ್ ಪಾರ್ಕಿಂಗ್ ಮಾಡಿ ಮಗಳನ್ನು ಕರೆ ತರಲು ಬಸ್ ನಿಲ್ದಾಣಕ್ಕೆ ತೆರಳಿದ್ದಾರೆ.

ಬಸ್‌ನಿಂದ ಇಳಿದು ಬಂದ ಮಗಳನ್ನು ಮನೆಗೆ ಕರೆದೊಯ್ಯಲು ಬೈಕ್ ಬಳಿ ಬರುತ್ತಿದ್ದಂತೆ ಸ್ಕೂಟರ್‌ನ ಡಿಕ್ಕಿ ಸ್ವಲ್ಪ ತೆರೆದಿರುವುದು ಗಮನಕ್ಕೆ ಬರಲಾಗಿ ಗಾಬರಿಗೊಂಡ ಕೃಷ್ಣ ಮೂರ್ತಿ ಹಣ ಡಿಕ್ಕಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲು ಡಿಕ್ಕಿ ತೆರೆದು ನೋಡಿದ್ದಾರೆ. ಆದರೆ ಅಷ್ಟರಲ್ಲಾಗಲೇ ಚಾಲಾಕಿ ಕಳ್ಳರು ಡಿಕ್ಕಿ ಓಪನ್ ಮಾಡಿ ಹಣವನ್ನು ಎಗರಿಸಿ ಪರಾರಿಯಾಗಿದ್ದಾರೆ.

ಕೂಡಲೇ ಕೃಷ್ಣ ಮೂರ್ತಿ ಪೊಲೀಸರಿಗೆ ದೂರು ನೀಡಿದ್ದು, ಡಿವೈಎಸ್‌ಪಿ ರಘು, ಸಿಪಿಐ ಧನಂಜಯ, ಪಿಎಸ್‌ಐ ಜಗದೀಶ್ ದೂಳ್ ಶೆಟ್ಟಿ ಸ್ಥಳಕ್ಕೆ ಹಾಗೂ ಬ್ಯಾಂಕಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆದರೆ ಯಾವುದೇ ಸುಳಿವು ಪತ್ತೆಯಾಗದ ಹಿನ್ನೆಲೆಯಲ್ಲಿ ಬಸ್ ನಿಲ್ದಾಣ ಹಾಗು ಆಸುಪಾಸಿನಲ್ಲಿರುವ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಪ್ರಜಾಪ್ರಭುತ್ವದ ಆಡಳಿತ ನೀಡಿದವರು ಅಂಬೇಡ್ಕರ್



ಸಂಸದ ಸುನಿಲ್ ಬೋಸ್ ಪುಷ್ಪಾರ್ಚನೆ ಮಾಡಿದರು

ತಿ.ನರಸೀಪುರ,ಮೇ.3– ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಮತದಾನದ ಹಕ್ಕು ದೊರಕುವಂತೆ ಮಾಡುವ ಮೂಲಕ ರಾಜ ಪ್ರಭುತ್ವದ ಬದಲು ಪ್ರಜಾಪ್ರಭುತ್ವದ ಆಳ್ವಿಕೆಗೆ ಅವಕಾಶ ನೀಡಿದ್ದಾರೆ ಎಂದು ಸಂಸದ ಸುನಿಲ್ ಬೋಸ್ ತಿಳಿಸಿದ್ದಾರೆ.

ಪಟ್ಟಣದ ತ್ರಿವೇಣಿ ನಗರದಲ್ಲಿರುವ ಮಹಾನಾಯಕ ಸರ್ಕಲ್‌ನಲ್ಲಿ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ 134ನೇ ಅಂಬೇಡ್ಕರ್ ಜಯಂತಿಯನ್ನು ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತಾಡಿದ ಅವರು ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಈ ಹಿಂದೆ ಕಡೆಗಣಿಸಿದ್ದ ವ್ಯಕ್ತಿಗಳು ಇಂದು ಸ್ಮರಣೆ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಬಾಬಾ ಸಾಹೇಬರ ಆಶಯಗಳು ಸಂಪೂರ್ಣವಾಗಿ ಈಡೇರಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು.

ಅಂಬೇಡ್ಕರ್ ರಥಕ್ಕೆ ಚಾಲನೆ ನೀಡಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅರ್ಥಪೂರ್ಣವಾಗಿ ಸಂವಿಧಾನದಲ್ಲಿ ನೀಡಿರುವ ಸಲಹೆಗಳನ್ನು ಎಲ್ಲರೂ ಪಾಲಿಸಬೇಕು. ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಒಟ್ಟಾಗಿ ಸೇರಿ ಸ್ಮರಣೆ ಮಾಡೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಂಬೇಡ್ಕರ್ ಕ್ಷೇಮಾವೃದ್ಧಿ ಸಮಿತಿಯ ಅಧ್ಯಕ್ಷ ಎನ್.ಮಹೇಶ್ ಮಾತನಾಡಿದರು. ದಿವ್ಯ ಸಾನಿಧ್ಯವನ್ನು ಬೋದಿರತ್ನ ಬಂತೇಜಿ ವಹಿಸಿದ್ದರು,ಗೌರವಾಧ್ಯಕ್ಷ ಕರುವಟ್ಟಿ ಮಹಾದೇವಯ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ತುಂಬಲ ಪ್ರಕಾಶ್, ಕಾರ್ಯದರ್ಶಿ ಕೆಂಚಪ್ಪ, ಖಜಾಂಚಿ ಶ್ರೀಧರ್, ಸಲಹೆಗಾರ ಡಿಎಂ ರಂಗಸ್ವಾಮಿ, ನಿರ್ದೇಶಕರಾದ ಮರಿಸ್ವಾಮಿ, ಪುಟ್ಟರಾಜು,ಎಮ್ ಎಸ್.ಬಸವರಾಜು, ಎಂ.ಮಿಥನ್, ಆರ್.ಮಹದೇವಸ್ವಾಮಿ, ಸಿದ್ದರಾಜು, ರಂಗ ದಾಸಯ್ಯ, ಎಂ.ಶಿವಣ್ಣ, ಬಿ.ಮಲ್ಲರಾಜು, ಮಾಜಿ ಗ್ರಾಪಂ ಸದಸ್ಯ ಹೇಮಂತ್ ಕುಮಾರ್, ಸೋಸಲೆ ನಂಜುಂಡಯ್ಯ, ಮಾಜಿ ಜಿಪಂ ಸದಸ್ಯಕ್ಕೆ ಮಹದೇವ್, ಮಹದೇವಮ್ಮ ಹಾಜರಿದ್ದರು.

ದೇವಾಲಯಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಸೇತುವೆಯಾಗಬೇಕು

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅಭಿಪ್ರಾಯ

ಹುಣಸೂರು, ಮೇ 3– ದೇವಾಲಯಗಳು ಕೇವಲ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೀಮಿತ ಗೊಳ್ಳದೆ, ವಿದ್ಯಾದಾನ, ವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಆಯೋಜಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸೇತುವೆಯಾಗಬೇಕು ಎಂದು ಹೈ ಕೋರ್ಟ್ ನ್ಯಾಯಮೂರ್ತಿ ಕೃಷ್ಣದೀಕ್ಷಿತ್ ಆಶಿಸಿದರು.

ತಾಲೂಕಿನ ಬಿಳಿಕೆರೆ ಹೋಬಳಿಯ ಬೋಳನ ಹಳ್ಳಿಯಲ್ಲಿ ಶ್ರೀಮಾತೇ ಮಾಳಿಗೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ನೂತನವಾಗಿ ನಿರ್ಮಿಸಿರುವ ಭವನವನ್ನು ಉದ್ಘಾಟಿಸಿ ಮಾತನಾಡಿದ ಅವರು ದೇವಸ್ಥಾನಗಳಲ್ಲಿ ಜಾತಿ, ಭೇದ ಮರೆತು ಎಲ್ಲರೂ ಏಕತೆಯಿಂದ ದೇವತಾ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು. ಸಮಾಜವು ಸಾಂಸ್ಕೃತಿಕವಾಗಿ, ಧರ್ಮ, ಜಾತಿ ಎನ್ನದೆ ಸಂಘಟಿತವಾದಾಗ ಮಾತ್ರ ಸದೃಢ ಸಮಾಜ ನಿರ್ಮಾಣ ಮಾಡಲು ಸಾಧ್ಯ, ಇಲ್ಲವಾದಲ್ಲಿ ಬ್ರಿಟಿಷರಂತೆ ಕೆಲ ಕಾಣದ ಶಕ್ತಿಗಳು ನಮ್ಮನ್ನು ಒಡೆದು ಆಳುವ ತಂತ್ರ ಅನುಸರಿಸುತ್ತವೆ ಎಂದರು.

ಸಮಾಜದಲ್ಲಿ ದೊಡ್ಡಮಟ್ಟದಲ್ಲಿ ಬೆಳೆಯಬೇಕು, ಶ್ರೀಮಂತನಾಗಬೇಕೆಂಬ ಬಯಕೆ ತಪ್ಪಲ್ಲ, ಆದರೆ ಅವುಗಳನ್ನು ನ್ಯಾಯ ಮಾರ್ಗಗಳಿಂದ ಸಂಪಾದಿಸಬೇಕೆ ಹೊರತು ಅಡ್ಡ ದಾರಿಯಿಂದಲ್ಲ. ದುರಾಸೆ ಬಿಟ್ಟು ತೃಪ್ತಿಯಡೆಗೆ ಬದುಕುವುದನ್ನು ನಾವು ನಮ್ಮ ಮಕ್ಕಳಿಗೆ ಹೇಳಿಕೊಡಬೇಕಿದೆ ಎಂದು ಅವರು ತಿಳಿಸಿದರು. ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಮಾತನಾಡಿ, ಕಾನೂನು ಹಾಗೂ ಕಾಯಿದೆಗಳಿಂದ ಸಮಾಜದಲ್ಲಿರುವ ಭ್ರಷ್ಟಾಚಾರ ನಿಯಂತ್ರಿಸಬಹುದೇ ಹೊರತು ನಿರ್ಮೂಲನೆ ಮಾಡುವುದು ಅಸಾಧ್ಯ. ನಾಗರಿಕ ಸಮಾಜದ ಸಂಪೂರ್ಣ ಬೆಂಬಲ, ಜಾಗೃತಿಯಿಂದ ಮಾತ್ರ ಸಂಪೂರ್ಣವಾಗಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಸಾಧ್ಯ. ಭ್ರಷ್ಟಾಚಾರ ನಿರ್ಮೂಲನೆ ಮೊದಲು ಮನೆಯಿಂದ ಆರಂಭಿಸಬೇಕು ಎಂದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಆರ್ಶೀವಚನ ನೀಡಿದರು. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಬಿ.ಶ್ರೀನಿವಾಸೇ ಗೌಡ, ಉಚ್ಚನ್ಯಾಯಾಲಯದ ವಕೀಲ ಬೋಳನಹಳ್ಳಿಯ ಬಿ.ಎಸ್. ನಾಗರಾಜ್ ಮಾತನಾಡಿದರು.



ಬೋಳನಹಳ್ಳಿಯಲ್ಲಿ ಶ್ರೀಮಾತೇ ಮಾಳಿಗೇಶ್ವರಿ ಸೇವಾಟ್ರಸ್ಟ್‌ವತಿಯಿಂದ ನೂತನವಾಗಿ ನಿರ್ಮಿಸಿರುವ ಶ್ರೀಮಾತೇ ಮಾಳಿಗೇಶ್ವರಿ ಸಪ್ತಪದಿ ಮಂದಿರ ಉದ್ಘಾಟನಾ ಕಾರ್ಯಕ್ರಮವನ್ನು ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಉದ್ಘಾಟಿಸಿದರು.

ದಿಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಮನೆಯಲ್ಲಿ ಅಕ್ರಮ ಹಣ ಪತ್ತೆಯಾದ ಬಗ್ಗೆ ಶ್ರೀ ಸಾಮಾನ್ಯರಿಗೆ ನಡೆಸುವ ರೀತಿಯಲ್ಲೇ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಸುಪ್ರೀಂಕೋರ್ಟ್ ವರ್ಗಾವಣೆಗೊಳಿಸಿ ತನಿಖೆಗೆ ಆದೇಶಿಸಿರುವುದು ನನ್ನ ಪ್ರಕಾರ ಸರಿಯಾದ ಕ್ರಮವಲ್ಲ. – **ಸಂತೋಷ್ ಹೆಗ್ಡೆ,** ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ.

ಮಾನವೀಯ ಗುಣಗಳು: ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಭಾರತೀಯ ಸಂಸ್ಕಾರ ಪಾಲನೆಯಿಂದ ಮಾನವೀಯತೆ ಗುಣಗಳನ್ನು ಅಳವಡಿಸಿಕೊಳ್ಳಲು ಸಾಧ್ಯ. ತಮಿಳುನಾಡು ರಾಜ್ಯಪಾಲರ ಪ್ರಕರಣದಲ್ಲಿ ಇತ್ತೀಚೆಗೆ ರಾಷ್ಟ್ರಪತಿಗಳಿಗೆ ಸುಪ್ರೀಂಕೋರ್ಟ್ ನೀಡಿರುವ ಸೂಚನೆಗಳು ಜನರ ಹಿತದೃಷ್ಟಿಯಿಂದ ಸಮಂಜಸವಾಗಿವೆ ಎಂದರು.

ಶ್ರೀ ಮಾತೇ ಮಾಳಿಗೇಶ್ವರಿ ಸಪ್ತಪದಿ ಮಂದಿರ ಟ್ರಸ್ಟ್ ಮುಖ್ಯಸ್ಥ ಮತ್ತು ಹೈಕೋರ್ಟ್ ವಕೀಲ ಬಿ.ಎಸ್.ನಾಗರಾಜ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.ತಾಲೂಕು ವಕೀಲರ ಸಂಘದ ಅಧ್ಯಕ್ಷ ಶಿವಣ್ಣೇಗೌಡ, ಕುಮಾರ್, ವಕೀಲ ಬಿ.ಎಸ್.ಯೋಗಾನಂದ ಕುಮಾರ್, ಮೋಹನ್, ಮಲ್ಲೇಶ್, ರಾಮಕೃಷ್ಣಗೌಡ, ಮುಖಂಡರಾದ ಬೋಳನಹಳ್ಳಿ, ಹೊಸ ರಾಮನಹಳ್ಳಿ, ಚೋಳೇನಹಳ್ಳಿ, ರಂಗಯ್ಯ ನಕೊಪ್ಪಲು, ಎಮ್ಮೆಕೊಪ್ಪಲು ಮತ್ತು ಶ್ಯಾನುಭೋಗನಹಳ್ಳಿ ಗ್ರಾಮಸ್ಥರು ಮತ್ತು ಮುಖಂಡರುಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಂದಿರ ಸ್ಥಾಪನೆಗೆ ನೆರವಾದ ಗಣ್ಯರನ್ನು ಸನ್ಮಾನಿಸಲಾಯಿತು.

ಭಾರೀ ಮಳೆಗೆ ಮನೆಗಳಿಗೆ ಹಾನಿ



ಬೆಟ್ಟದಪುರ: ಸಮೀಪದ ಚನ್ನಕೇಶವಪುರ ಗ್ರಾಮದಲ್ಲಿ ಶುಕ್ರವಾರ ಸಂಜೆ ಸುರಿದ ಭಾರೀ ಮಳೆಗೆ ಹಲವಾರು ಮನೆಗಳ ಚಾವಣಿ ಮತ್ತು ಶೀಟ್‌ಗಳು ಹಾರಿಹೋಗಿದ್ದು ಗ್ರಾಮಸ್ಥರು ಬೀದಿಗೆ ಬಿದ್ದಿದ್ದಾರೆ. ಭಾರೀ ಬಿರುಗಾಳಿಗೆ ತೆಂಗಿನ ತೋಟದಲ್ಲಿ ತೆಂಗಿನ ಮರ ಮತ್ತು ಅಡಿಕೆ ಮರಗಳು ನೆಲಕ್ಕುರುಳಿವೆ. ಮನೆ ಕಳೆದುಕೊಂಡ ಬಡವರಿಗೆ ಕೂಡಲೇ ಸರ್ಕಾರ ಪರಿಹಾರ ನೀಡಬೇಕೆಂದು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸುಂದರೇಗೌಡ ಒತ್ತಾಯಿಸಿದ್ದಾರೆ.

ಸುಶೀಲಬಾಯಿ ನಿಧನ

ನಂಜನಗೂಡು: ತಾಲೂಕಿನ ರಿತ್ತಿ ವಂಶಸ್ಥರಾದ ಶ್ರೀಮತಿ ಸುಶೀಲಬಾಯಿ ಅವರು ಶನಿವಾರ ಬೆಂಗಳೂರಿನ ತಮ್ಮ ಮಗಳ ನಿವಾಸದಲ್ಲಿ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.



ಕಳೆದ ಕೆಲವು ದಿನಗಳಿಂದ ವಯೋಸಹಜ ಕಾರಣಗಳಿಂದಾಗಿ ಅವರು ಅಸ್ವಸ್ಥಗೊಂಡಿದ್ದರು. ಇಬ್ಬರು ಪುತ್ರಿಯಾರೂ ಸೇರಿದಂತೆ ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಅಪಾರ ಬಂಧುಬಾಂಧವರನ್ನು ಅವರು ಅಗಲಿದ್ದಾರೆ. ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರು ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ನಂಜನಗೂಡು ಹದಿನಾರು ಕಾಲು ಮಂಟಪದ ರುದ್ರಭೂಮಿಯಲ್ಲಿ ನಡೆಯಲಿದೆ.

ಐಪಿಎಲ್ ಹಂಗಾಮ

ಕೊಹ್ಲಿ, ಜಾಕೋಬ್, ಶೆಫರ್ಡ್ ಅರ್ಧಶತಕ; ಸಿಎಸ್‌ಕೆ ವಿರುದ್ಧ ಆರ್‌ಸಿಬಿಗೆ ರೋಚಕ ಗೆಲುವು





ಬೆಂಗಳೂರು, ಮೇ 3– ವಿರಾಟ್ ಕೊಹ್ಲಿ, ಜಾಕೋಬ್ ಬೆಥೆಲ್ ಹಾಗೂ ರೊಮೆರಿಯೊ ಶೆಫರ್ಡ್ ಭರ್ಜರಿ ಅರ್ಧಶತಕದ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 2 ರನ್‌ಗಳ ರೋಚಕ ಜಯದೊಂದಿಗೆ ತವರಿನಲ್ಲಿ ಸತತ 2ನೇ ಗೆಲುವು ದಾಖಲಿಸಿತು.

ಇಲ್ಲಿನ ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಕಿಕ್ಕಿರಿದು ತುಂಬಿದ್ದ ಕ್ರಿಕೆಟ್ ಅಭಿಮಾನಿಗಳಿಗೆ ಶನಿವಾರ ನಡೆದ ಜಿದ್ದಾಜಿದ್ದಿನ ಪಂದ್ಯ ರಸದೌತಣ ನೀಡಿತು. ಕೊನೆ ಎಸೆತದವರೆಗೂ ತೀವ್ರ ಕುತೂಹಲದಿಂದ ಕೂಡಿದ್ದ ಪಂದ್ಯದಲ್ಲಿ ಕಡೆಗೂ ಆರ್‌ಸಿಬಿ ರೋಚಕ ಗೆಲುವಿನೊಂದಿಗೆ ಅಗ್ರಸ್ಥಾನಕ್ಕೆರಿದರೆ, ಸತತ ನಾಲ್ಕನೆ ಸೋಲು ಕಂಡು, ಈಗಾಗಲೇ ಟೂರ್ನಿಯಿಂದ ಹೊರಬಿದ್ದಿರುವ ಸಿಎಸ್‌ಎಸ್‌ಕೆ ಕೊನೆಯ ಸ್ಥಾನದಲ್ಲೇ ಉಳಿಯಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಉತ್ತಮ ಆರಂಭ ಪಡೆಯಿತು. ಆರಂಭಿಕರಾದ ವಿರಾಟ್ ಕೊಹ್ಲಿ ಹಾಗೂ ಜಾಕೋಬ್ ಬೆಥೆಲ್ ಮೊದಲ ವಿಕೆಟ್‌ಗೆ 97 ರನ್‌ಗಳ ಜೊತೆಯಾಟವಾಡಿದರು. ವಿರಾಟ್ ಕೊಹ್ಲಿ 33 ಎಸೆತಗಳಲ್ಲಿ 5 ಬೌಂಡರಿ, 5 ಸಿಕ್ಸರ್ ಸಹಿತ 62 ರನ್ ಗಳಿಸಿದರೆ, ಜಾಕೋಬ್ ಬೆಥೆಲ್ 33 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸ್ ಸಹಿತ 55 ರನ್‌ಗಳಿಸಿದರು. ಈ ಮೂಲಕ ಕೊಹ್ಲಿ ಸತತ 4ನೇ ಅರ್ಧಶತಕ ದಾಖಲಿಸಿದರೆ, 21 ವರ್ಷದ ಜಾಕೋಬ್ ಬೆಥೆಲ್ ಚೊಚ್ಚಲ ಅರ್ಧಶತಕ ಗಳಿಸಿದರು.

ರೊಮೆರಿಯೊ ಶೆಫರ್ಡ್ ದಾಖಲೆ: ಕೊನೆಯ ಮೂರು ಓವರ್‌ಗಳಿದ್ದಾಗ ಕ್ರಿಸ್‌ಗೆ ಬಂದ ಆಲ್‌ರೌಂಡರ್ ರೊಮೆರಿಯೊ ಶೆಫರ್ಡ್, ಸ್ಟೇಡಿಯಂನಲ್ಲಿ ರನ್ ಮಳೆ ಸುರಿಸಿದರು. ಕೇವಲ 14 ಎಸೆತಗಳನ್ನು ಎದುರಿಸಿದ ಶೆಫರ್ಡ್, 378ರ ಸರಾಸರಿ ಸ್ಟ್ರೈಕ್‌ರೇಟ್‌ನಲ್ಲಿ 4 ಬೌಂಡರಿ, 6 ಭರ್ಜರಿ ಸಿಕ್ಸರ್ ಸಹಿತ 53 ರನ್ ಸಿಡಿಸಿ, ವೇಗದ ಅರ್ಧಶತಕದ ದಾಖಲೆ ಬರೆದರು. ಅಂತಿಮವಾಗಿ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 213 ರನ್ ಕಲೆಹಾಕಿತು. ಸಿಎಸ್‌ಕೆ ಪರ ಮತೀಷ್ ಪತಿರಾಣ 3 ವಿಕೆಟ್ ಪಡೆದರು.

ಗೆಲುವಿನ ಹೋರಾಟ ನಡೆಸಿದ ಸಿಎಸ್‌ಕೆ: 214 ರನ್‌ಗಳ ಗುರಿಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ ಗೆಲುವಿಗಾಗಿ ಕೊನೆ ಎಸೆತದವರೆಗೂ ಹೋರಾಟ ನಡೆಸಿತು. 17 ವರ್ಷದ ಯುವ ಪ್ರತಿಭೆ ಆಯುಷ್ ಮ್ಹಾತ್ರೆ 48 ಎಸೆತಗಳಲ್ಲಿ 9 ಬೌಂಡರಿ, 5 ಸಿಕ್ಸ್ ಸಹಿತ 94 ರನ್‌ಗಳಿಸಿ, ಶತಕದಂಚಿನಲ್ಲಿ ಎಡವಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಪ್ರದರ್ಶನ ನೀಡಿದ ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜಾ 45 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸ್ ಸಹಿತ 77 ರನ್‌ಗಳಿಸಿ ಅಜೇಯರಾಗುಳಿದರು. ಅಂತಿಮವಾಗಿ 5 ವಿಕೆಟ್ ನಷ್ಟಕ್ಕೆ 211 ರನ್ ಗಳಿಸಿದ ಸಿಎಸ್‌ಕೆ, 2 ರನ್‌ಗಳ ವಿರೋಚಿತ ಸೋಲು ಅನುಭವಿಸಿತು. ಆರ್‌ಸಿಬಿ ಪರ ಲುಂಗಿ ಎನ್‌ಗಿಡಿ 3 ವಿಕೆಟ್ ಪಡೆದು ಮಿಂಚಿದರೆ, ಕೃನಾಲ್ ಪಾಂಡ್ಯ, ಯಶ್ ದಯಾಳ್ ತಲಾ 1 ವಿಕೆಟ್ ಪಡೆದರು. ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದ ರೊಮೆರಿಯೊ ಶೆಫರ್ಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	11	8	3	0	16
ಮುಂಬೈ	11	7	4	0	14
ಗುಜರಾತ್	10	7	3	0	14
ಪಂಜಾಬ್	10	6	3	0	13
ಡೆಲ್ಲಿ	10	6	4	0	12
ಲಕ್ನೋ	10	5	5	0	10
ಕೋಲ್ಕತ್ತಾ	10	4	5	0	9
ರಾಜಸ್ಥಾನ್	11	3	8	0	6
ಹೈದರಾಬಾದ್	10	3	7	0	6
ಚೆನ್ನೈ	11	2	9	0	4

ಇಂದಿನ ಪಂದ್ಯಗಳು

ಕೊಲ್ಕತ್ತಾ ನೈಟ್ ರೈಡರ್ಸ್
V/S
ರಾಜಸ್ಥಾನ್ ರಾಯಲ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ಈಡೆನ್ ಗಾರ್ಡನ್ಸ್, ಕೊಲ್ಕತ್ತಾ

ಪಂಜಾಬ್ ಕಿಂಗ್ಸ್
V/S
ಲಕ್ನೋ ಸೂಪರ್ ಜೈಂಟ್ಸ್
ಸಮಯ: ಸಂಜೆ 7.30
ಸ್ಥಳ : ಹಿಮಾಚಲ ಪ್ರದೇಶ್ ಕ್ರೀಡಾಂಗಣ, ಧರ್ಮಶಾಲ

ಹಲಸು ಮೇಳಕ್ಕೆ ಜನಜಾತ್ರೆ

● ಹಲಸಿನ ಹಣ್ಣಿನಲ್ಲಿ ತಯಾರಿಸಿದ ತಿನಿಸುಗಳಿಗೆ ಮಾರುಹೋದ ಮೈಸೂರಿಗರು ● ಎರಡು ದಿನದ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ





ಪ್ರದರ್ಶಿಸಿರುವ ನಾನಾ ತಳಿಯ ಹಲಸಿನ ಹಣ್ಣುಗಳು



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆರಂಭವಾದ ಎರಡು ದಿನಗಳ ಹಲಸು ಮೇಳಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬರಹಗಾರ, ಹಲಸು ಬೆಳೆಗಾರ ಕೃಷ್ಣಮೂರ್ತಿ ಬಿಳಿಗೆರೆ ಚಾಲನೆ ನೀಡಿ, ಹಲಸಿನ ಹಣ್ಣನ್ನು ಪ್ರದರ್ಶಿಸಿದರು.

ಮೈಸೂರು, ಮೇ 3(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭವಾದ ಹಲಸು ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಘಮಗಮಿಸುವ, ಬಗೆ ಬಗೆಯ ಹಲಸಿನ ಹಣ್ಣು ಹಾಗೂ ಹಲಸಿನ ಹಣ್ಣಿನಿಂದ ತಯಾರಿಸಿರುವ ವಿವಿಧ ತಿನಿಸುಗಳ ಸೇವನೆಗೆ ಜನ ಮಾರುಹೋದರು.

ಸಹಜ ಸಮೃದ್ಧ ಸಂಸ್ಥೆ ಹಾಗೂ ರೋಟರಿ ಮೈಸೂರು ಪಶ್ಚಿಮ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಹಲಸು ಮೇಳದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ವಿವಿಧೆಡೆಯಿಂದ ಹಲಸು ಬೆಳೆಗಾರರು ತಮ್ಮ ಜಮೀನಿನಲ್ಲಿ ಬೆಳೆದ ವಿವಿಧ ತಳಿಯ ಹಲಸಿನ ಹಣ್ಣನ್ನು ಮಾರಲು ತಂದಿದ್ದು, ಹಲಸು ಪ್ರಿಯರಿಗೆ ರಸದೌತಣ ಉಣಬಡಿಸುತ್ತಿದ್ದಾರೆ. ನಂಜರಾಜ ಬಹದ್ದೂರ್ ಛತ್ರದಲ್ಲಿ ಹಲಸಿನ ಹಣ್ಣಿನ ಸುವಾಸನೆ ಗ್ರಾಹಕರನ್ನು ಸೆಳೆಯುತ್ತಿದ್ದು, ಒಂದೇ ಸ್ಥಳದಲ್ಲಿ ವಿವಿಧ ಬಗೆಯ ಹಲಸಿನ ಹಣ್ಣು ಲಭ್ಯವಿದ್ದು, ವಿವಿಧ ರುಚಿಯುಳ್ಳ ಹಲಸಿನ ಸವಿ ಸವಿಯಲು ಜನ ಮುಗಿ ಬಿದ್ದಿದ್ದಾರೆ.

ವಿಷ ರಹಿತ, ರಾಸಾಯನಿಕ ಮುಕ್ತ: ಹಲಸು ಮೇಳಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬರಹಗಾರ, ಹಲಸು ಬೆಳೆಗಾರ ಕೃಷ್ಣಮೂರ್ತಿ ಬಿಳಿಗೆರೆ ಚಾಲನೆ ನೀಡಿದ ಬಳಿಕ ಮಾತನಾಡಿ, ತೆಂಗಿನ ಮರಕ್ಕೆ ನಾವು ಕಲ್ಪವೃಕ್ಷ ಎನ್ನುತ್ತೇವೆ. ಇದೀಗ ಆ ಸಾಲಿನಲ್ಲಿ ಹಲಸಿನ ಮರವೂ ಕಲ್ಪವೃಕ್ಷದಂತೆ ರೈತರಿಗೆ, ಜನರಿಗೆ ಉಪಕಾರಿಯಾಗುತ್ತಿದೆ. ಹಲಸಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ವಿಷಮುಕ್ತ, ರಾಸಾಯನಿಕ ಮುಕ್ತ ಏಕೈಕ ಹಣ್ಣು ಹಲಸಿನ ಹಣ್ಣಾಗಿದೆ. ವಾಸನೆ ಎಂದು ಮೂಗು ಮುರಿದವರು, ಅಂಟು ಎಂದು ಜರಿದವರು, ಹೊಟ್ಟೆ ನೋವಿನ ಹಣ್ಣು ಎಂದು ನಿರ್ಲಕ್ಷ್ಯ ಮಾಡಿದ್ದ ಜನರೇ ಇದೀಗ ಹಲಸಿನ ಹಣ್ಣನ್ನು ಹಾಡಿ ಹೊಗಳುತ್ತಿದ್ದಾರೆ. ಜೇನು ಸವಿದಂತೆ ಹಲಸನ್ನು ಸವಿಯುವಂತಾಗಿದೆ. ಔಷಧೀಯ ಗುಣಗಳಿಂದ ಸಮೃದ್ಧವಾಗಿರುವ ಹಲಸಿನ ಘಮಲು ನಮ್ಮ ಮನೆ ಮನಗಳಲ್ಲಿ ಸದಾ ಹರಡಬೇಕು. ಬಯಲು ಸೀಮೆ, ಹಳ್ಳಿಗರ ಕಲ್ಪವೃಕ್ಷ. ಬದಲಾದ ವಾತಾವರಣ ಮತ್ತು ಮಳೆಗಾಲಕ್ಕೆ ಹೊಂದಿಕೊಂಡು ಬೆಳೆಯುವ ಸಾಮರ್ಥ್ಯವಿರುವ ಹಲಸು ಭವಿಷ್ಯದ ಬೆಳೆಯಾಗಿದೆ ಎಂದು ತಿಳಿಸಿದರು.

ಹಲಸು ಇಂದು ವಿಶ್ವ ವ್ಯಾಪಿಯ ಹಣ್ಣಾಗಿದೆ. ಕೇವಲ ಹಣ್ಣು ಮಾತ್ರವಲ್ಲದೆ, ಅದರ ಬೀಜ, ತಿರುಳಿನಿಂದಲೂ ಅನೇಕ ತಿನಿಸು ತಯಾರಿಸಲಾಗುತ್ತಿದೆ. ಸಿದ್ದು ಹಲಸು, ಶಂಕರ ಹಲಸು ಸೇರಿದಂತೆ ವಿವಿಧ ಬಗೆಯ ಹಲಸು ಜನರ ನಾಲಿಗೆ ತಣಿಸುತ್ತಿವೆ. ಒಂದು ಹಲಸಿನ ಮರ 150ರಿಂದ 200 ವರ್ಷ ದೀರ್ಘವಾಗಿ ಬಾಳಬಲ್ಲದ್ದಾಗಿದೆ. ಇದು ತಲೆಮಾರಿನ ಮರ ಅಲ್ಲ, ತಲೆ ಕಾಯುವ ಮರ ಎಂದರು.

ಹಲಸಿನ ಹಬ್ಬ ರಾಷ್ಟ್ರೀಯ ಹಬ್ಬವಾಗಿ ಆಚರಿಸಿ, ಹಲಸು ಬೆಳೆಗಾರರಿಗೆ ಉತ್ತೇಜನ ನೀಡಬೇಕು. ಬೇರೆ ಬೇರೆ ಹಣ್ಣು ಬೇರೆ ಬೇರೆ ಗಿಡ–ಮರದಲ್ಲಿ ಬೆಳೆದರೂ ರುಚಿ ಮಾತ್ರ ಒಂದೇ ಆಗಿರುತ್ತದೆ. ಆದರೆ, ಹಲಸಿನ ಹಣ್ಣಿನ ಒಂದು ಲಕ್ಷ ಮರವಿದ್ದರೂ, ಅದರಲ್ಲಿ ಬಿಡುವ ಹಣ್ಣಿನ ರುಚಿ ಬೇರೆ ಬೇರೆಯೇ ಆಗಿರುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ಹಲಸಿನ ಹಣ್ಣಿನಿಂದಲೂ ವಿವಿಧ ತಿನಿಸು ಮಾಡಲಾಗುತ್ತಿದೆ. ಅದರ ಬೀಜದಿಂದಲೂ ಅನೇಕ ತಿನಿಸು ಮಾಡಬಹುದಾಗಿದೆ. ಹಲಸಿನ ದೋಸೆ, ಇಡ್ಲಿ ಸೇರಿದಂತೆ ಇನ್ನಿತರ ತಿನಿಸು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಹಲಸಿನ ಉತ್ಪನ್ನಗಳನ್ನು ಬಳಸಿದಷ್ಟು ಆರೋಗ್ಯ ಕಾಪಾಡಿಕೊಳ್ಳಬಹುದು. ಹಲಸಿನ ಬೀಜದಿಂದ ಬಿಪಿ, ಶುಗರ್ ಕಡಿಮೆಯಾಗುತ್ತದೆ ಎಂದು ವೈದ್ಯಲೋಕ ಸ್ಪಷ್ಟಪಡಿಸಿದೆ. ಈ ಹಣ್ಣಿಗೆ ಚರಿತ್ರೆ ಇದೆ. ಸಾಧ್ಯವಾದಷ್ಟು ನಾಟಿ ತಳಿಯ ಹಲಸನ್ನು ಬೆಳೆಸಲು ರೈತರು ಮುಂದಾಗಬೇಕು ಎಂದು ಸಲಹೆ ನೀಡಿದರು.

ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಮಂಜುನಾಥ ಅಂಗಡಿ ಮಾತನಾಡಿ, ಜೇನು ಸವಿದಂತೆನಿಸುವ ಹಲಸು, ಔಷಧೀಯ ಗುಣಗಳಿಂದ ಸಮೃದ್ಧವಾಗಿದೆ. ಕ್ಯಾನ್ಸರ್ ವಿರುದ್ಧ ಹೋರಾಡುವ ತಾಕತ್ತು ಹಲಸಿಗಿದೆ. ಈ ಹಣ್ಣಿನ ಬಳಕೆ ಹೆಚ್ಚಾಗಬೇಕು ಎಂದರು.

ಸಹಜ ಸಮೃದ್ಧದ ನಿರ್ದೇಶಕ ಜಿ. ಕೃಷ್ಣಪ್ರಸಾದ್ ಮಾತನಾಡಿ, ಗುಣಮಟ್ಟದ ತಳಿಯ ಹಲಸಿಗೆ ಬೇಡಿಕೆ ಇದೆ. ವಿಶೇಷವಾಗಿ ಕೆಂಪು ಹಲಸಿನ ತಳಿಗಳಿಗೆ ಹೊರರಾಜ್ಯದಲ್ಲೂ ಬೇಡಿಕೆ ಇದೆ. ರೈತರು ಈ ಅವಕಾಶ ಬಳಸಿಕೊಂಡು, ಹಲಸಿನ ಕೃಷಿ ಮಾಡಲು ಮುಂದಾಗಬೇಕು. ನಿರ್ಲಕ್ಷಿತ ಬೆಳೆಗಳನ್ನು ಮುಖ್ಯವಾಹಿನಿಗೆ ತರಲು ಅಗತ್ಯವಿರುವ ನೆರವನ್ನು ಸರ್ಕಾರ ನೀಡಬೇಕು. ನಮ್ಮ ಸಂಸ್ಥೆ ಸರ್ಕಾರದ ನೆರವಿಲ್ಲದೆ ಹಲಸು ಮೇಳ ನಡೆಸುತ್ತಾ ಬಂದಿದೆ ಪಶ್ಚಿಮಘಟ್ಟಗಳಲ್ಲಿ ಹುಟ್ಟಿದ ಹಲಸು ಇದೀಗ ವಿಶ್ವದ ಅನೇಕ ರಾಷ್ಟ್ರಗಳನ್ನೂ ವ್ಯಾಪಿಸಿದೆ. ಗಿಡ ನೆಟ್ಟ 3–4 ವರ್ಷದಲ್ಲಿಯೇ ಹಲಸು ಹಣ್ಣು ಸಿಗಲಿದ್ದು, ರೈತರಿಗೆ ಲಾಭದಾಯಕ ಬೆಳೆಯಾಗಿ ಮಾರ್ಪಟ್ಟಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ 'ಜ್ಯೂಸ್ ಬಿಲ್ವ' ಮಾಹಿತಿ ಪತ್ರವನ್ನು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಾವಯವ ಕೃಷಿಕ ಶಿವನಾಪುರದ ರಮೇಶ್ ಬಿಡುಗಡೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಅಧ್ಯಕ್ಷ ನಾಗೇಶ್ ಎಂ.ಎಲ್. ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಜ ಸಮೃದ್ಧದ ಕಾರ್ಯದರ್ಶಿ ಆನಂದತೀರ್ಥ ಪ್ಯಾಟಿ, ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಕಾರ್ಯದರ್ಶಿ ದೇವರಾಜು ಎಂ, ಸಹಜ ಸಮೃದ್ಧಿಯ ಸೀಮಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಿ.ಶಾಂತಕುಮಾರ್ ನಿರೂಪಿಸಿದರು.

ಮೇಳದ ಆಕರ್ಷಣೆ-ಕೆಂಪು ಹಲಸು

ಎರಡು ದಿನಗಳ ಹಲಸಿನ ಹಬ್ಬದಲ್ಲಿ ಕರ್ನಾಟಕದ ಹೆಮ್ಮೆಯ ಹಲಸಿನ ತಳಿಗಳಾದ ತೂಬಗೆರೆ ಕೆಂಪು, ಪ್ರಕಾಶ್ ಚಂದ್ರ, ರುದ್ರಾಕ್ಷಿ, ಶಂಕರ, ಸಿದ್ದು ಹಲಸು, ಹನಿಜಾಕ್, ಲಾಲ್‌ಬಾಗ್ ಮಧುರ, ರಾಮಚಂದ್ರ, ಚಂದ್ರ ಹಲಸು, ಅಂಬಲಿ ಹಲಸು, ಸದಾನಂದ, ಸರ್ವಋತು, ಅಂಟು ರಹಿತ ಮೊದಲಾದ 60 ತಳಿಗಳು ಪ್ರದರ್ಶನಕ್ಕೆ ಬಂದಿವೆ ಇದರ ಜತೆಗೆ ಜೇನು ಹಲಸು, ಬಿಳಿ ಹಲಸು, ಸಕ್ಕರಾಯಪಟ್ಟಣ ಹಲಸು, ಕಲ್ಲು ಹಲಸು, ಶಂಖ ಹಲಸು, ಕಪ್ಪುಚುಕ್ಕೆ ಹಲಸು, ಏಕಾದಶಿ ಹಲಸು, ಪಲ್ಯದ ಹಲಸು, ಬೆಟ್ಟದ ಹಲಸು, ನಾಗಚಂದ್ರ ಹಲಸುಗಳ ಪ್ರದರ್ಶನವೂ ಇದೆ. ಕೆಂಪು ಹಲಸಿನ ತಳಿಗಳಾದ ಸಿದ್ದು, ಶಂಕರ, ಡೆಂಗ್ ಸೂರ್ಯ, ರುದ್ರಾಕ್ಷಿ ಮತ್ತು ಇತರೆ ಗುಣಮಟ್ಟದ ಹಲಸಿನ ತಳಿಯ ಗಿಡಗಳು ಮಾರಾಟಕ್ಕಿವೆ. ಹಲಸಿನ ಹಬ್ಬದಲ್ಲಿ, ಕೆಂಪು, ಹಳದಿ ಮತ್ತು ಬಿಳಿ ಹಲಸಿನ ತಳಿ ಹಣ್ಣುಗಳು ಮಾರಾಟಕ್ಕೆ ಬಂದಿವೆ. ಹಲಸಿನ ರಸಾಯನ, ಐಸ್ ಕ್ರೀಂ, ಚಿಪ್ಸ್, ಚಾಕೋಲೇಟ್, ಹಪ್ಪಳ, ಹಲ್ವ, ಕಬಾಬ್, ಹೋಳಿಗೆ, ವಡೆ, ದೋಸೆ, ಪಲ್ಯ, ಬಿರಿಯಾನಿ ಇನ್ನಿತರ ಹಲಸಿನ ಖಾದ್ಯದ ಮಳಿಗೆಗಳು ಇವೆ. ನಾಳೆ(ಮೇ 4) ರಾತ್ರಿ 8.30ರವರೆಗೂ ಮೇಳ ವೀಕ್ಷಿಸಬಹುದಾಗಿದೆ.



ನಾನಾ ತಳಿಯ ಹಲಸಿನ ಗಿಡಗಳ ಮಾರಾಟಕ್ಕಿಡಲಾಗಿದೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕನ್ನಡಿಗರಿಗೆ ಅವಮಾನ ಆರೋಪ

ಸೋನು ನಿಗಮ್ ವಿರುದ್ಧ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲು



ಗಾಯಕ ಸೋನು ನಿಗಮ್ ವಿರುದ್ಧ ಮೈಸೂರಿನ ಕನ್ನಡಾಂಬೆ ರಕ್ಷಣೆ ವೇದಿಕೆ ಕಾರ್ಯಕರ್ತರು, ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದರು.

ಮೈಸೂರು, ಮೇ 3(ಜಿಎ)–ಕನ್ನಡಿಗರಿಗೆ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ಖ್ಯಾತ ಗಾಯಕ ಸೋನು ನಿಗಮ್ ವಿರುದ್ಧ ಮೈಸೂರಿನ ಕನ್ನಡಾಂಬೆ ರಕ್ಷಣೆ ವೇದಿಕೆ ಕಾರ್ಯಕರ್ತರು, ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬೆಂಗಳೂರಿನ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಯಕ ಸೋನು ನಿಗಮ್ ಅವರಿಗೆ ಕನ್ನಡ ಹಾಡು ಹೇಳಿ ಎಂದು ಸಭಿಕರು ಕೇಳಿದ್ದಕ್ಕೆ ಅವರು ಇದಕ್ಕೇನೆ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿ ನಡೆದಿರುವುದು ಎಂದು ಹೇಳುವ ಮೂಲಕ ಕನ್ನಡಿಗರಿಗೆ ಅಪಮಾನ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಸೋನು ನಿಗಮ್ ನೀಡಿರುವ ಹೇಳಿಕೆ ಕನ್ನಡಿಗರನ್ನು ಕೀಳಾಗಿ ಕಂಡಿರುವುದು ಮಾತ್ರವಲ್ಲ. ಕನ್ನಡಿಗರನ್ನು ದೇಶದ್ರೋಹಿಗಳೆಂದು ಬಿಂಬಿಸಿ ಅವರನ್ನು ಖಳನಾಯಕರನ್ನಾಗಿ ಮಾಡುವ ಹುನ್ನಾರ ಹೊಂದಿದೆ. ಈ ಕೂಡಲೇ ದೂರು ದಾಖಲಾಗಬೇಕು. ಇಲ್ಲವಾದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ತೀವ್ರ ಸ್ವರೂಪದ ಹೋರಾಟಕ್ಕೆ ಕೈ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇಂತಹ ನಾಡದ್ರೋಹಿಗಳನ್ನು ಕರ್ನಾಟಕದ ನೆಲದಲ್ಲಿ ಮತ್ತು ಕನ್ನಡ ಚಲನಚಿತ್ರಗಳಲ್ಲಿ ಅವಕಾಶವನ್ನು ಕೊಡದೆ ಯಾವುದೇ ಸಂಗೀತ ಕಾರ್ಯಕ್ರಮಗಳಿಗೆ ಅವಕಾಶ ನೀಡದೆ ನಿರ್ಬಂದನೆ ವಿಧಿಸಿ ಇಂತಹ ಸಂಕುಚಿತ ಮನೋಭಾವನೆ ಹೊಂದಿರುವ ಗಾಯಕನ ಎಲ್ಲಾ ಕಾರ್ಯಕ್ರಮಗಳನ್ನು ರದ್ದು ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಅಧ್ಯಕ್ಷ ಬಿ.ಬಿ.ರಾಜಶೇಖರ್, ಮಂಜುಳಾ, ನಂಜುಂಡ, ಮಹದೇವಸ್ವಾಮಿ, ಭಾಗ್ಯ, ಸಂತೋಷ್, ಪರಮೇಶ್ ಉಪಸ್ಥಿತರಿದ್ದರು.

10ನೇ ವರ್ಷದ ಸವಿನೆನಪು



ನೀನು ನಮ್ಮನ್ನು ಅಗಲಿ ಇಂದಿಗೆ 10 ವರ್ಷ ವಾಯಿತು. ಸದಾ ನಿಮ್ಮ ನೆನಪು ನಮ್ಮನ್ನು ಕಾಡುತ್ತಿದೆ.
ಇಂತಿ ದುಃಖತಪ್ತರು
ತಂದೆ: ಪಿ. ಮಹದೇವಪ್ಪ
ತಾಯಿ: ಆರ್. ಎಸ್. ಸರೋಜ
ತಮ್ಮ: ಎಂ. ವಿನಯ್
ಪತಿ: ಟಿ. ರತೀಶ್
ಪುತ್ರಿ: ತೋಷನಿ.ಆರ್
ಮಾವ: ನಾಗೇಂದ್ರಸ್ವಾಮಿ
ಅತ್ತೆ: ಪದ್ಮಾ

ಎಂ. ಅಂಬಿಕಾ
ಚಿಲಕವಾಡಿ, ಕೊಳ್ಳೇಗಾಲ ತಾ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ


ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

11ನೇ ವರ್ಷದ ಸವಿನೆನಪು



ಎಂ.ಬಿ.ಆನಂದಕುಮಾರ್
ಎಸ್.ಬಿ.ಎಂ. (ನೌಕರ)
ನೀನು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ತಂದೆ, ತಾಯಿ ಮತ್ತು ಕುಟುಂಬವರ್ಗದವರು

OBITUARY



Regret to inform you that **Satyanarayana Setty,** expired on 2/5/2025 at 1:30pm. Last darshan is arranged on Sunday 4/5/2025 between 8am to 11am at his residence # 988, Sanmarga, 12th cross, Siddarthnagar, Mysore-11.

Satyanarayana Setty
UCO Bank Ex Chief Cashier
1942 - 2025

Grieving:
Family and Relatives

PUBLIC NOTICE

Notice is hereby given that Sri.KK.Rajesh Babu S/o..K.S.Krishna Shetty and Smt.Seema Rajesh are desirous to sell their under mentioned property to my clients and any person or persons claiming any interest on the under mentioned property or any part thereof, is hereby required to communicate the same to me, with documentary evidence at my office mentioned below within **15 days** from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

All that piece and parcel of agricultural land in Sy.No.524 measuring 4 acres, Sy.No.547 measuring 4 acre and 13 guntas , Sy.no. 549, measuring 4 acre and 07 guntas, Sy.no. 544/1 measuring 1 acres 26 guntas, Sy.No.548 measuring 3 acres 39 guntas, Sy.No. 546 measuring 4 acre 13 guntas, Sy.No. 577 measuring 2 acre, Sy.No. 564 measuring 4 acres, Sy.No. 545 measuring 4 acres and 7 guntas , Sy.No. 544/2 measuring 2 acre and 33 guntas, Sy.No.552 measuring 4 acres, all situated at Yadavanahalli village, begur hobli, Gundlupete taluk, Chamarajanagara district.

M.S. MANJUNATH, ADVOCATE,
MS ASSOCIATES
No.F-4, First floor, BASCO Complex, Gandhibazaar Circle, Basavanagudi, Bangalore-560004, Ph No; 080-26673086
Mail ID : ms26673086@gmail.com
Bangalore Date: 02-05-2025

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಮಹದೇಶ್ವರ ಬಡಾವಣೆ, 9ನೇ ಕ್ರಾಸ್, ವಿಜಯನಗರ ಮುಖ್ಯ ರಸ್ತೆ, ಮನೆ ಸಂಖ್ಯೆ 588 ರಲ್ಲಿ ವಾಸವಾಗಿರುವ ಶ್ರೀ.ಮಲ್ಲಯ್ಯರವರ ಮಗ ಶ್ರೀ.ನಾಗೇಶ್ ಮತ್ತು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮ, ನಾಯಕರ ಬೀದಿ, ಮನೆ ಸಂಖ್ಯೆ 389/2ರಲ್ಲಿ ವಾಸವಾಗಿರುವ ಲೇಟ್. ವೈರಮುಡಿ ರವರ ಮಗ ಶ್ರೀ. ಚಂದ್ರಶೇಖರ್ ರವರುಗಳ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಗ್ರಾಮ ನಾಯಕರ ಬೀದಿ, ಮನೆ ಸಂಖ್ಯೆ 567ರಲ್ಲಿ ವಾಸವಾಗಿರುವ ಲೇಟ್. ರಾಜನಾಯಕರವರ ಧರ್ಮಪತ್ನಿ, ಶ್ರೀಮತಿ. ಮಂಚಮ ಮತ್ತು ಇವರ ಮಕ್ಕಳುಗಳಾದ ಶ್ರೀ. ಉಮೇಶ್, ಶ್ರೀಮತಿ. ಮಂಗಳ ಮತ್ತು ಶ್ರೀಮತಿ. ನಾಗಮ್ಮ ರವರುಗಳಿಂದ ಷೆಡ್ಯೂಲ್ ಸ್ವತ್ತನ್ನು ಜಂಟಿ ಅಭಿವೃದ್ಧಿ ಕರಾರು ಮತ್ತು ಜನರಲ್ ಪವರ್ ಆಫ್ ಅಟಾರ್ನಿಯನ್ನು ಪಡೆದು ಷೆಡ್ಯೂಲ್ ಸ್ವತ್ತನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ.

ಸದರಿ ಸ್ವತ್ತಿನಲ್ಲಿ ಯಾರಿಗಾದರೂ ಯಾವುದೇ ಹಕ್ಕಾಗಲೀ, ಹಿತಾಸಕ್ತಿಯಾಗಲೀ ಇದ್ದ ಪಕ್ಷದಲ್ಲಿ ಮತ್ತು ಸದರಿ ಸ್ವತ್ತನ್ನು ಜಂಟಿ ಅಭಿವೃದ್ಧಿ ಕರಾರು ಮತ್ತು ಜನರಲ್ ಪವರ್ ಆಫ್ ಅಟಾರ್ನಿಯ ವಿಚಾರದಲ್ಲಿ ಯಾವುದಾದರೂ ಆಕ್ಷೇಪಣೆ ವಗೈರೆಗಳಿದ್ದಲ್ಲಿ ತಮ್ಮಗಳ ಹಿತಾಸಕ್ತಿ ಮತ್ತು ಆಕ್ಷೇಪಣೆಗಳನ್ನು ಪೂರಕವಾದ ದಾಖಲಾತಿಗಳ ಮತ್ತು ಮಾಹಿತಿಗಳೊಡನೆ ನಮ್ಮ ಕಕ್ಷಿಗಾರರಿಗಾಗಲೀ, ಈ ಆಫೀಸಿಗಾಗಲೀ ಲಿಖಿತ ಮೂಲಕವಾಗಿ ಈ ತಿಳುವಳಿಕೆ ನೋಟೀಸು ಪ್ರಚುರವಾದ 7(ಏಳು) ದಿನಗಳೊಳಗೆ ತಿಳಿಯಪಡಿಸತಕ್ಕದ್ದು. ಅಂತಹ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸದ ಪಕ್ಷದಲ್ಲಿ ಸದರಿ ಸ್ವತ್ತು ಎಲ್ಲಾ ವಿಧವಾದ ವಿಲ್ಲಂಗಗಳಿಗೂ ಹೊರತಾಗಿರುತ್ತೆಂದು ನಮ್ಮ ಕಕ್ಷಿದಾರರು ತೀರ್ಮಾನಿಸಿ, ಷೆಡ್ಯೂಲ್ ಸ್ವತ್ತನ್ನು ಜಂಟಿ ಅಭಿವೃದ್ಧಿ ಕರಾರು ಮತ್ತು ಜನರಲ್ ಪವರ್ ಆಫ್ ಅಟಾರ್ನಿಯನ್ನು ಪಡೆಯುವ ವಿಚಾರದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವವರಾಗಿರುತ್ತಾರೆ. ನಂತರ ಬರಬಹುದಾದ ಯಾವ ಆಕ್ಷೇಪಣೆಗಳು ನಮ್ಮ ಕಕ್ಷಿಗಾರರನ್ನು ಬದ್ಧಪಡಿಸುವುದಿಲ್ಲವೆಂದು ಸಂಬಂಧಪಟ್ಟವರಿಗೆಲ್ಲ ಈ ಮೂಲಕ ಶೃತಪಡಿಸಿರುತ್ತೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮಕ್ಕೆ ಸೇರಿದ ಸರ್ವೆ ನಂ. 61/9 (ಹಳೇ ನಂ.61/1) ರಲ್ಲಿ ವಿಸ್ತೀರ್ಣ 01 ಎಕರೆ 07 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಬ್ಲಾಕ್ ನಂ. 02 ರ ಬಾಬ್ತು, ಪಶ್ಚಿಮಕ್ಕೆ : ಹಳ್ಳ, ಉತ್ತರಕ್ಕೆ : ಲಾ.ಸ.ನಂ.51 ರ ಬಾಬ್ತು, ದಕ್ಷಿಣಕ್ಕೆ : ಲಾಹಿ. ನಂ.61/2ರ ಬಾಬ್ತು, ಈ ಮಧ್ಯೆಯಿರುವ 01 ಎಕರೆ 07 ಗುಂಟೆ ಜಮೀನು.

ಸಹಿ/– ಎ.ಎನ್. ಪುಟ್ಟಸ್ವಾಮಿಗೌಡ
ಬಿ.ಎ. ಎಲ್‌ಎಲ್.ಬಿ..
ವಕೀಲರು ಮತ್ತು ನೋಟರಿ
ನಂ. 324/1, 1ನೇ ಫ್ಲೋರ್, ಡಿ.ಸುಬ್ಬಯ್ಯ ರಸ್ತೆ, ರಾಮಸ್ವಾಮಿ ಸರ್ಕಲ್ ಹತ್ತಿರ, ಮೈಸೂರು, ಮೊ: 9620562745

केन्द्रीय रेशम उत्पादन अनुसंधान एवं प्रशिक्षण संस्थान
Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi road, Srirampura Mysore 5780008
सं. सीएसबी/आरटीआई/एसएससी/2025-26 दि:Date: 02/05/2025

WALK-IN-INTERVIEW FOR THE POST OF JUNIOR RESEARCH FELLOW

A Walk-in-Interview will be held on **20/05/2025** at Central Sericultural Research and Training Institute, Srirampura, Mysuru - 570 008 as shown below:
'A' 01 (One) Junior Research Fellow (JRF) purely on contract basis under CSB approved Project **"Development and evaluation of anti-inflamatory and anti-acne cream from biomolecules extracted from waste generated from sericulture activities" (Project code: BPS 01050 SNC)** for a period Up to March 2026 or completion of project whichever is earlier under CSB Terms and Conditions.
Qualifications for Junior Research Fellow (JRF):
1. Three/Four years full time M.Sc. in relevant subject (Nenotechnology/ Biotechnology/Molecular Biology/Microbioloigy/Biochemistry/Sericulture/ Botany/Zoology), with minimum 60% of Marks (55% for SC/ST candidates).
Desirable qualifications: Candidate with working knowledge in Extraction and Characterization of bioctive compounds from biological samples. Preparation of nanobased formulations.
Walk in Interview will be held on 20/05/2025, time 10:30 AM (candidates should reach the venue by 9:30 AM for verification of documents, other recruitment procedures).
Interested can also visit our website www.csrtimys.res.in, https://csb.gov.in/ for details.
Sd/- Director , CSR &TI, Mysuru

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ
ದೂರವಾಣಿ ಸಂಖ್ಯೆ : 224027
E mail ID : dho.mandya@gmail.com
ಕಡತ ಸಂಖ್ಯೆ:ಸಿಬ್ಬಂದಿ(1)/04/2025–26 ದಿನಾಂಕ:03.05.2025

ನೇಮಕಾತಿ ಪ್ರಕಟಣೆ

ಗುತ್ತಿಗೆ ಆಧಾರದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ಹುದ್ದೆಗೆ ನೇಮಕಕ್ಕೆ ಅರ್ಜಿ ಆಹ್ವಾನ

ಉಲ್ಲೇಖ:– (1) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ/619/ಹೆಚ್‌ಎಸ್‌ಹೆಚ್/2022 ದಿನಾಂಕ:17–01–2024 ಸೇರ್ಪಡೆ ಆದೇಶ ದಿನಾಂಕ: 11.03.2024. (2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ:ಜೆಆರ್‌ಓ(1ಎ)/36/2023–24 ದಿನಾಂಕ:13–03–2024. (3) ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1), ಬೆಂಗಳೂರು ರವರ ಸುತ್ತೋಲೆ ಪತ್ರ ಸಂಖ್ಯೆ: HFW/21/HSH/2025 ದಿನಾಂಕ:08.01.2025. (4) ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1), ಬೆಂಗಳೂರು ರವರ ಸೇರ್ಪಡೆ ಪತ್ರ ಸಂಖ್ಯೆ: HFW/1/PRS/2025 ದಿನಾಂಕ:23.01.2025. (5) ಆಯುಕ್ತಾಲಯದ ಜೂಮ್ ಸಭಾನಡವಳಿ. (6) ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ರವರ ಕಛೇರಿ ಟಿಪ್ಪಣಿಯ ದಿನಾಂಕ:02–05–2025 ರಂದು ನೀಡಿರುವ ಆದೇಶದ ಮೇರೆಗೆ.

ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿನ ಖಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರ/ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ರೋಸ್ಟರ್ ಕಂ–ಮೆರಿಟ್ ಆದರಿಸಿ, ಮಾಸಿಕ ಸಂಭಾವನೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ರೂ.60,000/– ರೊಂದಿಗೆ ನೇಮಕ ಮಾಡಲು ಎಂ.ಬಿ.ಬಿ.ಎಸ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು Rolling Advertisement ಆಹ್ವಾನಿಸಲಾಗಿದೆ.

(1) ಅರ್ಜಿಗಳು ದೊರೆಯುವ ಸ್ಥಳ ಮತ್ತು ದಿನಾಂಕ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ದಿನಾಂಕ : 03.05.2025 ಬೆಳಿಗ್ಗೆ: 10:30 ರಿಂದ 05:30 ರವರೆಗೆ. (2) ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12.05.2025 ಸಮಯ: ಸಂಜೆ: 05:30ರ ಒಳಗೆ. (3) ಅರ್ಜಿಗಳನ್ನು ಪರಿಶೀಲಿಸುವ ದಿನಾಂಕ : 13.05.2025.

ನಿಭಂದನೆಗಳು:– ನೇಮಕಾತಿಯು ಸರ್ಕಾರದ ಆದೇಶದ ರೀತ್ಯ ಗುತ್ತಿಗೆ ಆಧಾರದ ನೇಮಕಾತಿ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟಿರುತ್ತದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/064/2025–26

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಕನನೀಸ ಮತ್ತು ಒಚ ಮಂಡಳಿ, ವಿಭಾಗ ಕಛೇರಿ,
ಜಲಭವನ, 1ನೇ ಮಹಡಿ, ಪಿ–4, 10ನೇ ಮುಖ್ಯ ರಸ್ತೆ,
3ನೇ ಅಡ್ಡ ರಸ್ತೆ, ಸರಸ್ವತಿ ಪುರಂ, ಮೈಸೂರು–09.
Ph: 0821-2543552 E-Mail: kwbmysdiv@gmail.com

ಟೆಂಡರ್ ಅಧಿಸೂಚನೆ

ಈ ಕೆಳಕಂಡ ಕಾಮಗಾರಿಗಾಗಿ ಬಿಡ್ ದಾಖಲೆಯಲ್ಲಿ ವಿವರಿಸಿದ ಆರ್ಥಿಕ ಮತ್ತು ತಾಂತ್ರಿಕ ಅರ್ಹತೆಯ ಅಗತ್ಯತೆಗಳನ್ನು ತೃಪ್ತಿಕರವಾಗಿ ಪೂರೈಸಿರುವ ಸಂಸ್ಥೆ/ಗುತ್ತಿಗೆದಾರರುಗಳಿಂದ ಶೇಕಡವಾರು ಟೆಂಡರನ್ನು ಕೆ.ಪಿ.ಪಿ.ಪಿ ಪೋರ್ಟಲ್: https://KPPP.karnataka.gov.in ಮೂಲಕ ಅಹ್ವಾನಿಸಲಾಗಿದೆ.

Tender Notification No: KUWSDB/EE/MYS/TEC/TA/AE-1/ 225 /2025-26, Dtd: 29-04-2025

ಕ್ರ.ಸಂ.01 ಕಾಮಗಾರಿಯ ಹೆಸರು: INDENT NO: KUWSDB/2025-26/SE0068 ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮೈಸೂರು ಕಛೇರಿಗೆ 1 ಸಂಖ್ಯೆ ಪದವೀಧರ ಸಿವಿಲ್ ಇಂಜಿನಿಯರ್ ರನ್ನು, 1 ಸಂಖ್ಯೆ ಕಾವಲುಗಾರ ರನ್ನು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಉಪ–ವಿಭಾಗ ಚಾಮರಾಜನಗರ ಕಛೇರಿಗೆ 1 ಸಂಖ್ಯೆ ಡೇಟಾ ಎಂಟ್ರಿ ಆಪರೇಟರ್ ರನ್ನು 12 ತಿಂಗಳ ರವರೆಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಕಾಮಗಾರಿ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ.):** 9,11,900 **ಬಿಡ್ ಭದ್ರತೆ ಜಿ.ಎಸ್.ಟಿ ಹೊರತುಪಡಿಸಿ (ರೂ.):** 22,800/– **ಟೆಂಡರ್ ಸಂಸ್ಕರಣ ಶುಲ್ಕ:** ಕೆ.ಪಿ.ಪಿ.ಪಿ ಪೋರ್ಟಲ್‌ನಂತೆ. **ಟೆಂಡರ್ ಅವಧಿ:** 12 ತಿಂಗಳು

Tender Notification No: KUWSDB/EE/MYS/TEC/TA/AE-1/ 226 /2025-26, Dtd: 29-04-2025

ಕ್ರ.ಸಂ.02 ಕಾಮಗಾರಿಯ ಹೆಸರು: INDENT NO: KUWSDB/2025-26/SE0069 ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮೈಸೂರು ಕಛೇರಿಗೆ 2 ಸಂಖ್ಯೆ ಡೇಟಾ ಎಂಟ್ರಿ ಆಪರೇಟರ್ ರನ್ನು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಉಪ–ವಿಭಾಗ ಮೈಸೂರು ಕಛೇರಿಗೆ 1 ಸಂಖ್ಯೆ ಡೇಟಾ ಎಂಟ್ರಿ ಆಪರೇಟರ್‌ರನ್ನು 12 ತಿಂಗಳ ರವರೆಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಕಾಮಗಾರಿ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ.):** 8,07,682.00 **ಬಿಡ್ ಭದ್ರತೆ ಜಿ.ಎಸ್.ಟಿ ಹೊರತುಪಡಿಸಿ (ರೂ.):** 20,200/– **ಟೆಂಡರ್ ಸಂಸ್ಕರಣ ಶುಲ್ಕ:** ಕೆ.ಪಿ.ಪಿ.ಪಿ ಪೋರ್ಟಲ್‌ನಂತೆ **ಟೆಂಡರ್ ಅವಧಿ:** 12 ತಿಂಗಳು

ಟೆಂಡರ್ ಕಾರ್ಯಸೂಚಿ: 1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 13.05.2025ರ 5:00 ಗಂಟೆಯವರೆಗೆ. **2)** ಟೆಂಡರ್‌ನ್ನು ತೆರೆಯುವ ದಿ: 15.05.2025 ರಂದು ಬೆಳಿಗ್ಗೆ 10.30ರ ಮೇಲೆ. ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಮೈಸೂರು
DIPR/DDMYS/124/KSMCA/103/2025-26